ಕಡೆಂಗೋಡ್ಲು ಶಂಕರ ಭಟ್ಟರು

ಬೆಲೆ:
1-6-0

ಎಪ್ರಿಲ್
1-೧ 47

ವಸಂತ ಪ್ರೇಮಿ ಮಂಡಲಿ, ಮಂಗಳೂರು

ವರ್ಷ ೧ ವಸಂತ ಮಾಲಿಕೆ ಪುಷ್ಪ ೧

ಗಾಜಿನ ಬಳೆ

ಮತ್ತು

ಇತರ ಕಥೆಗಳು

ಲೇಖಕರು:

ಕಡೆಂಗೋಡ್ಲು ಶಂಕರ ಭಟ್ಟರು

ವಸಂತ ಪ್ರೇಮಿ ಮಂಡಲಿ, ಮಂಗಳೂರು.

ಸಾಹಿತ್ಯಕ್ಕೆ ಸಲಹೆಗಾರರು:—

ಶ್ರೀ। ಮುಳಿಯ ತಿಮ್ಮಪ್ಪಯ್ಯನವರು.
ಶ್ರೀ। ಕಡೆಂಗೋಡ್ಲು ಶಂಕರ ಭಟ್ಟರು.
ಶ್ರೀ। ಸೇಡಿಯಾಪು ಕೃಷ್ಣ ಭಟ್ಟರು.

ಮಾಲಿಕೆಯ ಸಂಚಾಲಕರು:—

ವಸಂತ ಪ್ರೇಮಿ ಮಂಡಲಿ.
ಸಾಹಿತ್ಯ ಶಾಖೆಯ ಅಧ್ಯಕ್ಷೆಯರು,
ಶ್ರೀಮತಿ ಕೆ. ರಾಧಾಬಾಯಿ ಶೆಟ್ಟಿ.

ಮಾಲಿಕೆಯ ಸಲಹೆಗಾರರು

ಶ್ರೀ। ಎಸ್. ಮುಕುಂದ ರಾಯರು.
ಶ್ರೀ। ಪಿ. ಕೆ. ನಾರಾಯಣ, ಅವರು.

ಸಂಪಾದಕ

ಶ್ರೀನಿವಾಸ ಉಡುಪ

ಮಾರಾಟಗಾರರು

ದಿ ಇಂಡಿಯನ್ ಇಂಡಸ್ಟ್ರಿಯಲ್ಸ್ ಎಂಡ್ ಏಜನ್ಸೀಸ್,
ಪುಸ್ತಕ ವ್ಯಾಪಾರಿಗಳು,
ಕಾರ್ನಾಡು ಸದಾಶಿವರಾಯರ ರಸ್ತೆ, ಮಂಗಳೂರು.

ಮುದ್ರಕರು:—

ರಾಷ್ಟ್ರಬಂಧು ಮುದ್ರಣಾಲಯ,
ಕದ್ರಿರಸ್ತೆ, ಮಂಗಳೂರು.
P I C, S K—49--4-47-1000

ಪ್ರಕಾಶಕರು: —

ಬೆಸೆಂಟ್ ಬಾಲಿಕಾ ಪಾಠಶಾಲೆಯ
ಹಳೆಯ ವಿದ್ಯಾರ್ಥಿಗಳ ಸಂಘ,
ಕೊಡಿಯಾಲಬೈಲು, ಮಂಗಳೂರು.

ಪ್ರಸ್ತಾವ

ನಮ್ಮ ದಕ್ಷಿಣ ಕನ್ನಡದಲ್ಲಿ ಬರಹಗಾರರಿಗಾಗಲಿ, ಸುಸಂಸ್ಕೃತ ವಾದ ವಾಚನಾಭಿರುಚಿಗಾಗಲಿ ಕೊರತೆಯಿಲ್ಲವೆಂದು ಧೈರ್ಯದಿಂದ ಹೇಳಬಲ್ಲೆವಾದರೂ, ಸಾಹಿತ್ಯ ಪ್ರಕಾಶನದಲ್ಲಿ ಕನ್ನಡನಾಡಿನ ಇತರ ಭಾಗಗಳ ಸೋದರ ಸೋದರಿಯರಿಗಿಂತ ನಾವು ಬಹಳ ಹಿಂದುಳಿದಿರುವೆವೆಂಬುದರಲ್ಲೇನೂ ಸಂದೇಹವಿಲ್ಲ. ಗೆಲವಿನಿಂದ ಹೆಸರೆತ್ತಿ ತೋರಿಸ ಬಹುದಾದ ಒಂದೇ ಒಂದು ಸಾಹಿತ್ಯ ಪ್ರಧಾನವಾದ ಪತ್ರಿಕೆ ಇಂದು ನಮ್ಮಲ್ಲಿ ಜೀವಂತವಾಗಿಲ್ಲ; ಒಂದೇ ಒಂದು ಸುಂದರ ಗ್ರಂಥಮಾಲಿಕೆಯನ್ನು ನಾವು ಕಟ್ಟಿ ಕನ್ನಡ ತಾಯಿಗೆ ಮುಡಿಸಿರುವುದಿಲ್ಲ. ಇದೇನು ನಮ್ಮೂರ ಹವೆಯಲ್ಲಿ ಬದುಕದ ಬೆಳಸೇ? ಎಂದರೆ ಹಿಂದೆ ಹೀಗಿದ್ದಿಲ್ಲ. ಹೊಸಗನ್ನಡದ ಮೊದ ಮೊದಲ ಅಂಕುರಗಳು ಇಲ್ಲಿಯೇ ಹುಟ್ಟಿ ಬೆಳೆದುವು; ಮೊದಮೊದಲಿನ ಸಾಹಿತ್ಯ ಪತ್ರಿಕೆಗಳು ಇಲ್ಲಿಯೇ ಮೈಗೊಂಡುವು. ಆದುದರಿಂದ ಕೃಷಿಮಾಡಿದರೆ ಇಂದೂ ಅವು ಇಲ್ಲಿ ಬೆಳೆಯಬಲ್ಲುವೆಂಬುದರಲ್ಲಿ ಯಾರೂ ಸಂದೇಹಪಡಬೇಕಾಗಿಲ್ಲ; ಪ್ರಯತ್ನವೇನೋ ಬೇಕು, ಅಷ್ಟೆ.

ಈ ಪ್ರಯತ್ನಕ್ಕೆ ಹಿರಿಯರೇ ಮುಂದೆ ಬರಬೇಕೆಂದು ಕಾದು ಕುಳಿತುಕೊಳ್ಳುವ ತಾಳ್ಮೆ ಕಿರಿಯರಿಗೆ ಇಂದು ಇಲ್ಲವಾಗಿದೆ. ಆದರೆ ತಾಯಿ ಮಗುವನ್ನು ಮುಂದೆ ಮಾಡಿಯೇ ದಾರಿ ನಡೆಯುವವಳಲ್ಲವೆ? ಮುನ್ನಡೆಯುವ ಕಿರಿಯರಲ್ಲಿ ಹಿರಿಯರು ತಮ್ಮ ಬೆಂಬಲಕ್ಕಿರುವರೆಂಬ ಭರವಸೆ. ಜ್ಞಾತವಾಗಿಯೋ ಅಜ್ಞಾತವಾಗಿಯೋ ಇದ್ದೇ ಇರುವುದು. ಅದೇ ಒಂದು ಬಾಲ್ಯಸಹಜವಾದ ಧೀರತೆಯಿಂದಲೇ ಮಂಗಳೂರು ಬೆಸೆಂಟ್ ರಾಷ್ಟ್ರೀಯ ಬಾಲಿಕಾ ಪ್ರೌಢ ಪಾಠಶಾಲೆಯ ಹಳೆಯ ವಿದ್ಯಾರ್ಥಿಗಳ ಸಂಘವಾದ ವಸಂತ ಪ್ರೇಮಿ ಮಂಡಲಿಯು ಈ ವಸಂತ ಮಾಲಿಕೆಯನ್ನು ಹೊರಡಿಸುವ ಸಾಹಸಕ್ಕೆ ಕೈಯಿಕ್ಕಿದೆ. ಕನ್ನಡನಾಡಿನಲ್ಲಿ ಗ್ರಂಥ ಪ್ರಕಾಶನದ ಕಾರ್ಯವು ಎಂತಹ ಹೊಣೆಗಾರಿಕೆಯದೆಂಬುದರ ಅರಿವು ನಮಗೆ ಚೆನ್ನಾಗಿಯೇ ಇದೆ. ನಮ್ಮ ಈ ಪ್ರಯತ್ನವನ್ನು

ಸಫಲಗೊಳಿಸುವ ಭಾರವು ಕನ್ನಡನಾಡಿನ ಎಲ್ಲ ಬರಹಗಾರರನ್ನು ಮತ್ತು ಓದುಗರನ್ನು ಕೂಡಿದೆ.

ನಮ್ಮೂರ ಇತರ ಹಳೆಯ ವಿದ್ಯಾರ್ಥಿಗಳ ಸಂಘದವರು ಇಂದಿನ ತನಕ ಗ್ರಂಥಪ್ರಕಾಶನಕ್ಕೆ ಕೈಹಾಕಲಿಲ್ಲವಾದರೂ ನಾವು ಸ್ವಲ್ಪ ಹೆಚ್ಚು ಧೈರ್ಯದಿಂದ ಈ ಕೆಲಸವನ್ನು ಆರಂಭಿಸಿದ್ದೇವೆ. ನಾಡಿನ ಹಿರಿಯ ಕಿರಿಯ ಸಾಹಿತಿಗಳ ಎಲ್ಲ ವಿಧದ ಸಾಹಿತ್ಯವನ್ನು ಕನ್ನಡಿಗರ ಮುಂದಿಡುವಾಗ ವಿದ್ಯಾರ್ಥಿಗಳಿಗೆ ಭಾಷಾಭ್ಯಾಸದ ದೃಷ್ಟಿಯಿಂದ ಯೋಗ್ಯವೆನಿಸುವ ಪುಸ್ತಕಗಳನ್ನೂ ಪ್ರಕಟಿಸಬೇಕೆಂದಿರುವೆವು. ಅಲ್ಲದೆ ಕನ್ನಡ ನಾಡಿನ ಬರಹಗಾರ್ತಿಯರ ಕೃತಿಗಳಿಗೆ ವಿಶೇಷವಾದ ಸ್ವಾಗತವನ್ನೀಯುವೆವು.

ಇನ್ನೊಂದು ಸಂತೋಷದ ಮಾತು. ಅಖಿಲ ಕರ್ನಾಟಕದ ಸುಪ್ರಸಿದ್ಧ ಕವಿಗಳೂ ಬರಹಗಾರರೂ ಆಗಿರುವ ಶ್ರೀ। ಕಡೆಂಗೋಡ್ಲು ಶಂಕರ ಭಟ್ಟರ ಕತೆಗಳ ಸಂಗ್ರಹವನ್ನು ನಮ್ಮ ಈ ವಸಂತ ಮಾಲಿಕೆಯ ಮೊದಲನೆಯ ಹೂವಾಗಿ ಪೋಣಿಸುವ ಸುಯೋಗವು ನಮಗೊದಗಿದುದು ಮುಂದಿನ ಶುಭಸೂಚನೆಯೆಂದೇ ನಾವು ತಿಳಿಯುತ್ತೇವೆ. ಅದಕ್ಕಾಗಿ ನಾವು ಅವರನ್ನು ಹೃತ್ಪೂರ್ವಕವಾಗಿ ವಂದಿಸುತ್ತೇವೆ.

ಹೊದಿಕೆಯ ಚಿತ್ರವನ್ನು ಬರೆದುಕೊಡುವುದರ ಮೂಲಕ ಪುಸ್ತಕದ ಅಂದಕ್ಕೆ ಕಾರಣರಾದ ಕಲಾವಿದ ಶ್ರೀ। ರಾಜಾರಾಯರಿಗೆ ನಮ್ಮ ಧನ್ಯವಾದಗಳು. ಅಲ್ಲದೆ ಸ್ವಲ್ಪ ಸಮಯದಲ್ಲಿ ಸುಂದರವಾಗಿ ಈ ಪುಸ್ತಕವನ್ನು ಅಚ್ಚುಹಾಕಿಸಿ ಕೊಟ್ಟ ರಾಷ್ಟ್ರಬಂಧು ಮುದ್ರಣಾಲಯದ ವ್ಯವಸ್ಥಾಪಕರಿಗೂ ನಮ್ಮ ಕೃತಜ್ಞತೆಗಳು ಸಲುವವು.

ಕೊನೆಯದಾಗಿ, ಕನ್ನಡ ನಾಡಿನ ಹಿರಿಯ ಕಿರಿಯ ಬರಹಗಾರರೆಲ್ಲರೂ ತಮ್ಮೊಂದು ಹೂವನ್ನು ಈ ಮಾಲಿಕೆಗೆ ಪೋಣಿಸುವುದರ ಮೂಲಕ ಇದರ ಸೌರಭವನ್ನು ಹೆಚ್ಚಿಸಬೇಕಾಗಿ ಪ್ರಾರ್ಥಿಸುತ್ತೇವೆ.

ಬೆಸೆಂಟ್ ಶಾಲೆ,
೯—೪—'೪೭.
(ವಸಂತೋತ್ಸವ)

ಸಂಪಾದಕ.

ನಮ್ಮ ಮುಂದಿನ ಪುಸ್ತಕಗಳು

ಹಳೆಮೊಗಳು—ಕಥಾ ಸಂಗ್ರಹ

ಲೇಖಕರು—ಶ್ರೀ। ಸೇಡಿಯಾಪು ಕೃಷ್ಣಭಟ್ಟರು

ವೀರ ಬಂಕೇಯ – ಐತಿಹಾಸಿಕ ಕಾದಂಬರಿ

ಲೇಖಕರು—ಶ್ರೀ। ಮುಳಿಯ ತಿಮ್ಮಪ್ಪಯ್ಯನವರು

ದೇಹ ಜ್ಯೋತಿಗಳು—ಲಘು ನಿಬಂಧಗಳು

ಲೇಖಕರು—ಶ್ರೀ। ಶಿವರಾಮ ಕಾರಂತರು

ಜನತಾ ಜನಾರ್ದನ—ರಾಜಕೀಯ ಕಾದಂಬರಿ

ಲೇಖಕರು—ಶ್ರೀ। "ಭಾರತೀ ಸುತ" ಅವರು.

ಇತ್ಯಾದಿ — ಇತ್ಯಾದಿ

ಪರಿವಿಡಿ

ಗಾಜಿನ ಬಳೆ

ಬಾದರಾಯಣ ಶಾಸ್ತ್ರಿಗಳು ಬೆಳಗ್ಗೆ ಎದ್ದು ಸ್ನಾನಾಹ್ನಿಕಗಳನ್ನು ತೀರಿಸಿ ಮೋರೆಯ ಉದ್ದಗಲಕ್ಕೂ ಭಸ್ಮ ಬಳಿದು ಹೊರ ಚಾವಡಿಯಲ್ಲಿ ಕುಳಿತು ಭಗವದ್ಗೀತೆಯನ್ನು ಓದುತ್ತಿದ್ದರು ನಾಲ್ಕೈದು ನಿಮಿಷ ಗೀತಾ ಶ್ಲೋಕಗಳ ಮೇಲೆ ಧ್ಯಾನ ಬಿತ್ತೊ ಇಲ್ಲವೊ, ಎನ್ನುವಷ್ಟರಲ್ಲಿ ಅಂಗಳದ ಮೆಟ್ಟಿಲನ್ನೇರುತ್ತಾ ಹತ್ತಿಪ್ಪತ್ತು ಮಂದಿ ಯುವಕರು ಅವರನ್ನೆ ಲಕ್ಷಿಸಿಕೊಂಡು ಬಂದರು. ಇದೇನಾಶ್ಚರ್ಯ! ಎಂದು ಶಾಸ್ತ್ರಿಗಳಿಗೆ ತಿಳಿಯಲಿಲ್ಲ. ಸ್ವಲ್ಪ ಗಲಿಬಿಲಿಯಾಯಿತು ಚಿಕ್ಕ ಪಾಣಿಪಂಚೆಯನ್ನುಟ್ಟು ಹರುಕು ಚಾಪೆಯ ಮೇಲೆ ಧ್ಯಾನಮಗ್ನರಾಗಿ ಕುಳಿತಿದ್ದವರು, ತಟ್ಟನೆ ಎದ್ದು ಒಳಗೆ ಓಡಿ ಒಂದು ಜುಬ್ಬದ ಒಳಗೆ ಮೈಯನ್ನು ತುರುಕಿಸಿಕೊಂಡರು ಪಂಚೆಯ ಬದಲು ದೋತರದ ಕಚ್ಚೆಯಾಯಿತು. ಏಕಾಂತದ ವೇಷ ಹೋಗಿ ಸ್ವಾಗತ ಕೊಡುವ ಉಡುಗೆಯನ್ನುಟ್ಟಾಯಿತು. ಗಡಿಬಿಡಿಯಲ್ಲಿ ಸೇಂಕುತ್ತಾ, ಇಡಿ ಚಾವಡಿಯನ್ನಾಕ್ರಮಿಸಿದ್ದ ಅಷ್ಟು ಜನರ ಮುಂದೆ ನಿಲ್ಲುವುದೆಂದರೆ ಅವರ ಮನಸ್ಸು ಅಳುಕಿತು ಹುಡುಕುತ್ತಿದ್ದ ಕಳ್ಳನ ತುಬ್ಬು ಆಯಿತೆನ್ನುವಷ್ಟು ಉತ್ಸಾಹದಿಂದ, ಇಷ್ಟು ಮಂದಿ ಪರಸ್ಪರ ಮುಖಾವಲೋಕನ ಮಾಡುತ್ತಾ ಮುಖಭಾವದಲ್ಲಿ ಸಂತೋಷ ಪ್ರದರ್ಶನ ಮಾಡಿದರು. ಈ ಸಂತೋಷವೇಕೆ? ಇಷ್ಟು ಸಡಗರವೇಕೆ? ಇಷ್ಟು ಜನರು ಒಂದಾಗಿ ಬರಬೇಕೇಕೆ? ತಾವೇನು ಅಪರಾಧ ಮಾಡಿದ್ದೇವೆ? ಅವರಿಗೆ ತಿಳಿಯಲಿಲ್ಲ. ಸಂಗತಿಯೇನೂ ಇರಲಿ; ತಾವು ನಿರಪರಾಧಿಗಳು—ಎಂಬ ಧೈರ್ಯದಿಂದ ಅವರು ಆಗಂತುಕರನ್ನು ಇದಿರಿಸಲು ಸಿದ್ಧರಾಗಿಯೇ ಇದ್ದರು.

ಇಷ್ಟು ಜನರು ತಮ್ಮ ಮೇಲೆ ಆರೋಪಣೆ ಮಾಡಲು ಬಂದವರಲ್ಲ; ಕಳ್ಳನನ್ನು ತುಬ್ಬು ಮಾಡಲು ಬಂದವರಲ್ಲ; ಕೊಲೆಸುಲಿಗೆಗೆ ಬಂದವರಲ್ಲ; ಠಕ್ಕರಲ್ಲ; ಪಿಂಡಾರಿಗಳಲ್ಲ; ಬ್ರಿಟಿಷ ಸಾಮ್ರಾಜ್ಯದ ಕೃಪಾಶ್ರಯದಲ್ಲಿರುವ ನಮಗೆ ಅಂತಹ ಭೀತಿಗೇನೂ ಕಾರಣವಿಲ್ಲ; ಎಂಬ

ಜ್ಞಾನೋದಯವಾಗುತ್ತಲೇ ಅವರ ಶ್ವಾಸೋಚ್ಛ್ವಾಸ ರಭಸವು ಇಳಿಯುತ್ತಾ ಬಂದು, ಮುಂದೆ ಕೆಲ ಮಂದಿ ತರುಣರು ಗೋಚರಿಸಿದರು; ಇವರಲ್ಲಿ ಹಲವರು ಅವರ ವಿದ್ಯಾರ್ಥಿಗಳೇ ಆಗಿದ್ದರು. ಈಗ ತಾನೇ ಸ್ವಲ್ಪ ಧೈರ್ಯ ಬಂದರೂ ನಾಲಗೆ ಗಂಟಲ ಬುಡದಲ್ಲಿ ಸುರುಟಿಕೊಂಡಿದ್ದುದರಿಂದ ಫಕ್ಕನೆ ಮಾತು ಬರಲಿಲ್ಲ. ಅಷ್ಟರಲ್ಲಿ ಆಗಂತುಕರ ಮಧ್ಯದಿಂದ ಸ್ತ್ರೀಕಂಠವೊಂದು "ಶಾಸ್ತ್ರಿಗಳೇ! ನನ್ನ ಪರಿಚಯವೇ ಇಲ್ಲ ಅಲ್ಲವೆ? ಮಾತಾಡುವ ಕಾಲದಲ್ಲಿ ತುಂಬ ಪರಿಚಯ; ಕೆಲಸದ ಕಾಲ ಬಂದಾಗ ಪರಿಚಯ ಮರೆತು ಹೋಗುತ್ತದಲ್ಲವೆ?" ಎಂದು ಅಪಹಾಸ್ಯದ ಮಾತನ್ನಾಡಿತು. ಆಗ ಅವಳ ಜೊತೆಯಲ್ಲಿದ್ದವರು "ಭಾರತ ಮಾತಾಕೀ ಜೈ" ಎಂದು ಘೋಷಿಸಿದರು

ಇದರಿಂದ ಶಾಸ್ತ್ರಿಗಳ ಚಿತ್ತಕ್ಷೋಭೆ ಕಡಿಮೆಯಾಗಲಿಲ್ಲ. ಹೊರಟು ಬರಬಹುದಾಗಿದ್ದ ಮಾತು ಗಂಟಲಿಗೇ ಇಳಿಯುವ ಹಾಗಾಯಿತು ಬಾಯಿ ಮುಚ್ಚಿ ಬೆಪ್ಪಗೆ ನಿಂತ ಅವರ ಮುಂದೆ —ಆ ಸ್ತ್ರೀವ್ಯಕ್ತಿ ಎದ್ದು ನಿಂತು "ಶಾಸ್ತ್ರಿಗಳೇ! ಒಮ್ಮೆ ದಯಮಾಡಿ ಈ ಕಡೆಗೆ ದೃಷ್ಟಿ ಬೀರಿರಿ!" ಎಂದು ಬಿನ್ನೈಸಿದಳು.

ಶಾಸ್ತ್ರಿಗಳು ದೃಷ್ಟಿ ಬೀರದೆ ಹೇಗಿದ್ದಾರು?

"ನಾನು ಯಾರೆಂದು ತಿಳಿಯಿತೆ?"

ಅವಶ್ಯವಾಗಿ ತಿಳಿದಿದ್ದರು. ಅವಳೆ ಇವಳು....ಅವರ ಶಿಷ್ಯೆ........ ಪಟ್ಟದ ಶಿಷ್ಯೆ ಮಾಲಿನಿ........

"ಯಾರು ಮಾಲಿನಿ?"

"ಸಂದೇಹವೇಕೆ?....ಹೌದು....ನಿಮ್ಮ ಕರ್ಮಯೋಗದ ಭಾಷಣಗಳನ್ನು ಕೇಳಿ ಕೇಳಿ ಮೆಚ್ಚಿದವಳು."

ಶಾಸ್ತ್ರಿಗಳಿಗೆ ಮತ್ತೊಮ್ಮೆ ಸ್ವಲ್ಪ ಧೈರ್ಯ ಬಂತು. "ಕುಳಿತುಕೊಳ್ಳಿ" ಎಂದು ಸಕಲರಲ್ಲಿಯೂ ಕೇಳಿಕೊಂಡರು. ಮಾಲಿನಿಯಲ್ಲದೆ ಉಳಿದವರು ಈ ಮುಂಚೆಯೇ ನೆಲಕ್ಕೆ ಗಟ್ಟಿಯಾಗಿ ಅಂಟಿಕೊಂಡು ಕುಳಿತಿದ್ದರು. ಮಾಲಿನಿಯೂ ಕುಳಿತು ಕೊಂಡಳು

"ಇಷ್ಟು ಮಂದಿ ಒಟ್ಟಾಗಿ ಬಂದಿರೇಕೆ? ರತ್ನಾಕರ ರಾಯರಿ

ದ್ದಾರೆ. ದಯಾನಂದ ನಾಯಕರಿದ್ದಾರೆ; ಕೃಷ್ಣೋಪಾಧ್ಯಾಯರ ಮುಖವೂ ಕಾಣಿಸುತ್ತಿದೆ. ಇದೇನು ಇಷ್ಟೆಲ್ಲ ಮಂದಿ ಮನೆಯೊಳಗೆ ನುಗ್ಗಿ ಸುಲಿಗೆ ಮಾಡುತ್ತೀರಾ?" ಎನ್ನುವಷ್ಟು ಶಾಸ್ತ್ರಿಗಳಿಗೆ ನಾಲಗೆಯ ಮೇಲೆ ಅಂಕೆ ಬಂತು.

"ಸುಲಿಗೆ!....ನಾವು ಶುದ್ಧ ಅಹಿಂಸಾವಾದಿಗಳು...."

"ಅಹಿಂಸೆಗೆ ಪ್ರಪಂಚದಲ್ಲಿ ಯಾವ ಸ್ಥಾನವೊ....ಇನ್ನೂ ಇತ್ಯರ್ಥವಾಗಲಿಲ್ಲ" ಎಂದರು ಶಾಸ್ತ್ರಿಗಳು....

"ಇತ್ಯರ್ಥ ಮಾಡಲು ಸಾಮರ್ಥ್ಯವುಳ್ಳವರು ಮಾಡಿಕೊಳ್ಳುತ್ತಾರೆ....ಸದ್ಯಕ್ಕೆ ನಾವಿಲ್ಲಿಗೆ ಬಂದ ಉದ್ದೇಶ....ತಮ್ಮನ್ನು ಸಂಭಾವಿಸುವುದು...."

"ಏನು ಸಂಭಾವನೆಯೋ ಈ ಗೊಡ್ಡು ಶಿಕ್ಷಕರಿಗೆ... ಉಪಾಧ್ಯಾಯರನ್ನು ಕಸಗುಡಿಸುವ ರಾಮು ಎಂದು ಭಾವಿಸುವ ವಿದ್ಯಾರ್ಥಿಗಳಲ್ಲದೆ ಗುರುಗಳೆಂದು ಮರ್ಯಾದೆ ಮಾಡುವವರು ಯಾರು ಈ ಯುಗದಲ್ಲಿ?"

"ಗುರುಗಳಂತಲ್ಲವೆ ಶಿಷ್ಯರು?"

"ಗುರುಗಳಷ್ಟಾದರೂ ಶಿಷ್ಯರಲ್ಲಿ ಯೋಗ್ಯತೆ ಇದ್ದರೆ ಎಷ್ಟೋ ಉಪಕಾರವಾಗುತ್ತಿತ್ತಲ್ಲವೆ?"

"ಗುರುಗಳಂತೆಯೇ ಶಿಷ್ಯರು ಮಾಡಿಬಿಟ್ಟರಲ್ಲವೆ? ಲೋಕಕ್ಕೆ ಉಪಕಾರವಾಯಿತಲ್ಲವೇ?"

"ಏನನ್ನು ಮನಸ್ಸಿನಲ್ಲಿಟ್ಟುಕೊಂಡು ಆಡುತ್ತೀರೋ ತಿಳಿಯೆನಲ್ಲ"

"ನಮ್ಮ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಚಳವಳ ಏಳಬಹುದಾಗಿತ್ತು; ಅದನ್ನು ಅರ್ಧಮರ್ಧ ಮುರಿದು ಹಾಕಿದ ಯಶಸ್ಸು ನಿಮ್ಮದೇ ಅಲ್ಲವೇ?"

"ಯಶಸ್ಸೊ ಅಪಯಶಸ್ಸೊ ಯಾರು ಬಲ್ಲರು? ನಾನೋ ಮಾಡಿದ್ದೇನೆ; ಭಗವದ್ಗೀತೆಯಲ್ಲಿ ಹೇಳಿದಂತೆ ಫಲಾಪೇಕ್ಷೆಯಿಲ್ಲದೆ ಸಾಧ್ಯವಾದುದನ್ನು ಮಾಡಿದ್ದೇನೆ!"

"ನೀವು ಸಾಧ್ಯವಾದುದನ್ನೆಲ್ಲ ಮಾಡಿದ್ದೀರಿ; ನಾವು ಸಾಧ್ಯವಾದ

ಸಂಭಾವನೆಯನ್ನು ಕೊಡಬೇಡವೇ?” ಎನ್ನುತ್ತಾ ಮಾಲಿನಿ, ತನ್ನ ಸೆರಗಿನೊಳಗೆ ಇಟ್ಟುಕೊಂಡಿದ್ದ ಕರಡಿಗೆಗೆ ಕೈಹಾಕಿದಳು.

ಮಾಲಿನಿಯ ಸೆರಗು! ಅದು ಆವರಿಸಿಕೊಂಡಿದ್ದ ಆಕೆಯ ಹೃದಯ ಸಾಮ್ರಾಜ್ಯದಲ್ಲಿ ಎಂತಹ ನಂದನವಿದೆ? ಎಂಬುದನ್ನು ಶಾಸ್ತ್ರಿಗಳು ಬಲ್ಲರು....ಅವಳು ಕೈಹಾಕುವಾಗ ಅವರ ಕಣ್ಣುಗಳೆರಡೂ ಆ ಕೈಯನ್ನು ಬಳಸಿದುವು.

ಅರ್ಧ ಸಂತೋಷದಿಂದ ಅರ್ಧ ಆಶ್ಚರ್ಯದಿಂದ “ಏನು ಅಸಾಹುತವಿದು ಮಾಲಿನಿ....ಏನೆಲ್ಲ ತಂದಿದ್ದೀರಿ? ಯಾಕೆ ಇಷ್ಟು ಕಷ್ಟಪಟ್ಟಿದ್ದೀರಿ?” ಎಂದು ಶಾಸ್ತ್ರಿಗಳು ಕೇಳಿದರು.

“ಕಷ್ಟವೇನೂ ಇಲ್ಲ ಬರುವಾಗ ತೇರುಬೀದಿಯಲ್ಲಿಯೆ ದೊರಿಯಿತು. ಇದಕ್ಕಾಗಿ ಬಲುದೂರ ಹುಡುಕಬೇಕಾಗಿರಲಿಲ್ಲ”

“ಯಾವುದಕ್ಕಾಗಿ!”

“ಈಗ ನಾವೊಪ್ಪಿಸುವ ಕಾಣಿಕೆಗಾಗಿ!”

ಮಾತಾಡುತ್ತಿದ್ದಂತೆಯೇ ಮಾಲಿನಿ ಕರಡಿಗೆಯನ್ನು ಹೊರಕ್ಕೆಳೆದಳು. ಅದರ ಮುಚ್ಚಳವನ್ನು ಬಿಚ್ಚಿದಳು “ಶಾಸ್ತ್ರಿಗಳೆ....ಏನೆಂದು ಯೋಚಿಸಿದ್ದೀರಿ....ಹೆಚ್ಚೇನೂ ನಷ್ಟಪಡಲಿಲ್ಲ. ಕಷ್ಟವನ್ನೂ ಪಡಲಿಲ್ಲ.... ಇಂತಹ ವಸ್ತುಗಳು ಈಗ ದೊರೆಯುವುದು ಅಪರೂಪ ನೋಡಿ....ಜಪಾನಿನಿಂದ ಬಂದವುಗಳಾದ ಕಾರಣ ಮೂರು ಕಾಸು ಬೆಲೆಗೆ ಸಿಕ್ಕಿದುವು..” ಎನ್ನುತ್ತಾ ಬಲು ಚಂದವಾಗಿ ತಳತಳಿಸುವ ಬಳೆಗಳನ್ನು ಹೊರ ತೆಗೆದು ಸೂರ್ಯನ ಬೆಳಕಿನಲ್ಲಿ ಎತ್ತಿಹಿಡಿದು ತೋರಿಸಿದಳು. ...‘ಊ್ಹಕ್’.... ಎಂದು ಉಳಿದವರು ನಕ್ಕರು.

“ಬಳೆ ತೊಡುವ ಜನ ನಮ್ಮ ಮನೆಯೊಳಗೆ ಯಾರೂ ಇಲ್ಲವಲ್ಲ!” ಎಂದು ಶಾಸ್ತ್ರಿಗಳೂ ನಗುತ್ತಾ ನುಡಿದರು.

“ಯಾರೂ ಇಲ್ಲವೆ? ನೀವೇ ಅದಕ್ಕೆ ಅರ್ಹರು....ವಿದ್ಯಾರ್ಥಿಗಳ ಭಕ್ತಿಯ ಕಾಣಿಕೆಗಳು” ಎಂದು ಮಾಲಿನಿ ಕೋರೆ ಕೊಂಕಿನ ಧ್ವನಿಯಲ್ಲಿ ಆಡಿದಾಗ, ಸಂಗಡಿಗರ ನಗುವಿನಿಂದ ಇಡೀ ಮನೆ ಪ್ರತಿಧ್ವನಿಸುವಂತಾಯಿತು.

"ಗಂಡುಸರು ಗಾಜಿನ ಬಳೆ ತೊಡಬೇಕೆಂದು ಯಾವ ಶಾಸ್ತ್ರದಲ್ಲಿದೆ?" ಎಂದು ಶಾಸ್ತ್ರಿಗಳು ಮುಖ ಕೆಂಪು ಮಾಡಿ ಕೇಳಿದರು.

"ಕರ್ಮಯೋಗದಲ್ಲಿ"

"ಅಪಮಾನ ಮಾಡುತ್ತೀರಿ" ಎಂದು ಶಾಸ್ತ್ರಿಗಳು ಕೋಪದಿಂದ ಮುಖ ತಿರುಗಿಸಿದರು.

"ಇದರಲ್ಲಿ ಅಪಮಾನ ಲವಲೇಶದಷ್ಟು ಇಲ್ಲ. ತಾವು ನಮ್ಮ ಪಾಠಕಾಲದಲ್ಲಿ ಅನೇಕವೇಳೆ ಕರ್ಮಯೋಗದ ಹಿರಿಮೆಯನ್ನು ಎತ್ತಿ ಎತ್ತಿ ಹೇಳುತ್ತಿದ್ದಿರಿ ದೇಶಕ್ಕೆ ಬೆಂಕಿಹಿಡಿದಾಗ ಅದನ್ನಾರಿಸುವುದಕ್ಕೆ ಪ್ರತಿಯೊಂದು ಸಜೀವ ವ್ಯಕ್ತಿ ಸಿದ್ಧವಾಗಿ ಬರಬೇಕು; ಇದೂ ಕರ್ಮಯೋಗ, ಎಂದು ನಿಮ್ಮ ವಿದ್ಯಾರ್ಥಿಗಳಾಗಿದ್ದ ನಾವು ಭಾವಿಸಿದೆವು. ವಿದ್ಯಾರ್ಥಿಗಳು ಶಾಲೆ ಬಿಟ್ಟು ಹೊರಡಬಾರದು; ಅಧ್ಯಾಪಕರು ಮನೆ ಬಿಟ್ಟು ಅಂಗಳಕ್ಕೆ ಕಾಲಿಡಬಾರದು—ಎಂದು ತಮ್ಮ ಜೀವನಾದರ್ಶವು ಸಾರಿಹೇಳಿತು. ಗಂಡಸರು ಹೆಂಗಸರಂತೆ ಅಡಿಗೆ ಕೋಣೆಯೊಳಗೆ ಅವಿತು ಕುಳಿತಿರುವುದೂ ಕರ್ಮಯೋಗವೆಂಬ ತಮ್ಮ ಮಾತಿಗೆ ಒಪ್ಪಿಗೆ ಕೊಡುತ್ತೇವೆ. ಆ ಒಪ್ಪಿಗೆಯ ಸೂಚನಾರ್ಥವಾಗಿ ಈ ಗಾಜಿನ ಬಳೆಗಳು"—ಎಂದು ಮಾಲಿನಿ ವಾಗ್ಧಾಟಿಯ ರಭಸವನ್ನು ಹೆಚ್ಚಿಸಿ ಆಡಿದಾಗ ಆಕೆಯ ಸಂಗಡಿಗರೆಲ್ಲ ಜಯಕಾರ ಮಾಡಿದರು.

ಇತರರು ಹೀಗೆ ಲಜ್ಜಾಸ್ಪದ ರೀತಿಯಲ್ಲಿ ವ್ಯವಹರಿಸಿದ್ದರೆ, ಶಾಸ್ತ್ರಿಗಳು ಫಲಾಫಲಗಳನ್ನೆಣಿಸದೆ ಡೊಣ್ಣೆ ಹಿಡಿಯುತ್ತಿದ್ದರು. ಆದರೆ ಈ ತುಂಟ ಹುಡುಗರ ನೆರವಿಯ ನಡುವೆ ನಿಂತಿದ್ದಾಳೆ ಆ ಮಾಲಿನಿ! ತಮಗೂ ಮಾಲಿನಿಗೂ ಗುರುಶಿಷ್ಯ ಸಂಬಂಧವಲ್ಲದೆ ಇನ್ನೇನೋ ಒಂದು ಬಗೆಯ ಹೃದಯ ಸಂಬಂಧವೂ ಇದ್ದಂತೆ ಭಾಸವಾಗಿತ್ತು. ಆಕೆಯ ಉದ್ಧತ ಸ್ವಭಾವವನ್ನು ನೋಡುವಾಗ ಕೆನ್ನೆಗೆ ಬಲವಾಗಿ ಎರಡೇಟು ಕೊಡೋಣ—ಎನಿಸುತ್ತದೆ ....ಆದರೆ ಮಾಲಿನಿ....ಎಂಬ ಮೂರಕ್ಷರಗಳ ಸಂಯೋಜನೆಯಲ್ಲಿ ಏನೋ ಒಂದು ಬಗೆಯ ಹೃದಯ ವಿದ್ರಾವಕ ಗುಣವಿದೆ. ಅದರ ಮುಂದೆ ಕೋಪವೆಲ್ಲಿ? ತಾಪವೆಲ್ಲಿ?

ಪ್ರಕೃತಕ್ಕೆ ನಿರುತ್ತರವಾದ ತಾಟಸ್ಥ್ಯವನ್ನು ವಹಿಸುವುದೇ ವಿಹಿತ

ವೆಂದು ಶಾಸ್ತ್ರಿಗಳು ಸುಮ್ಮನೆ ನಿಂತಿದ್ದರು. ಮಾಲಿನಿ ಅಲ್ಲಿರುವಾಗ ಮನೆಯೊಳಗೆ ನುಗ್ಗಿ ಒಳಗಿನಿಂದ ಅಗುಳಿ ಬಲಿದರೆ ಆಕೆಗೆ ಅಪಮಾನ ವಾದೀತೆಂದು ಶಾಸ್ತ್ರಿಗಳು ಅಲ್ಲೇ ನಿಂತಿದ್ದರಲ್ಲದೆ ಬೇರೆ ಕಾರಣಗಳಿಂದಲ್ಲ. ಬೇರೆ ತುಂಟ ಹುಡುಗರಲ್ಲಿ ಯಾವ ಗುಣವೂ ಇಲ್ಲ. ತಮ್ಮನ್ನು ರೇಗಿಸುವುದಕ್ಕಾಗಿ 'ಭಾರತ ಮಾತಾಕೀ ಜೈ'—'ಗಾಂಧಿಕೀ ಜೈ'— ಎಂದೂ ನಡುನಡುವೆ 'ಶಾಸ್ತ್ರೀಕೀ ಜೈ' ಎಂದೂ ಕೂಗುತ್ತಿದ್ದಾರೆ. ಅಲಕ್ಷ್ಯವೇ ಇದಕ್ಕೆ ಪ್ರತೀಕಾರವೆಂದು, ಕೇಳಿದರೂ ಕೇಳದಂತೆ ಶಾಸ್ತ್ರಿಗಳು ನಿಂತಿದ್ದರು. ನಾಲ್ಕೈದು ನಿಮಿಷ ಕಂಠಶೋಷಣ ಮಾಡಿದ ಮೇಲೆ ಹುಡುಗರ ತಂಡ ಹೊರಟಿತು ಮಾಲಿನಿಯೂ ಹೊರಟಳು. ಮಾಲಿನಿಯೂ ಅವಳ ನೆರಳೂ ತಮ್ಮ ಅಂಗಳಕ್ಕೂ ಅಂಗಳದಿಂದ ಬೀದಿಗೂ ಇಳಿಯುವುದನ್ನು ಕಂಡು ಶಾಸ್ತ್ರಿಗಳಿಗೆ ತಮ್ಮ ಅವಸ್ಥೆಯೇನೆಂಬುದು ತಿಳಿದು ಬಂತು. ಪ್ರಪಂಚದಲ್ಲಿ ಏನೋ ಒಂದು ಶೂನ್ಯತೆಯು ತಮ್ಮನ್ನು ಇದಿರಿಸುವ ಸಂಭವಕ್ಕಾಗಿ ಅವರು ಹೆದರಿದರು

ಅವರೆಲ್ಲರೂ ಹೊರಟುಹೋದ ಮೇಲೆ, ಆ ಕರಡಿಗೆಯನ್ನು ಎತ್ತಿಕೊಂಡು—"ಇದೊಂದು ಸ್ಮಾರಕವಾಗಿರಲಿ" ಎಂಬ ಭಾವನೆಯಿಂದ ತಮ್ಮ ಪೆಟ್ಟಿಗೆಯೊಳಗೆ ಸೇರಿಸಿಕೊಂಡರು.

ಪೆಟ್ಟಿಗೆಯೊಳಗೆ ಸೇರಿಸಿಕೊಂಡರು. ಆದರೆ ಮನಸ್ಸೊ ...ಅದು ಜಯಕಾರ ಮಾಡುತ್ತಿದ್ದ ಆ ಗುಂಪಿನ ಸನಿಹವನ್ನು ಹುಡುಕುತ್ತಾ ಮುಂದೆ. ಮುಂದೆ, ಬಲು ಮುಂದೆ, ಬೀದಿ ಬೀದಿಗಳಲ್ಲಿ ಅಲೆದಾಡಿತು.

* * * * *

ಆಚಾರ ಸಂಪ್ರದಾಯಗಳಲ್ಲಿ, ವೇಷಭೂಷಣಗಳಲ್ಲಿ ಹೊಸತು ಹಳೆಯದು ಎಂದು ಭೇದಿಸಬಹುದು, ಆದರೆ ಪ್ರೇಮ ಯಾವಾಗಲೂ ಏಕರೂಪವೆ. ಅದಿತಿ-ಕಶ್ಯಪರ ಕಾಲದ ಮೊದಲುಗೊಂಡು ಇಂದಿನವರವರೆಗೆ ಎಲ್ಲರೂ ಒಂದೇ ರೀತಿಯಲ್ಲಿ ಒಲಿದಿದ್ದಾರೆ; ಒಲಿಸಿದ್ದಾರೆ; ಎಂದರೆ ದೊಡ್ಡ ಅಪರಾಧವಾಗದು. ಜುಟ್ಟು ಇಟ್ಟುಕೊಂಡವರು ಜುಟ್ಟಿನ ಸಮೇತ, ಪ್ರೇಮಯಾಚನೆ ಮಾಡಿದ್ದಾರೆ. ಕೊಚ್ಚು ಕೂದಲಿನವರು ಅದರೊಂದಿಗೇ ಪ್ರಣಯ ಘಾಟಿಯಲ್ಲಿ ಹೊರಟಿದ್ದಾರೆ. ಎಂದರೆ

ವ್ಯಕ್ತಿಗಳ ಹೆಸರಿನಲ್ಲಿ ಮಾತ್ರ ವ್ಯತ್ಯಾಸ ಎಂದಾಯಿತು. ಬಾದರಾಯಣ ಶಾಸ್ತ್ರಿಗಳು ಸಂಪ್ರದಾಯನಂತರ ಮನೆತನದಲ್ಲಿ ಹುಟ್ಟಿ ಬಂದವರಾಗಿ, ಆಚಾರ ನಿಷ್ಠೆಗಳಿಗೆ ಹೆಚ್ಚು ಗಮನ ಕೊಡುತ್ತಿದ್ದವರ ಔರಸಪುತ್ರರಾಗಿ ಇಂಗ್ಲಿಷ್ ವಿದ್ಯೆಗೆ ಒಲಿಯುವಾಗಲೂ, ಕತ್ತರಿಸದ ಕಿರಿಯ ಜುಟ್ಟಿನಲ್ಲಿ ಸಂಪ್ರದಾಯವನ್ನು ತೂಗಹಾಕಿ ಉಳಿಸಿಕೊಂಡು, ಕಾಲೇಜಿನಲ್ಲಿ ಪಾಠ ಹೇಳುತ್ತಿದ್ದರು. ಸಹಶಿಕ್ಷಣದ ಪಾಠಶಾಲೆ; ಶಾಸ್ತ್ರಿಗಳು ಆಂಗ್ಲಭಾಷೆ ಯನ್ನು ಕಲಿಸುತ್ತಾರೆ; ಮಾಲಿನಿ ವಿದ್ಯಾರ್ಥಿಗಳಲ್ಲಿ ಅಗ್ರಳೆಯವಳು. ಪಾಠದ ಮಧ್ಯದಲ್ಲಿ ಅವಳು ಸೂಕ್ಷ್ಮ ಪ್ರಶ್ನೆಗಳನ್ನು ಕೇಳುತ್ತಾಳೆ; ಉತ್ತರ ಕೊಡುವುದಕ್ಕೆ ಶಾಸ್ತ್ರಿಗಳಿಗೆಷ್ಟೋ ಉತ್ಸಾಹ. ಪ್ರಶ್ನೆ ಕೇಳುವುದಕ್ಕೂ ಮಾಲಿನಿಗೆ ಅಮಿತವಾದ ಉತ್ಸಾಹವಿದ್ದಂತೆ ತೋರುತ್ತಿದೆ. ಆದುದರಿಂ ದಲೆ ಪುಸ್ತಕದಿಂದ ಓದಿ ಕಲಿಸುವ ವಿಷಯಕ್ಕಿಂತ ಹೆಚ್ಚಿನ ವಿಷಯ ಗಳನ್ನವರು ವ್ಯಾಖ್ಯಾನಿಸುತ್ತಿದ್ದರು; ಮಾಲಿನಿ ತಿಳಿಯುತ್ತಿದ್ದಳು. ಇವ ರಿಬ್ಬರ ಸಂಬಂಧವನ್ನು ಸ್ಪಷ್ಟವಾಗಿ ಹೇಳುವುದಕ್ಕೇನು ಸಂಕೋಚ? ಇಲ್ಲಿ ಅಲಂಕಾರಗಳ ಅವಶ್ಯತೆಯಿಲ್ಲ. ನಿರಲಂಕಾರವಾಗಿ ಹೇಳುವು ದಿದ್ದರೆ, ಬ್ರಹ್ಮಚಾರಿಗಳಾಗಿದ್ದ ಶಾಸ್ತ್ರಿಗಳಿಗೆ ಮಾಲಿನಿಯಲ್ಲಿ ಅನುರಾಗ ವಿತ್ತು. ಅದು ಕತೆಗಾರರಿಗೆ ಮಾತ್ರವಲ್ಲ; ಕತೆ ಬರೆಯಲಾರದವರಿಗೂ ತಿಳಿದಿತ್ತು. ಇದನ್ನೇ ಗುರಿಯಾಗಿಟ್ಟು, ವಿದ್ಯಾರ್ಥಿಗಳು ಒಮ್ಮೊಮ್ಮೆ ಬಾಣಗಳನ್ನೆಸೆಯುತ್ತಿದ್ದರು. ಹದವಾಗಿ ಬೀಳುವ ಈ ಏಟುಗಳನ್ನು ಸಹಿಸುವುದಕ್ಕೆ ಬಾದರಾಯಣ ಶಾಸ್ತ್ರಿಗಳಂತೆ ಮಾಲಿನಿಯೂ ಸಂತೋ ಷಿಸುತ್ತಿದ್ದಳೆಂಬಂತೆ ತೋರುತ್ತಲೂ ಇತ್ತು. ಹೀಗಾಗಿ ಬಾದರಾಯಣರ ಪಾಠ ಪ್ರವಚನವು ಕೊನೆಗೆ ಅವರಿಗಾದರೂ ರಸಭೋಜನವಾಗಿ ಪರಿ ಣಮಿಸಿರಬೇಕು.

ಸ್ಥಿತಿ ಹೀಗಿದ್ದಾಗ, ಆಕಸ್ಮಿಕವಾಗಿ ಸತ್ಯಾಗ್ರಹದ ಬೆಂಕಿ ದಳ್ಳಿ ಸಿತು. ಒಂದು ದಿನ ಪಾಠ ಪ್ರಾರಂಭಕಾಲಕ್ಕೆ ವಿದ್ಯಾರ್ಥಿಗಳೆಲ್ಲ ಹೊ ರಗೆ ನಿಂತಿದ್ದಾರೆ. ಕ್ಲಾಸುಗಳಿಗೆ ಬೀಗ. ಯಾಕೆ ಹೀಗೆ ನಿಂತಿದ್ದೀರಿ? ಎಂದು ಉಪಾಧ್ಯಾಯರು ಕೇಳಿದರೆ, 'ಮಹಾತ್ಮಾ ಗಾಂಧಿಕಿ ಜೈ' ಎಂಬ ಉತ್ತರ. ಪಾಠದ ಘಂಟೆ ಹೊಡೆದಾಗ 'ಭಾರತ ಮಾತಾಕಿ ಜೈ'.

ಶಾಲೆಯ ಗರಿಷ್ಠರು ಬಂದು ಕೇಳಿದಾಗ 'ವಂದೇ ಮಾತರಮ್'! ಶಾಲೆಯ ಮುಖ್ಯಾಧ್ಯಾಪಕರು ವ್ಯವಹಾರ ದಕ್ಷರು. ವಿದ್ಯಾರ್ಥಿಗಳು ಹೀಗೆ ದಂಗೆಯೆಬ್ಬಿಸುವುದಕ್ಕೆ ಕಾರಣವೇನೆಂಬುದನ್ನು ತಿಳಿದುಕೊಂಡರು. ಮಕ್ಕಳನ್ನು ರೇಗಿಸಲಿಲ್ಲ. ಮಾಲಿನಿಯನ್ನು ಸಮೀಪಕ್ಕೆ ಕರೆದು "ಏನಮ್ಮ....ಶಾಲೆಯೊಳಗೆ ಇಷ್ಟೆಲ್ಲ ಗಲಭೆಯಾಗಬೇಕೆ? ನಿನಗೆ ಪಾಠ ಬೇಡವಾಗಿದ್ದರೆ ನಾವೇನು ಒತ್ತಾಯಿಸುವೆವೆ?" ಎಂದು ನಯವಾದ ಮಾತಿನಲ್ಲಿ ಪ್ರಶ್ನಿಸಿದರು. ಮಾಲಿನಿ ಈ ಸಂಭಾಷಣೆಗೆ ಅಪಾರ್ಥವನ್ನು ಕಲ್ಪಿಸಿಕೊಂಡಳು. ಹಲಮಂದಿ ವಿದ್ಯಾರ್ಥಿಗಳಲ್ಲಿ ತನ್ನನ್ನು ಮಾತ್ರ ಬಳಿಗೆ ಕರೆದು ಆಡಿದುದರ ಅರ್ಥ ಸ್ಪಷ್ಟ. ತಾನು ಶಾಲೆಯನ್ನು ಬಿಟ್ಟು ಹೊರಟು ಹೋಗಬೇಕೆಂದು! ಪ್ರಿನ್ಸಿಪಾಲರ ಮಾತೇನೋ ಸಿಹಿಯಾಗಿತ್ತು ಅದರೊಳಗೆ ಅಡಗಿದ ಭಾವ ಕಟು. ಇವರಿಗೆ ಬುದ್ಧಿ ಕಲಿಸಬೇಕು.... ಎಂದಾಕೆ ವಿದ್ಯಾರ್ಥಿಗಳ ತಂಡಕ್ಕೆ ಸನ್ನೆಕೊಟ್ಟಳು. ಆಗ ಏಕಕಂಠದಿಂದ ಎಲ್ಲರೂ ಜಯಕಾರ ಮಾಡಿ ಪ್ರಿನ್ಸಿಪಾಲರನ್ನು ಅವರ ಕಚೇರಿಗೆ ಓಡಿಸಿದರು. ಬೇರೆ ಉಪಾಯವಿಲ್ಲ; ಈ ಮುಷ್ಕರವನ್ನು ನಿಲ್ಲಿಸಲು ಬಾದರಾಯಣ ಶಾಸ್ತ್ರಿಗಳೊಬ್ಬರೆ ಸಮರ್ಥರೆಂದು ಪ್ರಿನ್ಸಿಪಾಲರು ಅವರಿಗೆ ಸಂಧಿಕಾರ್ಯವನ್ನೊಪ್ಪಿಸಿ, ತಮ್ಮ ಕೋಣೆಯ ಬಾಗಿಲುಗಳನ್ನು ಬಲಿದು ಕುಳಿತು ಕೊಂಡರು. ಶಾಸ್ತ್ರಿಗಳು ದೊಡ್ಡ ರಾಯಭಾರ ದೊರೆತಷ್ಟು ಸಡಗರದಿಂದ, ವಿದ್ಯಾರ್ಥಿ ವರ್ಗದೊಡನೆ ಸಂಪರ್ಕ ಬೆಳೆಸಿದರು. ಮಾಲಿನಿಯನ್ನು ತಮ್ಮ ಬಳಿಗೆ ಬರಮಾಡಿದರು!

ಮಾಲಿನಿಯ ಜೊತೆಯಲ್ಲಿ ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ರತ್ನಾಕರನೂ ಬಂದಿದ್ದ. ಅವನು ಬಂದುದು ಶಾಸ್ತ್ರಿಗಳಿಗೆ ಹಿತವಾಗಲಿಲ್ಲ. ಮಾಲಿನಿಗೆ ಕರೆ ಹೋಗಲಾಗಿ ರತ್ನಾಕರನೂ ಏಕೆ ಬರಬೇಕು? ರತ್ನಾಕರ ಬೇರೆ ತರಗತಿಯವನು; ಮಾಲಿನಿಯಿರುವುದು ಕಾಲೇಜಿನ ಪ್ರಥಮ ವರ್ಗದಲ್ಲಿ; ರತ್ನಾಕರ ಕೊನೆಯ ವರ್ಗದಲ್ಲಿ. ಸಹಜ ಸ್ಥಿತಿಯಲ್ಲಿ ಅವರಿಬ್ಬರಿಗೆ ಮೇಲು ಮೇಲಿನ ಪರಿಚಯ ಇರಬೇಕಲ್ಲದೆ ಈ ಬಗೆಯ ಒಡನಾಟ ಇರಬೇಕಾದ ಅವಶ್ಯತೆಯಿಲ್ಲ. ಹಿಂದೆ ಎಂದೂ ಕಾಣದ ಈ ಕೂಟ ಈಗ ಕಾಣುತ್ತಿದೆ ಏಕೆ? ಈ ವಿಷಯವು ಅತ್ಯಾಕ್ಷೇಪಕರ ವಿಷಯ

ವೆಂದು ಬಾದರಾಯಣರಿಗೆ ತೋರಿತು. ರತ್ನಾಕರನೂ ಜೊತೆಯಲ್ಲಿ ಬಂದುದರಿಂದ ಶಾಸ್ತ್ರಿಗಳಿಗೆ ಆಡಬೇಕಾದ ಮಾತುಬರಲಿಲ್ಲ. ಕಂಠಕು ದುರಿತು........"ಸರಿ........ಮಾಲಿನಿಯನ್ನು ಬರಹೇಳಿದೆ........ರತ್ನಾಕರನೂ ಬಂದನಲ್ಲವೆ?........ಚೆನ್ನಾಯಿತು" ಎಂದು ವಕ್ರಸ್ವರದಿಂದ, ಶಾಸ್ತ್ರಿಗಳು ಅಸಮ್ಮತಿ ಸೂಚಿಸಿದರು.

"ನಾನು ವಿದ್ಯಾರ್ಥಿ ಸಂಘದ ಅಧ್ಯಕ್ಷೆ; ಅವನು ಕಾರ್ಯದರ್ಶಿ" ....ಎಂದು ಮಾಲಿನಿ ಉತ್ತರ ವಿತ್ತಳು....

"ವಿದ್ಯಾರ್ಥಿ ಸಂಘದ ಅಧ್ಯಕ್ಷೆಯರೊಬ್ಬರಿಗೆ ಪೂರ್ಣಾಧಿಕಾರವಿದೆ ಎಂದು ನಾನು ಭಾವಿಸಿದ್ದೆ" ಎಂದರು ಶಾಸ್ತ್ರಿಗಳು........

ಇದರ ಭಾವವೇನೆಂದು ರತ್ನಾಕರನಿಗೆ ತಿಳಿಯಿತು. "ನಾನಿಲ್ಲಿರುವುದು ಬೇಡವಾಗಿದ್ದರೆ........" ಎಂದಾತ ಹೊರಡುವುದಕ್ಕೆ ಸಿದ್ಧನಾದ.

"ಬೇಡವೆಂದು ಯಾರು ಹೇಳಿದರು?" ಎಂದು ಮಾಲಿನಿ ಪ್ರಶ್ನಿಸಿದಳು.

"ಹೌದು........ಬೇಡವೆಂದು........ಯಾರು ಹೇಳಿದರು?" ಎಂದು ಶಾಸ್ತ್ರಿಗಳು ಅದೇ ಮಾತನ್ನು ಪ್ರತಿಧ್ವನಿಸಿ "ಒಬ್ಬರು ಇಬ್ಬರು ಬಂದು ಏನು ಮಾಡುವುದಕ್ಕೂ ಇಲ್ಲ. ವಿದ್ಯಾರ್ಥಿಗಳನ್ನೆಲ್ಲ ಕರೆಯಿರಿ. ಎಲ್ಲರೂ ಸಭಾಭವನದಲ್ಲಿ ನೆರೆಯಲಿ. ನನಗೆ ದೈವಪ್ರೇರಣೆಯಾದಂತೆ ನಾಲ್ಕು ಮಾತುಗಳನ್ನು ಆಡುತ್ತೇನೆ. ಆ ಮೇಲೆ ನಿಮಗೆ ಇಷ್ಟವಿದ್ದಂತೆ ಮಾಡಿ" ಎಂದು ಸೂಚಿಸಿದರು. ಇದಕ್ಕೆ ಇಬ್ಬರೂ ಸಮ್ಮತಿಸಿ ಸಭೆ ಕೂಡಿಸಿದರು. ಶಾಸ್ತ್ರಿಗಳು ಅಂದು ಆಡಿದುದಿಷ್ಟೆ. ಸತ್ಯಾಗ್ರಹ ತತ್ವ ಒಳ್ಳೆಯದು: ಅದೊಂದು ಕರ್ಮಯೋಗ; ಅದರಿಂದ ಲೋಕೋದ್ಧಾರ ಆಗುವುದೂ ನಿಜ. ಆದರೆ ಅದೊಂದು ಘೋರ ವ್ರತವಾಗಿದೆ. ಗಾಂಧಿಯವರು ಸ್ವತಃ ಅನೇಕ ವೇಳೆ ತಮ್ಮ ದೋಷದಿಂದಲೆ ಸತ್ಯಾಗ್ರಹವು ಹಾಳಾಯಿತೆಂದು ಹೇಳಿದ್ದಾರೆ. ಎಂದ ಮೇಲೆ, ನಮ್ಮಂಥವರು ನಿಮ್ಮಂಥವರು ಆತ್ಮಪರೀಕ್ಷಣವನ್ನು ಮಾಡುವ ಮುಂಚೆ ಇಂತಹ ಭೀಕರ ಕೃತಿಗೆ ಕೈ ಹಾಕುವುದೇ? ಇದನ್ನು ನೀವು ವಿಚಾರಿಸತಕ್ಕುದು. ನಾವು ಇಷ್ಟು ಮಂದಿ ಇಲ್ಲಿ ಸೇರಿದ್ದೇವೆ. ದೇಶಪ್ರೇಮವು ಎಲ್ಲರ ಹೃದಯ ಪಾತ್ರದ

ಲ್ಲಿ ಉಕ್ಕಿ ಹರಿಯುತ್ತಿದೆ, (ಚಪ್ಪಾಳೆ); ಅನೇಕರು ಸರ್ವತ್ಯಾಗಮಾಡ ಲೂ ಸಿದ್ಧರು, (ಮತ್ತೂ ಚಪ್ಪಾಳೆ); ನೀವು ಒಟ್ಟಾಗಿ ಇಲ್ಲಿ ನಿಂತಿರು ವಾಗ ಇರುವ ಉತ್ಸಾಹ ಬೇರೆ ಬೇರಾಗಿ ಏಕಾಂಗವಾಗಿ ಡೊಣ್ಣೆ ಕೋ ವಿಯೇಟುಗಳನ್ನು ಇದಿರಿಸುವಾಗಲೂ ಇರಬಹುದೇ? (ಒಂದು ಸ್ತ್ರೀ ಕಂಠ-ಸಂದೇಹವೇನು?) ಸಂದೇಹವಿಲ್ಲದವರು ಪುಣ್ಯಾತ್ಮರೆ ಸರಿ, (ನಗು). ನಾನಂತೂ ಸಂಶಯಾತ್ಮ........ನಿಮ್ಮಲ್ಲಿ ಕೆಚ್ಚೆದೆಯ ಕಡುಗಲಿ ಗಳು ಯಾರೋ ಅವರು ರಣರಂಗಕ್ಕೆ ದುಮುಕಲಿ....ಉಳಿದವರು ಹೃದಯ ಪರೀಕ್ಷಣವನ್ನು ಮಾಡಲಿ........ಅವರಿಗೆ ಸ್ವಲ್ಪ ಕಾಲ ಅವ ಕಾಶ ಕೊಡಿರಿ........ಮುಂದೆ ನಡೆಯುವ ವೀರರ ಹಜ್ಜೆಯಲ್ಲಿಯೇ ಕಾ ಲಿಡುವಷ್ಟು ಧೈರ್ಯವನ್ನು ತಂದುಕೊಳ್ಳಲಿ........ಅದು ವರೆಗೆ ಸಮಯ ಕ್ಕೆ ಸರಿಯಾಗಿ ಶಾಲೆಗೆ ಬರಲಿ; ಬಂದು ಪಾಠಕ್ಕೆ ಗಮನ ಕೊಡಲಿ........ ಗಲಭೆಯಿಲ್ಲದೆ ಈ ಶಾಲೆಯ ಕಾರ್ಯಕ್ರಮಗಳು ನಡೆಯಲಿ........ಮ ನುಷ್ಯನಿಗೆ ಸಂನ್ಯಾಸ ಬುದ್ಧಿ ಯಾವ ಗಳಿಗೆಯಲ್ಲಿ ಉದ್ಭವಿಸುವುದೋ ಆ ನಿಮಿಷಕ್ಕೆ ಅವನು ಪರಿವ್ರಾಜಕನಾಗಬೇಕೆಂದು ನಮ್ಮ ಶಾಸ್ತ್ರವು ಹೇಳುತ್ತದೆ, (ನಗು........); ಅದರಂತೆ ಯಾರಿಗೆ ಎಂದು ದೇಶ ಸೇವೆ ಮಾಡಬೇಕೆಂಬ ಪ್ರೇರಣೆ ಬರುವುದೋ ಕೂಡಲೆ ನಡೆಯಲಿ........... (ಓಹೊ........); ನಮ್ಮ ಪಾಠ ಪ್ರವಚನಗಳು ನಡೆಯುತ್ತಿರುವಾಗಲೆ ಅಂತಹ ಪ್ರೇರಣೆ ಯಾರಿಗಾದರೂ ಬಂದರೆ ಕೂಡಲೆ ಕಳುಹಿಸಿಕೊಡು ವುದಕ್ಕೆ ನಾನು ಸಿದ್ಧನು (ದೊಡ್ಡನಗು).

ಇಷ್ಟು ಭಾಷಣವಾಗುವಷ್ಟರಲ್ಲಿ ಹೆಚ್ಚು ಮಂದಿ ವಿದ್ಯಾರ್ಥಿಗಳು ನಗುವುದಕ್ಕೆ ತೊಡಗಿದರು. ಮಾಲಿನಿಗೂ ಶಾಸ್ತ್ರಿಗಳಿಗೂ ಭಿನ್ನಾಭಿಪ್ರಾ ಯ ಉಂಟಾಗುವುದನ್ನು ನೋಡುವ ತವಕ ಎಲ್ಲರಲ್ಲಿಯೂ ಇತ್ತು. ಮಾಲಿನಿ ತನ್ನ ಮನೋಗತವನ್ನು ಪ್ರಕಟಿಸಿದ್ದಳು. ಶಾಸ್ತ್ರಿಗಳು ತಮ್ಮ ಹಿತವಾದಗಳನ್ನು ಕೊಟ್ಟೇ ಇದ್ದರು. ಮಾಲಿನೀ ರತ್ನಾಕರರ ನಾಯಕ ತ್ವವು ಅರ್ಧಕ್ಕರ್ಧ ತಪ್ಪಿಹೋಗುವಂತೆಯೂ ಶಾಸ್ತ್ರಿಗಳ ವಿನೋದಕರ ಭಾಷಣದಿಂದ ಮರುಳಾಗಿ ಕೆಲವರಾದರೂ ತಮ್ಮ ಪ್ರತಿಜ್ಞೆಯನ್ನು ಹಲ್ಲು ಮುಟ್ಟದೆ ನುಂಗುವ ಸಂಭವವಿರುವಂತೆಯೂ ಮಾಲಿನಿಗೆ ತೋರಿ

"ಈ ವಿಷಯದಲ್ಲಿ ಮತ ತೆಗೆಯಬೇಕು" ಎಂದಳು. ರತ್ನಾಕರನು ಸಮರ್ಥಿಸಿದನು.

"ಈ ಚಳವಳದಲ್ಲಿ ಭಾಗವಹಿಸುವುದು ವಿದ್ಯಾರ್ಥಿಗಳ ವೈಯುಕ್ತಿಕ ಸ್ವಾತಂತ್ರ್ಯಕ್ಕೆ ಸೇರಿದ ವಿಷಯ; ಬಲಾತ್ಕಾರ ಇರಕೂಡದು". ಎಂಬ ಠರಾವನ್ನು ಶಾಸ್ತ್ರಿಗಳು ಒಕ್ಕಣಿಸಿದರು. ಅದನ್ನು ಒಬ್ಬ ವಿದ್ಯಾರ್ಥಿ ಸೂಚಿಸಿದ; ಮತ್ತೊಬ್ಬ ಸಮರ್ಥಿಸಿದ. "ಇದನ್ನು ನಾನು ವಿರೋಧಿಸುತ್ತೇನೆ" ಎಂದು ಮಾಲಿನಿ ಮುಂದೆ ಬಂದಳು. ರತ್ನಾಕರನು ವಿರೋಧವನ್ನು ಪುಷ್ಟೀಕರಿಸಿದ. ಮತಗಳನ್ನು ಲೆಕ್ಕಮಾಡುವಲ್ಲಿ ಠರಾವಿಗೆ ಹತ್ತೆಂಟು ಅಧಿಕ ಮತಗಳು ದೊರೆತು ಮಾಲಿನಿಯ ವಿರೋಧವು ಬಿದ್ದುಹೋಯಿತು. ಶಾಸ್ತ್ರಿಗಳ ಪಕ್ಷಕ್ಕೆ ಜಯವಾಯಿತು. ಮಾಲಿನಿಯ ಪಕ್ಷಕ್ಕೆ ಅಪಜಯವಾಯಿತು. ಇದರಿಂದ ಯಾರೆಷ್ಟು ಸಂತೋಷಪಟ್ಟರೂ ಮಾಲಿನಿ ಬೇಗುದಿಗೊಂಡಳು. ಶಾಸ್ತ್ರಿಗಳ ಮನಸ್ಸಾದರೂ ನೆಮ್ಮದಿ ಹೊಂದಲಿಲ್ಲ. "ಅಭಿಪ್ರಾಯವೆಂದರೇನು? ಮನುಷ್ಯನ ಅಂತಃಸ್ವರೂಪವಲ್ಲವೆ? ಅಷ್ಟು ಮಂದಿ ವಿದ್ಯಾರ್ಥಿಗಳ ಮಧ್ಯದಲ್ಲಿ ಮಾಲಿನಿಯ ಮತವನ್ನು ಖಂಡಿಸಿದಾಗ ಆ ಸುಂದರ ವಸ್ತುವನ್ನು ನಿಂದಿಸಿದಂತಾಗಲಿಲ್ಲವೆ? ಹೀಗೆ ಮಾಡಬಹುದಾಗಿದ್ದಿತೆ? ವಯಸ್ಸಿನ ಹುಚ್ಚಿನಲ್ಲಿ ಈ ಕಿರಿಯ ಬಾಲಿಕೆ ಏನು ಮಾಡಿದ್ದರೇನು? ಹುಚ್ಚು ತನ್ನಿಂದ ತಾನೇ ಇಳಿಯುವಾಗ, ನಿಜಪ್ರಪಂಚಕ್ಕೆ ಕಾಲಿಡುತ್ತಿದ್ದಳಲ್ಲವೆ? ಅದು ವರೆಗೆ ಭ್ರಾಂತಿ ಸಾಮ್ರಾಜ್ಯದಲ್ಲಿ ಓಡಾಡುತ್ತಿದ್ದರೆ ತಪ್ಪೇನಾಗುತ್ತಿತ್ತು?"....ಶಾಸ್ತ್ರಿಗಳು ಈ ರೀತಿಯಲ್ಲಿ ತಮ್ಮಲ್ಲಿ ತಾವೇ ಪ್ರಶ್ನೆ ಹಾಕಿಕೊಂಡರು.

ಅದೇ ದಿನ ಸಾಯಂಕಾಲ ಮಾಲಿನಿಯ ದೊಡ್ಡಪ್ಪ ವೆಂಕಟಾಚಲಪತಿಯವರು ಶಾಸ್ತ್ರಿಗಳಿಗೆ ದರ್ಶನಕೊಟ್ಟು ಅವರು ವಿದ್ಯಾರ್ಥಿಗಳಿಗೆ ಕೊಟ್ಟ ಭಾಷಣವನ್ನು ಕೊಂಡಾಡಿದರು. ಮಾಲಿನಿಗೆ ತಂದೆಯಿಲ್ಲ; ತಾಯಿಯಿಲ್ಲ; ವೆಂಕಟಾಚಲಪತಿಗಳೆ ಕಾಪಾಡಬೇಕು; ಅವರು ವಿರಾಮ ವೇತನಿಗಳು; ಸರಕಾರದ ಉಪ್ಪನ್ನುಣ್ಣುವವರು. ಈಕೆ ಉಪ್ಪಿನ ಸತ್ಯಾಗ್ರಹಕ್ಕೆ ಹೊರಟಿದ್ದಾಳೆ. ತಮ್ಮ ರಕ್ಷಣೆಯಲ್ಲಿರುವ ಈಕೆ ಸಮುದ್ರದ ತೀರದಲ್ಲಿ ಉಪ್ಪುಮಾಡಿದರೆ, ತಮಗೆ ಪ್ರತಿ ತಿಂಗಳಲ್ಲಿ ಕರೆನ್ಸಿ

ನೋಟುಗಳ ಮೂಲಕವಾಗಿ ಸಿಕ್ಕುವ ಉಪ್ಪು ಅಲ್ಲಿಂದಲ್ಲಿಗೇ ಸೀರಾಗಿ ಆರಿಹೋಗುವುದು, ಎಂಬುದನ್ನು ಬಹಳ ವ್ಯಸನದಿಂದ ತಿಳಿಸಿದರು. ಶಾಸ್ತ್ರಿಗಳು "ಆಕೆಯನ್ನು ಶಾಲೆಯಿಂದ ಬಿಡಿಸಿ, ಯಾರಾದರೊಬ್ಬ ಯೋಗ್ಯನಿಗೆ ಮದುವೆಮಾಡಿ ಕೊಟ್ಟುಬಿಡಿ"; ಎಂದು ಸೂಚಿಸಿದರು.

"ಮದುವೆಮಾಡಿದರೆ ಹಲವು ಹುಚ್ಚುಗಳಿಗೆ ಮದ್ದುಮಾಡಿದಂತಾಗುತ್ತದೆ; ಎಂಬುದನ್ನು ಬಲ್ಲೆ . . ಆದರೆ . . ಅನುರೂಪನು ದೊರೆಯಬೇಕಲ್ಲವೆ?"

"ಸುಶಿಕ್ಷಿತ ಸುಂದರ ತರುಣರಿಗೇನು ಅಭಾವ?"

"ಇಂದಿಗೆ ಆರು ತಿಂಗಳ ಹಿಂದೆ ಹತ್ತೆಂಟು ಕಡೆಯಿಂದ ಸಂಬಂಧದ ಮಾತುಗಳು ಬಂದಿದ್ದುವು."

"ಏನೆಂದಳು?"

"ಯಾವುದಕ್ಕೂ ಲೇದು—ಲೇದು."

"ಎಂದರೆ ಬ್ರಹ್ಮಚಾರಿಣಿಯಾಗಿ ಇರುವಳಂತೆ? . . ."

"ಏನೋ ಇಂದಿನ ಹುಡುಗಿಯರ ಮನೋವೃತ್ತಿಯನ್ನು ಯಾರು ತಿಳಿಯಬಲ್ಲರು?"

ಮಾತನ್ನು ಇಷ್ಟರಲ್ಲಿಯೇ ನಿಲ್ಲಿಸುವುದು ಶಾಸ್ತ್ರಿಗಳಿಗೆ ಪಥ್ಯವಾಗಿ ತೋರಲಿಲ್ಲ. ಮಾಲಿನಿಯ ಮನೋವೃತ್ತಿ ಎಲ್ಲಿಯಾದರೂ ಒಂದು ಕಡೆಗೆ ಒಲಿದಿರಬೇಕು; ಅದು ಯಾವ ಕಡೆ . . ಎಂಬುದನ್ನು ಪತ್ತೆ ಹಚ್ಚುವ ಕುತೂಹಲ ಹೆಚ್ಚಿತು.

"ವೈಜ್ಞಾನಿಕ ಸಂಶೋಧನೆ ಮಾಡುವಂತೆ ಇಂದಿನ ಹುಡುಗಿಯರ ಮನಸ್ಸನ್ನು ಹುಡುಕಬೇಕು."

"ಅಷ್ಟು ಪರಿಶ್ರಮವನ್ನು ಯಾರು ಪಡುತ್ತಾರೆ ಶಾಸ್ತ್ರಿಗಳೆ? ಒಂದು ವೇಳೆ ಶ್ರಮಪಡಲು ಸಿದ್ಧರಾಗಿದ್ದರೂ ಅವಕಾಶವೆಲ್ಲಿ?"

"ಅವಕಾಶ ಮಾಡಿಕೊಳ್ಳಬೇಕು . . ಮಾಡಿಕೊಳ್ಳಬೇಕು . . ಹಿರಿಯರು ಮಾಡುವ ತಪ್ಪು ಇದು . . ಅನೇಕ ವೇಳೆ ಸಂಕೋಚದಿಂದ . . ಅಥವಾ ಭೀತಿಯಿಂದ . . ಅಥವಾ ಇನ್ನಾವುದಾದರೊಂದು ಕಾರಣದಿಂದ ಮನಸ್ಸಿನಲ್ಲಿರುವುದನ್ನು ಬಿಚ್ಚಿ ಹೇಳದವರ ನಾಲಗೆಯನ್ನು ಹೊರಕ್ಕೆಳೆದು . . ಅಭಿಪ್ರಾಯವನ್ನು ಹೆಕ್ಕಬೇಕಾಗುತ್ತದೆ . ."

"ಈ ವಿಷಯದಲ್ಲಿ ನೀವಿಷ್ಟು ಅಕ್ಕರೆಯುಳ್ಳವರಾಗಿದ್ದೀರಿ ಎಂದ ಮೇಲೆ ಮುಚ್ಚಿಡಬೇಕಾದುದಿಲ್ಲ."

"ಇಲ್ಲ . . ಸರ್ವಥಾ . ."

"ಅನೇಕ ಸಂಬಂಧಗಳನ್ನು ಪ್ರಸ್ತಾವಿಸಿದಾಗ, ಆಕೆ ಸಂದರ್ಭವಿಲ್ಲದಿದ್ದರೂ ಶಾಸ್ತ್ರಿಗಳ ಹೆಸರನ್ನು ಎತ್ತುತ್ತಿದ್ದಳು."

"ಯಾವ ಶಾಸ್ತ್ರಿಗಳ—?" ಎನ್ನುವಾಗ ಬಾದರಾಯಣರ ಕೆನ್ನೆ ಕೆಂಪೇರಿತು.

"ತಪ್ಪು ತಿಳಿಯಬೇಡಿ . . ತಿಳಿದುದನ್ನು ಸ್ಪಷ್ಟವಾಗಿ ಹೇಳುತ್ತೇನೆ ಕ್ಷಮಿಸಿ . . ಅವಳು ಹೇಳುತ್ತಿರುವ ಶಾಸ್ತ್ರಿಗಳೆಂದರೆ ಪ್ರೊಫೆಸರ್ ಶಾಸ್ತ್ರಿಗಳು."

ಶಾಸ್ತ್ರಿಗಳ ಮುಖವನ್ನು ಕದಡಿದಂತಾಯಿತು ಈ ವಿಕಾರವನ್ನು ನೋಡುತ್ತಾ ವೆಂಕಟಾಚಲ ಪತಿಗಳು ತಟಸ್ಥರಾಗಿದ್ದರು. ಶಾಸ್ತ್ರಿಗಳಿಗೆ ಸಿಟ್ಟಾಗಲಿಲ್ಲ ಎಂಬುದು ಸ್ಪಷ್ಟ . . ಆದುದರಿಂದ ಮುಂದುವರಿಸಿದರು:- "ಇದು ಆರು ತಿಂಗಳ ಹಿಂದಿನ ಮಾತಾಯಿತು . . ಇಂದು ದೇಶಸೇವೆಗೆ ಕಂಕಣ ತೊಟ್ಟಿದ್ದಾಳೆ. ವಿವಾಹವಾಗಬೇಕಾದರೆ ಸೆರೆಮನೆಗೆ ಹೋಗಿ ಬರಬೇಕು; ಅಲ್ಲಿ ಶಿಕ್ಷಣ ಪಡೆಯಬೇಕು. ತನ್ನಂತೆ ದೇಶಸೇವಾ ಯಜ್ಞಕ್ಕೆ ಆಹುತಿಯಾಗಬಲ್ಲವನನ್ನೆ ತಾನು ವರಿಸುವುದಾಗಿ ಆಕೆ ಬಹಿರಂಗವಾಗಿ ಪ್ರತಿಜ್ಞೆ ಮಾಡಿದ್ದಾಳೆ!"

ವೆಂಕಟಾಚಲಪತಿಗಳು ಇಷ್ಟೆ ಮಾತನ್ನಾಡಿ ಶಾಸ್ತ್ರಿಗಳೊಂದಿಗೆ "ಅವಕಾಶ ದೊರೆಯುವಾಗ ಬುದ್ಧಿನೀತಿ ಹೇಳಿ . . ಆ ಹುಚ್ಚು ಹುಡುಗಿ ಸೆರೆಮನೆಯ ರಾಗಿ ಅಂಬಲಿ ಕುಡಿದು ಸಾಯದಿರಲಿ . . ದಾರಿಗೆ ತಂದು ಬದುಕಿಸಿದ ಪುಣ್ಯ ನಿಮ್ಮದಾಗಲಿ," ಎಂದು ಬೇಡಿಕೊಂಡರು.

ಇವಕ್ಕೆ ಏನುತ್ತರ ಕೊಡಬೇಕೆಂದು ಶಾಸ್ತ್ರಿಗಳಿಗೆ ತಿಳಿಯಲಿಲ್ಲ. ಅವರಿಗೆ ಈ ಮಾತುಗಳಿಂದ ಅಸಂತುಷ್ಟಿಯಾಗುವುದರ ಬದಲು ಒಂದು ಬಗೆಯ ಹಿಗ್ಗುಂಟಾಯಿತು. ಎದೆಯೆಂಬ ಮುಚ್ಚಿದ ಮೊಗ್ಗೆ ಅರಳಿ ಅದರೊಳಗೆ ಅಪೂರ್ವವಾದ ಸೌರಭವೊಂದು ಗಮಗಮಿಸುವಂತಾಯಿತು. ಅಂದಿನ ಸಭೆಯಲ್ಲಾದ ಘಟನೆಗಳು ಅವರ ಮನಸ್ಸಿಗೆ ಮೋಡವನ್ನು

ಕವಿಸಿದ್ದರೆ, ವೆಂಕಟಾಚಲಪತಿ ಬಂದು ಆಡಿದ ಮಾತಿನಿಂದ ಆ ಮೋಡವು ಚೆದರಿ, ದೂರದಲ್ಲಿ ಕಿರಿಯ ನಕ್ಷತ್ರವೊಂದು ತಮ್ಮನ್ನೆ ನೋಡಿ ಕಣ್ಣು ಮಿಟುಕಿಸುತ್ತಿದೆ, ಎಂಬ ಭಾವನೆ ಉಂಟಾಯಿತು ಮಾಲಿನಿ ತುಂಟ ಹುಡುಗರ ಸೇನೆಯನ್ನು ಕಟ್ಟಿಕೊಂಡು ಶಾಸ್ತ್ರಿಗಳ ಮನೆಗೆ ಏರಿ ಬರುವ ವರೆಗೆ, ಆ ನಕ್ಷತ್ರ ಹಾಗೆಯೇ ಅಲ್ಲಿಯೇ, ನಿಂತು ಕಿರುನಗುವನ್ನು ಬೀರು ತ್ತಿದ್ದಿತೆಂಬುದರಲ್ಲಿ ಸಂದೇಹವಿಲ್ಲ.

ಅಷ್ಟರಲ್ಲಿ ಎಲ್ಲೆಲ್ಲಿಯೂ ಗಾಜಿನ ಬಳೆಗಳ ಸಂಚಾರ ಹೆಚ್ಚಿತು. ನಗರದಲ್ಲಿ ಪ್ರತಿಷ್ಠಿತರೆನಿಸಿಕೊಂಡಿದ್ದು, ರಾ. ಸಭಾಂದೋಲನದಲ್ಲಿ ಸಹಾನುಭೂತಿಯುಳ್ಳವರೆಂದು ನಟಿಸಿ, ಚಳವಳದ ಕಾಲದಲ್ಲಿ ಮತ ಭೇದಗಳನ್ನು ಆರಾಧಿಸಿ, ದೂರ ನಿಂತ ಹಲವರಿಗೆ ಬಳೆಗಳು ಭಾಂಗಿ ಯಾಗಿ ಬಂದುವು. ಶಾಸ್ತ್ರಿಗಳು ಧುರೀಣರೂ ಅಲ್ಲ; ಚಳವಳದಲ್ಲಿ ಸಹಾನುಭೂತಿಯೋ ಅಸಹಯೋಗವೋ ತಮ್ಮ ಧೋರಣವೇನೆಂಬು ದನ್ನು ಅವರು ಯಾವ ಸಂದರ್ಭದಲ್ಲಿಯೂ ಪ್ರಕಟಗೊಳಿಸಿರಲಿಲ್ಲ; ಅವರು ಕೇವಲ ಕರ್ಮಯೋಗಿಗಳಷ್ಟೆ . . ನಿರ್ವಿಕಾರಚಿತ್ತದಿಂದ ಸ್ಥಿತಿ ಗತಿಗಳನ್ನು ವಿಚಾರಿಸಿ ನಿಷ್ಪಕ್ಷಪಾತವಾಗಿ ಅಭಿಪ್ರಾಯವನ್ನು ಕೊಡಬಲ್ಲ ಮೇಧಾವಿಗಳಷ್ಟೆ. ಮಾಲಿನಿ ಸ್ವಹಸ್ತದಲ್ಲಿ ಎತ್ತಿಕೊಟ್ಟ ಬಳೆ ಇವರ ಕರ್ಮಯೋಗಕ್ಕಾಗಿ ಸಿಕ್ಕಿದ ಗುರುದಕ್ಷಿಣೆ. ಮಾಲಿನೀ ರತ್ನಾಕರರು ಒಂದಾಗಿ ಬಂದು ತಮ್ಮನ್ನು ಮೂದಲಿಸಿದುದರಿಂದಲೂ, ವೆಂಕಟಾಚಲ ಪತಿಗಳು ಬಂದು ಮಾಲಿನಿಯ ವಿವಾಹ ವಿಘ್ನದ ಕತೆಯನ್ನು ಹೇಳಿದು ದರಿಂದಲೂ ಅವರ ಮನಸ್ಸಿನಲ್ಲಿ ವಿಚಿತ್ರವಾದ ವಿಚಾರಮಂಥನ ವಾಯಿತು. ತಾವು ಇದು ವರೆಗೆ ಆಡಿದುದಲ್ಲದೆ ಮಾಡಿದುದೇನೂ ಇಲ್ಲ. ನಾಲಗೆಯೇನೋ ಹರಿತ; ಕೆಲಸಮಾಡುವ ಸ್ನಾಯುಗಳು ಸುಕ್ಕು ಕಟ್ಟಿವೆ. ತಮ್ಮ ಪಾದಮೂಲದಲ್ಲಿ ಕುಳಿತು ಕಲಿತ ಮಾಲಿನಿ ಪ್ರತ್ಯಕ್ಷ ಕ್ರಿಯಾ ಪ್ರಪಂಚಕ್ಕೆ ದುಮುಕುವಾಗ, ಇಷ್ಟು ವರ್ಷ ಉಪದೇಶದಿಂದ ತಮಗೆ ಜಾಡ್ಯ ಹಿಡಿದಂತಿದೆಯಲ್ಲ? ಯಾವುದರ ದೋಷವಿದು? ಏಕೆ ಬಂತು ಈ ದೋಷ? ಮೂವತ್ತೈದರ ಪಕ್ವ ವಯಸ್ಸಿನಲ್ಲಿ ತಾವು ಸಂದೇ ಹಿಸುತ್ತಲೂ ಅಂಜುತ್ತಲೂ ಹಿಂಜರಿಯುತ್ತಲೂ ಇರುವಲ್ಲಿ ಇಪ್ಪತ್ತು

ವರ್ಷದ ಎಳೆಕೂಸು ಲಾಠಿಯೇಟಿಗೆ ತಲೆಯೊಡ್ಡುತ್ತದಲ್ಲ? ಕೋವಿ ಗುಂಡಿಗೆ ಎದೆಯೊಡ್ಡುತ್ತಿದೆಯಲ್ಲ? . . ಶಾಲೆಯೊಳಗೆ ಕಸಗುಡಿಸುವ ಯೋಗ್ಯತೆಯೂ ಇಲ್ಲದ ಆ ರತ್ನಾಕರನಿಂದು ತರುಣರ ಮುಂದಾಳು ಮಾತ್ರವಲ್ಲ; ಮಾಲಿನಿಯ ಸುತ್ತುಮುತ್ತಲೂ ಸದಾ ಸುಳಿದಾಡುವ ಅಧಿಕಾರ ಪಡೆದಿದ್ದಾನಲ್ಲ? ಹೀಗೆ ವಿಚಾರಮಾಡುತ್ತಾ ಮಾಡುತ್ತಾ ಅವರು ಹತ್ತೆಂಟು ದಿನಗಳಲ್ಲಿ ಒಂದು ನಿರ್ಧಾರಕ್ಕೆ ಬಂದರು. ಇದರ ಪರಿಣಾಮವಾಗಿ ನಗರದಲ್ಲಿ ರೋಮಾಂಚಕ ಘಟನೆಗಳು ನಡೆದುವು. ಉಪ್ಪಿನ ಸತ್ಯಾಗ್ರಹ ಆ ದಿನ ಅತಿ ಪ್ರಚಂಡವಾಗಿ ನಡೆದಿತ್ತು. ಪೊಲೀಸರ ಗದಾದಂಡಗಳೂ ಬಲವಾಗಿ ಬೀಸಿದ್ದುವು. ದೊಡ್ಡ ಮೆರವಣಿಗೆಯ ಅಗ್ರಭಾಗದಲ್ಲಿ ಮಾಲಿನಿ ತ್ರಿವರ್ಣಧ್ವಜ ಹಿಡಿದು ಜಯಕಾರ ಮಾಡುತ್ತಾ ಮುನ್ನಡೆಯುತ್ತಿದ್ದಳು. ಬಾದರಾಯಣ ಶಾಸ್ತ್ರಿಗಳು ಕಳಕ್ಕಿಳಿಯುವರೆಂದು ಊಹಿಸಿದವರೇ ಇಲ್ಲ. ಆದರೆ ಇಂದು ಮಾಲಿನಿಯ ಹಿಂದೆ ಬಾದರಾಯಣರು. ಅಂದಿನ ಉತ್ಸಾಹ ಕೋಲಾಹಲ ಧ್ವನಿಯಿಂದ ಪಟ್ಟಣಿಗರ ಕಿವಿ ಕಿವುಡಾಗಿತ್ತು. ಬೀದಿಬೀದಿಯಲ್ಲಿ ರಣಘೋಷ ಕೇಳಿಸಿತು. ಸ್ವಲ್ಪಕಾಲ ಪೊಲೀಸರು ಈ ತಮಾಷೆಯನ್ನು ನೋಡುತ್ತಿದ್ದರು. ಸಮುದ್ರದ ಕಡೆಗೆ ಸರಿಯುತ್ತಿದ್ದ ಈ ಮೆರವಣಿಗೆ ಉಪ್ಪು ನೀರನ್ನು ಸಮೀಪಿಸಿದಾಗ ಮಾಲಿನಿ ಬಾದರಾಯಣರೆಂಬ, ಸಕಲ ಪರಿಚಿತರಾದ ವ್ಯಕ್ತಿಗಳಿಬ್ಬರೇ ಇದ್ದರು. ಉಳಿದವರ ಕುಲಗೋತ್ರ ಯಾರಿಗೂ ತಿಳಿಯದು. ಒಂದು ಆವೇಶ, ಒಂದು ಉಕ್ಕು, ದೇಶದ ಸ್ವಾತಂತ್ರ್ಯವಿಲ್ಲದೆ ಅಳಿದರೇನು ಉಳಿದರೇನು? ಎಂಬ ತಾತ್ಸಾರದಿಂದ, ಬಾದರಾಯಣ ಶಾಸ್ತ್ರಿಗಳಿಂದು ಪ್ರಾಣತ್ಯಾಗಕ್ಕೂ ಸಿದ್ಧರಾಗಿದ್ದರು. ಆದರೆ ಪೊಲೀಸರು ಪ್ರಾಣವನ್ನು ಕೊಂಡುಕೊಳ್ಳಲು ಸಿದ್ಧರಾಗಿರಲಿಲ್ಲ. ಶಾಸ್ತ್ರಿಗಳ ಆತ್ಮಾಹುತಿಯಾಗದಿರಲು ಅಧಿಕಾರಿಗಳ ಅನಾಸ್ಥೆ ಕಾರಣವಲ್ಲದೆ, ಅವರ ಭೀರುತ್ವವಲ್ಲ. ಪೊಲೀಸರ ಪಡೆ ಮಾಲಿನಿಯನ್ನು ಸುತ್ತುಗಟ್ಟಿ ಎಲ್ಲಿಗೋ ಒಯಿದುಬಿಟ್ಟಿತು. ಉಪ್ಪಿನ ಕುಡಿಕೆಗಳೊಂದಿಗೆ ಕೆಲವರ ತಲೆಗಳೂ ಒಡೆದುವು. ಶಾಸ್ತ್ರಿಗಳಿಗೆ ಅಷ್ಟೇನೂ ಆಗಲಿಲ್ಲ. ಬೆನ್ನಿನ ಮೇಲೆ ಬಲವಾದ ಏಟು. ಏಟು ಬಲವಾಗಿಯೇ ಇತ್ತು. ಕರ್ಮಯೋಗದ ಸ್ಥಿರಬುದ್ಧಿ

ಯಿಲ್ಲದಿದ್ದರೆ ಆ ಏಟಿನ ವೇದನೆ ಅಸಹ್ಯವಾಗುತ್ತಿದ್ದಿತೆಂಬುದರಲ್ಲಿ ಸಂದೇಹವಿಲ್ಲ. ಆದರೆ ಕಣ್ಣಮುಂದೆ ಮಾಲಿನಿಯಿದ್ದಳು. ಅವಳ ಉಜ್ವಲ ನೇತ್ರಗಳಿಂದ ದೇಶಭಕ್ತಿಯ ತೇಜಸ್ಸು ಹೊರಹೊಮ್ಮುತ್ತಿತ್ತು. ಶಾಸ್ತ್ರಿಗಳು ಆಧಿವ್ಯಾಧಿಗಳನ್ನೆಲ್ಲ ಮರೆತಿದ್ದರು ಅವರಿಗೆ ಶರೀರದ ನೆನಪು ಬಂದುದು ಸೆರೆಮನೆಯೊಳಗೆ.. ಆರು ತಿಂಗಳ ಕಠಿನ ಶಿಕ್ಷೆ—ಸಶ್ರಮ ಶಿಕ್ಷೆ. . ಮಾಲಿನಿಯೇನಾದಳು? ಎಂಬುದು ಅವರ ಮೊದಲಿನ ಪ್ರಶ್ನೆ. ಐನೂರು ರೂಪಾಯಿಯ ದ್ರವ್ಯದಂಡ—ತಪ್ಪಿದರೆ ಆರು ತಿಂಗಳ ಕಠಿಣ ಶಿಕ್ಷೆ.. ತಮಗಾದಂತೆಯೇ ಅವಳಿಗೂ ಸಶ್ರಮ ಶಿಕ್ಷೆ. . ತಮಗಿಬ್ಬರಿಗೂ ಸಾಮಾನ್ಯವಾಗಿರುವ ಶ್ರಮವು ಕೂಡ ಎಷ್ಟು ರಮಣೀಯವಾಗಿರದು? ಶಾಸ್ತ್ರಿಗಳು ಭಾವನಾವಶರಾದರು.

* * * * *

ಆರು ತಿಂಗಳ ಅವಧಿ; ಆರು ತಿಂಗಳ ವಿಚಾರ; ಆರು ತಿಂಗಳ ಉದ್ವೇಗ ಶ್ರಮಗಳು .. ಆಶಾನಿರಾಶೆಗಳು . . ಇವುಗಳ ನಡುವೆ ಮಾಲಿನಿ .. ಆ ಮುದ್ದು ಹೆಸರಿನ ಮೂರಕ್ಷರದ ಮಾಲಿನಿ.. ಒಮ್ಮೊಮ್ಮೆ ಒಂದೊಂದು ವಿಚಾರ ಬರುವುದು; ಒಂದೊಂದು ಪ್ರಶ್ನೆಯೇಳುವುದು. ಶಾಲೆಯನ್ನು ಬಿಟ್ಟು ಚಳವಳಕ್ಕೆ ಹಾರಿದುದು ಸರಿಯೆ? ಸೆರೆಮನೆ ಸೇರಿದುದು ಸರಿಯೆ? ಕಷ್ಟವನ್ನು ಸಹಿಸುವ ಶಕ್ತಿ ತಮಗುಂಟೆ? ಸೆರೆಮನೆಯಿಂದ ಹೊರಟ ಮೇಲೆ ಮಾಡತಕ್ಕ ಕಾರ್ಯಗಳೇನು? ಮತ್ತೊಮ್ಮೆ.. ಅಧ್ಯಾಪಕನಾಗುವುದು . . ಕರ್ಮಯೋಗವನ್ನು ಬೋಧಿಸುವುದು. ಏನೂ ಮಾಡದಿರುವುದು .. ಅಲ್ಲವೆ? ಅಥವಾ ಒಂದೊಂದೇ ಸೋಪಾನವೇರಿ ನಾಯಕ ಪಟ್ಟಕ್ಕೆ ತಲೆಯೊಡ್ಡುವುದೇ? ಎರಡನೆಯ ಸಂಭವವು ತ್ಯಾಜ್ಯವಾಗಿ ತೋರಿತು ಅವರ ರಕ್ತನಾಳದಲ್ಲಿ ಹರಿಯುವ ರಕ್ತ ತಣ್ಣಗಿನ ರಕ್ತ. ಮಂದವಾಗಿ ಹರಿಯುವ ರಕ್ತ; ಬಿಸಿಯಾಗಿ ಓಡುವ ರಕ್ತವಲ್ಲ. ಚಳವಳಕ್ಕೂ ಅದಕ್ಕೂ ಯಾವ ನೆಂಟಸ್ತಿಕೆ? ಹೀಗೆ ವಿಚಾರಿಸಲಾಗಿ ಮಾಡಿದುದೆಲ್ಲ ವ್ಯರ್ಥ .. ಮಳಲೊಳಗೆ ಎಣ್ಣೆ ಹೊಯಿದಂತೆ .. ನಿಷ್ಪ್ರಯೋಜಕ. ಒಮ್ಮೊಮ್ಮೆ ನಿರಾಶೆಯಾಗುವುದು. ಅಷ್ಟರಲ್ಲಿಯೆ ಮಾಲಿನಿಯ ಸುಂದರ ವಿಗ್ರಹ ಮನೋಭಿತ್ತಿಯಲ್ಲಿ ಚಿತ್ರಿತ

ವಾಗಿ ನಿಲ್ಲುವುದು. ಅದರ ಸನ್ನಿಧಿಯಲ್ಲಿ ನಿರಾಶೆಯಿಲ್ಲ; ನಿರುತ್ಸಾಹ ವಿಲ್ಲ; ಜಾಡ್ಯವಿಲ್ಲ; ಅಕೃತಾರ್ಥತೆಯ ಸುಳಿವೂ ಇಲ್ಲ. ಮಾಲಿನಿಯಿರು ವಲ್ಲಿ ಸಕಲವೂ ಉಂಟು. ಆಶಾಭರಿತವಾದ ಹದಿನಾಲ್ಕು ಲೋಕಗಳೂ ಉಂಟು. ನೂರು ವರ್ಷದ ಧನ್ಯ ಜೀವನವೂ ಉಂಟು. ಆದರೆ ಅವಳ ಸಮಾಚಾರವೇನು? ಇತ್ತೀಚೆಗೆ ವಾರ್ತೆಯೆ ಇಲ್ಲ

ಶಾಸ್ತ್ರಿಗಳ ಆಸೆಗಳೆಲ್ಲ ಮಾಲಿನಿಯ ಸುತ್ತಲೂ ತಿರುಗುತ್ತಿದ್ದುವು. ಧ್ವನಿ ಕಾವ್ಯದ ಹಾಗೆ ಅವರ ಗುಪ್ತಪ್ರೇಮವು ಬೆಳೆದಿದ್ದಿತಲ್ಲದೆ ವ್ಯಕ್ತ ವಾಗಿ ಯಾವುದೂ ನಡೆದಿರಲಿಲ್ಲ. ಅವಳ ನಡೆನುಡಿಗಳಲ್ಲಿ ಇವರಿಗೆ ಒಪ್ಪು; ಇವರ ಭಾವ ಭಂಗಿಗಳಲ್ಲಿ ಅವಳಿಗೆ ಸಮ್ಮತಿ ಯೆಂಬುದು ಚಿಕ್ಕ ಸಂಕೇತಗಳಿಂದ ತಿಳಿಯಬೇಕಿತ್ತಲ್ಲದೆ ಬೇರಾವ ಸನ್ನೆಗಳಿಂದಲೂ ಅಲ್ಲ. ಅವರ ಮತ್ತು ಮಾಲಿನಿಯ ಇದು ವರೆಗಿನ ಸಂಬಂಧವನ್ನು ಒಂದು ಮುಳ್ಳ ಬೇಲಿಗೂ ಅದರೊಳಗೆ ಬೆಳೆದ ಬಳ್ಳಿಗೂ ಹೋಲಿಸಬಹುದು. ಬಳ್ಳಿಯಲ್ಲಿ ಹೂವಾಗಿದೆ. ಕೊಯ್ಯಬೇಕೆಂದು ದೂರದಲ್ಲಿ ನಿಂತು ಅಲ್ಲಾ ಡಿಸುತ್ತೇವೆ. ತನ್ನಲ್ಲಿಯೇ ಚಿಗುರಿ ಬೆಳೆದು ಹೂ ಬಿಟ್ಟ ಆ ಬಳ್ಳಿಯ ಹೂವನ್ನು ಬೇಲಿಬಿಡುವುದುಂಟೆ? ಹೂವನ್ನು ಕೂರ್ಮೊನೆಯ ಕಂಟಕಗ ಗಳಿಂದ ಬಿಗಿಯಾಗಿ ಹಿಡಿದುಕೊಳ್ಳುತ್ತದೆ. ಒಂದೆಸಳು ಬಿಟ್ಟರೆ ಇನ್ನೊಂ ದನ್ನು ಅಮುಕುತ್ತದೆ. ಬಾದರಾಯಣರ ಮನಸ್ಸು ಕೂಡ ಹಾಗೆ ಆ ಮಾಲಿನೀಲತೆಗೆ ಕಾವಲಾಗಿ ನಿಂತಿತ್ತು. ರತ್ನಾಕರ ಆ ಲತೆಯನ್ನು ಸಮೀ ಪಿಸಿದಾಗ ಕಂಟಕಗಳಿಂದ ಕೀರಿ ಓಡಿಸಲು ಪ್ರಯತ್ನಪಟ್ಟರು. ದೇಶ ಕಾರ್ಯದಲ್ಲಿ ತಾವು ನಿರುತ್ಸಾಹಿಗಳೆಂಬ ವ್ಯಾಜದಿಂದ ಆ ಬಳ್ಳಿ ಅನ್ಯತ್ರ ಅಲೆದಾಡಲು ಯತ್ನಿಸಿದಾಗ, ದೇಶಭಕ್ತಿಯ ವೇಷದಲ್ಲಿ ಮುಂದೆ ಬಂದು ಬಳ್ಳಿಯ ಕವಲನ್ನು ಆತುಕೊಳ್ಳುವುದಕ್ಕೆ ಯತ್ನಿಸಿದರು. ಆರು ತಿಂಗಳ ಕಾರಾಗೃಹದ ಯೋಗಸಾಧನೆಯಲ್ಲಿ ಆ ಬಳ್ಳಿ ಆ ಬೇಲಿ ಎರಡೂ ದೃಢ ವಾಗಿ ಒಂದು ಇನ್ನೊಂದನ್ನು ನಂಬಿ ಆಲಂಬಿಸಿ ಅನ್ಯೋನ್ಯವಾಗಿ ಬಳಸಿ ಬರಬಹುದೆಂದು ಯೋಚಿಸಿದ್ದರು. ಶಿಕ್ಷೆ ಮುಗಿಯಬಹುದು; ಸೆರೆಮನೆ ಯನ್ನು ಬಿಟ್ಟು ಹೊರಟು ಸ್ವತಂತ್ರವಾತಾವರಣದಲ್ಲಿ ಇನ್ನೊಮ್ಮೆ ಕಾಲಿ ಡಬಹುದು. ಆಗ ಮಾಲಿನಿ ಒಲಿದರೆ, ತಾವೂ ಒಬ್ಬ ದೇಶಸೇವಕರಾಗಿ

ಜೀವಾವಧಿ ದಣಿಯಬಹುದು ಮಾಲಿನಿ ತನ್ನ ಮನೋಗತವೇನೆಂದು ಅಂದೇ ತೋರಿಸಲಿಲ್ಲವೆ? ತಮ್ಮ ಪಾಠವನ್ನು ತೆರೆದ ಕಿವಿಯಿಂದ ಕೇಳು ತ್ತಿದ್ದುದು ಮಾತ್ರವಲ್ಲ; ನೆಟ್ಟ ಕಣ್ಣುಗಳಿಂದ ನೋಡುತ್ತಿದ್ದಳು. ಆಗಾಗ ತೃಪ್ತಿಯಿಂದ ನಗುತ್ತಾ ರಸಾವೇಶವನ್ನು ತರುತ್ತಿದ್ದಳು. ಒಮ್ಮೊಮ್ಮೆ ಯಾದರೂ ಬಳಿಗೆ ಬಂದು ಸಾಹಿತ್ಯ ವಿಷಯದ ಜಿಜ್ಞಾಸೆಯಲ್ಲಿ ತಮಗೆ ಒಂದೆರಡು ಗಂಟೆಯ ಆನಂದ ಸಮಾಧಿಯನ್ನು ಕೊಡುತ್ತಿದ್ದಳು. ಇದೆಲ್ಲ ಅರ್ಥರಹಿತವೆ? ಕೊನೆಗೆ ಗಾಜಿನ ಬಳೆಯನ್ನೊಪ್ಪಿಸಿದಳು....ಎಂಬ ಸಂ ಗತಿಯನ್ನು ಅನ್ಯಥಾ ಭಾವಿಸಬೇಕಾಗಿಲ್ಲ. ತನ್ನದಾಗಿರುವ ವಸ್ತು ಹೀಗೂ ಹಿಂದುಳಿಯಬಹುದೇ? ಎಂಬ ಮರುಕದಿಂದ, ತನ್ನದನ್ನು ತನ್ನ ಕಡೆಗೆ ಬರಿಸಲು ಮಾಡಿದ ಉಪಾಯವಾಗಿರಬಾರದೇಕೆ? ಮಾಲಿನಿ ಶಿಷ್ಯೆ; ತಾವು ಗುರುಗಳು........ಎಂಬ ಹೆಮ್ಮೆ ಅಂದು; ಆ ಗಾಜಿನ ಬಳೆ ಬಂದಾಗ, ಭಗ್ನವಾಗಿ ಹೋಯಿತು. ಇಂದವಳು ಗುರುಸ್ಥಾನವನ್ನೇರಿ ದಳು. ತಾವೇ ಶಿಷ್ಯರು ಕಾರಾಗೃಹ ವಾಸದ ಅವಧಿಯಲ್ಲಿ ಗುರು ಶಿಷ್ಯರಿಬ್ಬರೂ ಸಮಾನತೆ ಹೊಂದಿ, ದಂಪತಿಗಳಾಗಿ, ಆದರ್ಶದಂಪತಿಗ ಳಾಗಿ, ಎರಡು ಜೀವ ಕುಸುಮಗಳನ್ನು ಭಾರತ ಮಾತೆಯ ಪಾದಪೂ ಜೆಗೆ ಮೀಸಲಾಗಿ ಇಡುವರಲ್ಲವೆ? ಆರು ತಿಂಗಳ ಕೊನೆಯ ಗಳಿಗೆಯೊಂ ದೇ ಬರಬೇಕಾಗಿತ್ತು; ಅದೂ ಬಂತು. ಮಾಲಿನಿಯೂ ತಾವು ಒಂದೇ ಬಂಡಿಯಲ್ಲಿ ಸ್ವದೇಶಾಭಿಮುಖರಾಗಿ ತೆರಳುವುದೊಂದೇ ಉಳಿದಿತ್ತು.

ಬಿಡುಗಡೆಯ ದಿನ ಶಾಸ್ತ್ರಿಗಳೊಬ್ಬರೆ ಸೆರೆಮನೆಯಿಂದ ಹೊರಡುವು ದೆಂದು ಗೊತ್ತಾಯಿತು. ಶಾಸ್ತ್ರಿಗಳು ' ಇದೇನು ಹೀಗೆ?'' ಎಂದು ಅಧಿ ಕಾರಿಯನ್ನು ಪ್ರಶ್ನಿಸಿದರು.

''ಸೆರೆಮನೆಯನ್ನು ಬಿಟ್ಟುಹೋಗಲು ಮನಸ್ಸಿಲ್ಲವೇ?'' ಎಂದು ಅಧಿಕಾರಿ ಪ್ರಶ್ನಿಸಿ ನಕ್ಕ.

''ಅಲ್ಲ........ನನ್ನ ಜೊತೆಯಲ್ಲಿ ಬಂದ ಆ ಪೋರಿ........''

''ಎಲ್ಲರೂ ಈ ಮುಂಚೆಯೇ ಹೋಗಿದ್ದಾರೆ, ನೀವು ಮಾತ್ರ ಕೊ ನೆಯ ಬಾರಿಗೆ ಉಳಿದಿದ್ದೀರಿ.''

''ಹಾಗೆಂದರೇನು?''

"ಏನೆಂಬುದು ಸ್ಪಷ್ಟ. ಬಂದವರಲ್ಲಿ ಹಲವರ ಶಿಕ್ಷಾವಧಿ ಎಂದೋ ಮುಗಿದಿದೆ. ಆದರೆ ಪೋರಿಯೆಂದು ನೀವು ಯಾರನ್ನು ಕರೆಯುತ್ತೀರೋ ಅವಳು........ಇಲ್ಲಿಗೆ ಬಂದ ಹತ್ತೆಂಟು ದಿನಗಳಲ್ಲಿಯೇ ಹೋಗಿದ್ದಾಳೆ.

"ಬೇರೆ ಸೆರೆಮನೆಗೆ........?"

"ಅವಳ ಮನೆಯೇ ಸೆರೆಮನೆಯಾಗಿದ್ದರೆ, ಸೆರೆಮನೆಗೇ ಹೋಗಿದ್ದಾಳೆ"

ಶಾಸ್ತ್ರಿಗಳ ಮುಖ ಬಿದ್ದುಹೋಯಿತು. ಅವರು ಈ ವಾರ್ತೆಯನ್ನು ನಂಬಲಿಲ್ಲ. ನಂಬುವುದಕ್ಕೆ ಸಾಧ್ಯವಿರಲಿಲ್ಲ. ತಮ್ಮ ಕರ್ತವ್ಯ ಶಕ್ತಿಯು ಲಂಗರಿನ ಗುಂಡಿನಂತೆ ಬಿದ್ದಿದ್ದಾಗ ಅದನ್ನು ಎತ್ತಿ ಕಟ್ಟಿ ಚಳವಳದ ಸಮುದ್ರ ತರಂಗಗಳ ಮೇಲೆ ತೇಲಿಸಿ ಬಿಟ್ಟ ಮಾಲಿನಿ ಸೆರೆಮನೆಯಿಂದ ಶಿಕ್ಷಾವಧಿ ಮುಗಿಯುವ ಮುಂಚೆ ಹೋಗುವುದು ಸಂಭವನೀಯವೆ? ಸಂಭವನೀಯವೆಂದು ಒಪ್ಪಿಕೊಳ್ಳುವುದಕ್ಕವರು ಸಿದ್ಧರಾಗಿರಲಿಲ್ಲ.

"ತಪ್ಪಿಸಿಕೊಂಡು ಹೋದಳೆ?" ಎಂದವರು ಪ್ರಶ್ನಿಸಿದರು.

"ಎಂದೂ ಇಲ್ಲ. ಬಹಿರಂಗವಾಗಿ ಹೋದಳು. ರಾಜಶೀವಿಯಿಂದ ಹೋದಳು. ಅವಳ ದೊಡ್ಡಪ್ಪನಂತೆ........ಸ್ವತಃ ಬಂದು ಕರೆದುಕೊಂಡು ಹೋದರು........"

ಶಾಸ್ತ್ರಿಗಳ ಮನಸ್ಸಿನಲ್ಲಿ ಹಲವು ಊಹನೆಗಳು.... ..."ಅನಾರೋಗ್ಯದ ಕಾರಣದಿಂದ ಹೋಗಿರಲಾರಳೆ?"

ಅಧಿಕಾರಿ ಅವರ ಊಹೆಯನ್ನು ಬೆಳೆಯ ಬಿಡದೆ "ವಿವಾಹ ನಿಶ್ಚಯವಾಗಿದ್ದಿತಂತೆ........ಮತ್ತೆ ಹೋಗದೆ ಹೇಗಿರುತ್ತಾಳೆ? ದೊಡ್ಡಪ್ಪ ವೆಂಕಟಾಚಲಪತಿಗಳು ಅವಳ ನಡತೆಗೆ ಹೊಣೆನಿಂತು ಮಗಳನ್ನು ಬಿಡಿಸಿಕೊಂಡು ಹೋಗಿದ್ದಾರೆ."

ಇನ್ನು ಸಂದೇಹದಲ್ಲಿ ಅರ್ಧಾಂಶ ಕಳೆದು ಹೋಯಿತು. ಶಾಸ್ತ್ರಿಗಳ ಮುಖವರ್ಣ ಮತ್ತೂ ಕದಡಿತು. ಮಾಲಿನಿಗ ದೊಡ್ಡಪ್ಪನಿರುವುದು; ದೊಡ್ಡಪ್ಪನಿಗೆ ವೆಂಕಟಾಚಲಪತಿ........ಎಂಬ ಹೆಸರಿರುವುದು........ಈ ಅಧಿಕಾರಿಗೆ ತಿಳಿದು ಬರಬೇಕಾದರೆ ಆತನ ಹೇಳಿಕೆಯಲ್ಲಿ ಸತ್ಯಾಂಶವಿರಬೇಕಲ್ಲವೆ? ಆದರೂ ಪರಾಂಬರಿಸಬೇಕಾದ ಅಂಶವಿದೆ.

"ವೆಂಕಟಾಚಲಪತಿಗಳೆಂದರೆ ಗಲ್ಲಮೀಸೆಯ ಕಪ್ಪು ಬಣ್ಣದ ಮುದುಕರಲ್ಲವೆ?" ಎಂದು ಶಾಸ್ತ್ರಿಗಳು ಮತ್ತೂ ಪ್ರಶ್ನಿಸಿದರು.

"ಅವರ ಮೀಸೆಯನ್ನು ನೋಡಿ ಕುಳಿತು ಕೊಳ್ಳುವುದು ನಮ್ಮ ಕೆಲಸವೇ? ಮೀಸೆಯೆಂತಹದೋ ನಮಗೆ ಅರಿಯದು. ಅರ್ಧ ಖಂಡಿ ಭಾರದ ದೊಡ್ಡ ಹೊಟ್ಟೆಯನ್ನು ಕಂಡಿದ್ದೇವೆ" ಎಂದು ಅಧಿಕಾರಿ ಅಪ ಹಾಸ್ಯ ಮಾಡುತ್ತಾ ಉತ್ತರಕೊಟ್ಟ.

ಇನ್ನು ಸಂದೇಹದಲ್ಲಿ ಅಲ್ಪಾಂಶವೇ ಉಳಿದಿತ್ತು. ಹೆಚ್ಚಿನ ಪ್ರಶ್ನೆಗಳನ್ನು ಕೇಳಿ ಅನಿಷ್ಟ ಹೇಳಿಸಿಕೊಳ್ಳುವುದು ಬೇಕಾಗಿರಲಿಲ್ಲ. ಇದುವರೆಗೆ ತಿಳಿದುಬಂದ ವಿಷಯಗಳಿಂದ ಮಾಲಿನಿ ಸೆರೆ ಬಿಡಿಸಿಕೊಂಡು ಮಂಗಳೂರಿಗೆ ಹೋಗಿರುವಳೆಂಬುದು ನಿಶ್ಚಯವಾಯಿತು. ಹೋದುದು ಸ್ವೇಚ್ಛೆಯಿಂದ ಆಗಿರಲಾರದು ಅವಳಿಗೆ ದ್ರವ್ಯದಂಡ ವಿಧಿಸಲ್ಪಟ್ಟಿದ್ದಿತು. ಅದನ್ನು ಯಾರಾದರೂ ಸಲಿಸಿದ್ದರೆ, ಅವಳನ್ನು ಬಿಡಲೇ ಬೇಕಲ್ಲವೆ? ಬಿಡಿಸುವುದಕ್ಕೆ ವೆಂಕಟಾಚಲಪತಿಯೇ ಬರಬೇಕಲ್ಲವೆ? ಈ ಪ್ರಕರಣದಲ್ಲಿ ಅಪಾಯ ಶಂಕೆಗೆ ಕಾರಣವೇನೂ ಇಲ್ಲ. ಆದರೆ ಅಧಿಕಾರಿ ವಿವಾಹ ನಿಶ್ಚಯ ಎಂದು ಹೇಳಿದ್ದಾನೆ. ವಿವಾಹ ಯಾರಿಗಾಗಬಾರದು? ವಿವಾಹ ನಿಶ್ಚಯ ಎಂಬುದರಿಂದ ಅವಳದೇ ಮದುವೆ ಎಂದು ಏಕೆ ಭಾವಿಸಬೇಕು? ಕುಟುಂಬದಲ್ಲಿ ಮದುವೆಯಿದ್ದಿರಬಹುದು. ಅವಳು ಹೋಗಬೇಕಾದ ಅವಶ್ಯತೆ ಇದ್ದಿರಬಹುದು. ಹೋಗಿರಬೇಕು....ಇದರಲ್ಲಿ ಏನಾಶ್ಚರ್ಯ? ಕೊನೆಗೆ ತಾವೇ ಹುಚ್ಚರು. ಮಾಲಿನಿ ಸೆರೆಮನೆಯಿಂದ ಹೋದುದನ್ನು ತಪ್ಪಾಗಿ ತಿಳಿದುಕೊಂಡು ಏನೆಲ್ಲ ಯೋಚಿಸಿದುದಾಯಿತು? ಮನಸ್ಸಿನಲ್ಲಿಯೇ ಎಣಿಸಿ ಗುಣಿಸಿ ನೋಡಿದಾಗ, ಇದುವರೆಗೆ ಇದ್ದ ಸಂದೇಹಗಳೆಲ್ಲ ನಿರಾಧಾರವಾಗಿರಬಹುದೆಂಬ ಸಮಾಧಾನವೂ ಬಂತು. "ವಿವಾಹ ಯಾರದು?" ಎಂಬುದನ್ನು ತಿಳಿಯುವಾಗ ಒಗಟು ಬಿಚ್ಚುವುದು. ಆ ಒಗಟಿನೊಳಗೆ ತಮ್ಮ ಮುಂದಿನ ಜೀವನದ ಮಧು ಮಾಧುರ್ಯ ಅಡಗಿರುವುದು....ಎಂಬ ನಂಬಿಕೆ ಅವರಿಗೆ ಬಲವಾಗಿದ್ದಿತು. ಉಗಿ ಬಂಡಿಯಲ್ಲಿ ಕುಳಿತು ಊರನ್ನು ತಲಪುವ ವರೆಗೆ ಅವರು ಹತ್ತಾರು ಬಾರಿ "ವಿವಾಹ....ಯಾರ ವಿವಾಹ

ವಾಗಿರಬಹುದು?" ಎಂದು ತಮ್ಮ ಅಂತರಾತ್ಮದೊಡನೆ ಪ್ರಶ್ನಿಸದೆ ಇದ್ದಿರಲಾರರು ಉತ್ತರವು ವಿಲಂಬಿಸುವಂತೆ ಮಾಡಿದ ಬಂಡಿಯ ಮಂದ ಗತಿಯನ್ನು ಶಪಿಸದೆ ಇದ್ದಿರಲಾರರು.

ಬಂಡಿ ಊರಿನ ನಿಲ್ದಾಣಕ್ಕೆ ಬಂದಾಗ ಜೀವನದಲ್ಲಿ ಒಂದು ಸಂಧಿಕಾಲ ಬಂತು, ಎಂಬ ಅರಿವಿನಿಂದ ಮೈಜುಮ್ಮೆಂದಿತು; ಮುಖ ಕೆಂಪೇರಿತು . . ಮೆಲ್ಲ ಮೆಲ್ಲನೆ ವೇಗವನ್ನು ಕಡಿಮೆಮಾಡುತ್ತಾ ಬಂಡಿ ನಿಂತಿತು; ನಿಲ್ಲಲಿಲ್ಲ . . ಎನ್ನುವಷ್ಟರಲ್ಲಿ "ಭಾರತ ಮಾತಾಕಿ ಜೈ" ಎಂಬ ಉಚ್ಚ ಸ್ವರ ಕಿವಿಗೆ ಹಾಯ್ದು ಶಾಸ್ತ್ರಿಗಳನ್ನೊಮ್ಮೆ ಧನ್ಯತಾಭಾವ ದಲ್ಲಿ ಅದ್ದಿಬಿಟ್ಟಿತು . . ಧ್ವನಿಬಂದ ಕಡೆಗೆ ನೋಡುತ್ತಾರೆ ಶಾಸ್ತ್ರಿಗಳು . . ಮಾಲಿನಿ ಓಡುತ್ತಾ ಬರುತ್ತಾಳೆ. ಉಗಿ ಬಂಡಿಯೊಡನೆ ಸ್ಪರ್ಧಿಸಿ ಬರುತ್ತಿದ್ದಾಳೆ. ಜೊತೆಯಲ್ಲಿ ರತ್ನಾಕರ ಪುಷ್ಪಹಾರ ಹಿಡಿದು ಕೋಣೆ ಕೋಣೆ ಗಳೊಳಗೆ ಇಣಿಕಿ ನೋಡುತ್ತಾ ಓಡುತ್ತಾ ಬರುತ್ತಾನೆ. ವೆಂಕಟಾಚಲ ಪತಿಗಳು ವೇಗ ಹೆಚ್ಚಿಸಲು ಯತ್ನಿಸಿ ಉಬ್ಬುಸಪಡುತ್ತಿದ್ದರು. ಇನ್ನೂ ಹತ್ತೆಂಟು ಜನ ತಮ್ಮ ನಾಯಕರಿಗೆ ಸ್ವಾಗತಕೊಡಲು ಬಂದಿದ್ದರು. ಉಗಿಬಂಡಿ ತನ್ನ ಭಾರವನ್ನು ಹೊತ್ತುಕೊಂಡು ನಿಂತೇ ಬಿಟ್ಟಿತು. ಮತ್ತೊಮ್ಮೆ ಜಯಕಾರ! ಶಾಸ್ತ್ರಿಗಳ ಕೊರಳ ಮೇಲೆ ಪುಷ್ಪಮಾಲಿಕೆ ಗಳ ಹೊರೆ . .

ಶಾಸ್ತ್ರಿಗಳು ಗಾಡಿಯಿಂದ ಹೊರಗೆ ಬಂದು ನಾಲ್ಕಾರು ನಿಮಿಷ ಅಲ್ಲಿಯೇ ನಿಂತು ಪರಿಚಿತರ ಕ್ಷೇಮ ಸಮಾಚಾರಗಳನ್ನು ವಿಚಾರಿಸಿ ದರು. ಮಾಲಿನಿ ಹೇಗಿರುವಳೆಂಬುದನ್ನು ತಿಳಿಯುವುದು ಅವರ ಮೊದ ಲಿನ ಕೆಲಸವಾಗಿತ್ತು ಮಾಲಿನಿ ನಸುನಗುತ್ತಾ ಬಂದು 'ಗುರುಗಳೆ . . ನನಗೆ ಅಪರಾಧ ಮಾಡಿದ ವ್ಯಕ್ತಿ ಈತ....'' ಎಂದು ರತ್ನಾಕರನನ್ನು ಬೆರಳೆತ್ತಿ ತೋರಿಸಿದಳು.

''ಅಪರಾಧ!'' ಶಾಸ್ತ್ರಿಗಳಿಗೆ ಆಶ್ಚರ್ಯ....

ಆಗ ವೆಂಕಟಾಚಲಪತಿಗಳು ನಡುವೆ ಬಾಯಿಹಾಕಿ ''ಅಪರಾಧ ಬೇರೆ ಯಾರದೂ ಅಲ್ಲ; ನನ್ನದೆ....ಸೆರೆಮನೆಗೆ ಹೋದರಾಯಿತೆ? ಕಷ್ಟ ಸಹಿಸುವ ಶಕ್ತಿ ಬೇಡವೆ ಶಾಸ್ತ್ರಿಗಳೆ....ನಿಮ್ಮಂತೆ ಪರಿಪಕ್ವ ಜ್ಞಾನವಂತ

ರಾಗಿದ್ದು ಪ್ರಪಂಚದ ಗುದ್ದಾಟಗಳನ್ನು ಗೆದ್ದುಬಂದವರು ಪೂರ್ವಾಪರ ವಿಚಾರ ಮಾಡಿ ಚಳವಳಕ್ಕೆ ಸೇರುವುದರಲ್ಲಿ ಅರ್ಥವುಂಟು. ಇಂಥ ಜಿಂಕೆಮರಿಗಳಿಗೆ ಚಳವಳವೇಕೆ? ನಾನೇ ದಂಡ ತೆತ್ತೆ. ತೆರದೆ ಉಪಾಯವಿರಲಿಲ್ಲ. ವರನ ಕಡೆಯವರು ನಿರ್ಬಂಧಿಸಿದರು. ಮುಹೂರ್ತ ನಿರ್ಣಯ ಮಾಡಿದರು. ಆ ದಿನ ಮದುವೆ ಆಗಲೇಬೇಕೆಂದು ಹಟ ಮಾಡಿದರು" ಎಂದು ಮುಂದುವರಿಸುತ್ತಾ ಇದ್ದಾಗ, ಶಾಸ್ತ್ರಿಗಳು "ವರನ ಕಡೆಯವರು!" ಎಂದು ಉದ್ಗರಿಸಿದರು. ಅವರ ಮುಖ ಬಿದ್ದು ಹೋಯಿತೆಂಬುದನ್ನು ವೆಂಕಟಾಚಲಪತಿ ಗಮನಿಸದೆ ಇರಲಿಲ್ಲ.

"ಹೌದು; ವರನ ಪಕ್ಷದವರು....ಎಂದರೆ ರತ್ನಾಕರನ ತಾಯಿ ತಂದೆಗಳು" ಎನ್ನುತ್ತಾ ಮುಖತಿರುಗಿಸಿ "ಏ ರತ್ನಾ....ಬಾರೊ....ಗುರುಗಳ ಮುಂದೆ ನಿಲ್ಲೊ....ಇಷ್ಟೇನು ಲಜ್ಜೆ ಈಗಿನ ಮದುಮಕ್ಕಳಿಗೆ!" ಎನ್ನುತ್ತಾ ರತ್ನಾಕರನನ್ನು ಮಾಲಿನಿಯ ಪಕ್ಕಕ್ಕೆ ಬರಿಸಿ "ಈತನೇ ವರ!" ಎಂದರು.

ಕದಡಿದ ಮುಖದಲ್ಲಿ ನಗುವನ್ನು ಮೂಡಿಸುವುದಕ್ಕೆ ಪೇಚಾಡುತ್ತಾ ಶಾಸ್ತ್ರಿಗಳು 'ಬಹಳ ಚೆನ್ನಾಯಿತು ...ಯೋಗ್ಯ ಸಂಬಂಧ...." ಎಂದಾಗ ಬಲವಾದ ಕೆಮ್ಮು ಬಂತು. ಮುಖದಲ್ಲಿ ಬೆವರಿಳಿಯಿತು ಶಾಸ್ತ್ರಿಗಳು ಕರವಸ್ತ್ರದಿಂದ ಮುಖವನ್ನು ಮುಚ್ಚಿ ಒಂದೆರಡು ನಿಮಿಷ ಒರಸುತ್ತಾ ಇದ್ದರು.

' ಬಹಳ ಆಯಾಸವಾಗಿದೆ ಗುರುಗಳಿಗೆ....ಮನೆಗೆ ಕರೆದುಕೊಂಡು ಹೋಗೋಣ" ಎಂದು ಮಾಲಿನಿ ಗಂಭೀರ ಧ್ವನಿಯಲ್ಲಿ ಆಡಿದಳು. ರತ್ನಾಕರ "ಕಾರು ಸಿದ್ಧವಾಗಿ ನಿಂತಿದೆ" ಎಂದು ಸೈನಿಕರ ಶಿಸ್ತಿನಿಂದ ಉತ್ತರ ಕೊಟ್ಟ.

ಶಾಸ್ತ್ರಿಗಳು ಹೋಗಬೇಕು; ಎಲ್ಲಿಗೆ—ಯಾಕೆ? ಇಂದು ಕಣ್ಣ ಮುಂದೆ ಕಂಡ ಪ್ರಪಂಚವೇ ಬೇರೆ. ಅಂದಿನ ಆ ಉತ್ಸಾಹವಿಲ್ಲ; ಆ ಚಳವಳವಿಲ್ಲ; ಉಪ್ಪಿನ ಕುಡಿಕೆಗಳಿಲ್ಲ; ಒಡೆಯುವ ದೊಣ್ಣೆಗಳಿಲ್ಲ; ಒಡೆಯಿಸಿಕೊಳ್ಳುವ ತಲೆಗಳೂ ಇಲ್ಲ. ಎಲ್ಲ ಶಾಂತವಾಗಿದೆ. ಈ ಶಾಂತಿಮಯ ವಾತಾವರಣದ ಮಧ್ಯದಲ್ಲಿ—ಹಿಂದೆ ಹೇಗೊ ತಮ್ಮ

ಹೃದಯ ಸಮೀಪಗತೆಯಂತಿದ್ದ ಮಾಲಿನಿ ಬಲುದೂರ....ಬಲು ಹಿಂದೆ.... ಅಥವಾ ಬಲು ಮುಂದೆ ಹೋದಂತೆಯೂ ತಮಗೆ ಅವಳೊಂದಿಗೆ ಹಜ್ಜೆ ಯಿಡುವುದು ಸರ್ವಥಾ ಸಾಧ್ಯವಲ್ಲವೆಂಬಂತೆಯೂ ತೋರಿ ಗಂಭೀರ ಮುಖಮುದ್ರೆಯಿಂದ "ಮಾಲಿನಿ....ಕ್ಷಮಿಸು....ನನ್ನ ಗುಡಿಸಲ ಕಡೆಗೇ ಹೋಗುತ್ತೇನೆ. ವಾಹನ ಬೇಕಾಗಿಲ್ಲ. ಸ್ವತಂತ್ರ ವಾತಾವರಣದಲ್ಲಿ ಕಾಲು ಚಾಚಿ ನಡೆಯದೆ ಆರು ತಿಂಗಳಾಯಿತು ನೋಡು. ಸಾವಕಾಶ ವಾಗಿ ಹಜ್ಜೆಯ ಮೇಲೆ ಹಜ್ಜೆಯಿಟ್ಟು ನಡೆಯುತ್ತೇನೆ ಅದೊಂದು ಬಗೆಯ ವ್ಯಾಯಾಮವೂ ಆಗುತ್ತದೆ" ಎಂದರು....

ಅಷ್ಟರಲ್ಲಿ ರಸ್ತೆಗೆ ಬಂದುದಾಯಿತು. ರತ್ನಾಕರ ಕಾರನ್ನು ನಡೆ ಸುವುದಕ್ಕೆ ಸಿದ್ಧನಾಗಿದ್ದ. ವೆಂಕಟಾಚಲಪತಿಗಳು ಪಕ್ಕದಲ್ಲಿಯೇ ನಿಂತು ಜೊತೆಯಾಗಿ ಹೋಗಬೇಕೆಂದು ಆಗ್ರಹ ಹಿಡಿದರು; ಶಾಸ್ತ್ರಿಗಳು ಒಪ್ಪ ಲಿಲ್ಲ. ಕೊನೆಗೆ ಅವರೊಬ್ಬರೇ ಹೊರಗುಳಿದು ಉಳಿದ ಮೂವರು ಕಾರನ್ನೇರಿ ಹೋಗುವಾಗ ಮಾಲಿನಿ "ನಮ್ಮಲ್ಲಿ ಯಾವಾಗ ದಯ ಮಾಡಿಸುತ್ತೀರಿ?" ಎಂದು ನಗುತ್ತಾ ಎದೆ ಚುಚ್ಚುವಂತೆ ಕೇಳಿದಳು.

"ದಯವಿಲ್ಲದೆ—ದಯಮಾಡಿಸದೆ, ಬರುತ್ತೇನೆ" ಎಂದರು ಶಾಸ್ತ್ರಿ ಗಳು.

"ಯಾವಾಗ ತಿಳಿಸಬೇಕು...."

"ತಿಳಿಸುವುದಕ್ಕೇನೂ ಇಲ್ಲ; ನೂತನ ವಧೂವರರಿಗೆ ಉಡುಗೊರೆ ಕೊಡುವ ಒಡವೆಯನ್ನು ಹಿಡಿದುಕೊಂಡು ಕೂಡಲೇ ಬರುತ್ತೇನೆ."

"ನಮ್ಮ ಪರಿಷ್ಕಾರದ ಮದುವೆಯಲ್ಲಿ ಅದೊಂದೂ ಇರಲಿಲ್ಲ...."

"ಮದುವೆಯ ಅನಂತರ ಇರಬಾರದೆಂದೇನು?"

"ಗುರುಗಳಿಗೆ ದಕ್ಷಿಣೆ ಕೊಡುವುದರ ಬದಲಾಗಿ"

"ಓಹೊ! ಗುರುದಕ್ಷಿಣೆಯೇ? ಅದು ಅಂದೇ ಬಂದಿದೆ; ಅದನ್ನೇ ಇಂದು ಉಡುಗೊರೆಯಾಗಿ ಒಪ್ಪಿಸುತ್ತೇನೆ!" ಎಂದು ಶಾಸ್ತ್ರಿಗಳು ಬಿರು ದನಿಯಲ್ಲಿ ಆಡಿದರು. ಇದೇನೆಂದು ಕೇಳುವ ಕುತೂಹಲ ಮಾಲಿನಿಗಿರ ಲಿಲ್ಲ; ರತ್ನಾಕರನಿಗೂ ಇರಲಿಲ್ಲ; ವೆಂಕಟಾಚಲಪತಿಗಳ ಅವಿವೇಕವು "ಅದೇನು?" ಎಂದು ಕೇಳಿಸಿತು.

"ಅದೇನೆಂಬುದು ಮಾಲಿನಿಗೂ ಗೊತ್ತಿದೆ; ರತ್ನಾಕರನಿಗೂ ತಿಳಿದಿದೆ– ಗಾಜಿನ ಬಳೆಗಳು, ದಿವ್ಯವಾದ ಜಾಪಾನಿ ಬಳೆಗಳು!" ಎಂದು ವಕ್ರಸ್ವರದಿಂದ ಶಾಸ್ತ್ರಿಗಳು ಉದ್ಗರಿಸಿದಾಗ ರತ್ನಾಕರನ ಅರಳು ಮೊಗ ಉದುರಿತು. ಎದೆಗೆ ಕೂರ್ನೊನೆಯಿಂದ ಚುಚ್ಚಿದಂತಾಗಿ ಮಾಲಿನಿಯ ಮುಖ ಕತ್ತಲಿಸಿತು. ಕಾರು ಹೊರಟು ಒಂದೇ ರಭಸದಲ್ಲಿ ಓಡತೊಡಗಿತು.

ಆಗ ತಾನೆ ಸೂರ್ಯನು ಮುಳುಗುತ್ತಿದ್ದ. ಪಶ್ಚಿಮ ದಿಕ್ಕಿನ ಕೆಂಬಣ್ಣದ ಮೋರೆಯಲ್ಲಿ ಕಪ್ಪು ಮೋಡವೊಂದು ಆಡುತ್ತಿತ್ತು. ಅದರಂತೆ ಶಾಸ್ತ್ರಿಗಳ ತುಂಬಿದ ಮುಖಮಂಡಲದಲ್ಲಿ ಗಂಟಾದ ಹುಬ್ಬು ಒಮ್ಮೊಮ್ಮೆ ಒಡೆಯುತ್ತಲೂ ಹೊಡೆಯುತ್ತಲೂ ಇತ್ತು.

೨೨—೧೨—೩೦

ಶ್ಯಾಮರಾಯರ ವಕಾಲತ್ತು

ವಕೀಲ ಶ್ಯಾಮರಾಯರು "ಭಾರಿ ವಕೀಲ"ರೆಂದು ಪ್ರಸಿದ್ಧಿ ಹೊಂದಿದುದು ಅದೊಂದು ವಿಚಿತ್ರ ರೀತಿಯಲ್ಲಿ. ಈ ವೃತ್ತಿಯಲ್ಲಿ ಖ್ಯಾತಿ ತರುವುದಕ್ಕೆ ಹಲವು ಗುಣಗಳು ಕಾರಣವಾಗಿರುತ್ತವೆ. ಕೆಲವರ "ಆಲೋಚನೆ" ಬಲವಾಗಿರುತ್ತದೆ. ಕೆಲವರಿಗೆ ಚೆನ್ನಾದ ಕಂಠಶೋಷಣ ಶಕ್ತಿಯನ್ನು ಕೊಟ್ಟಿರುತ್ತಾನೆ ಪರಮಾತ್ಮ! ಇನ್ನು ಹಲವರು ಸವಾಲು ಅಡ್ಡಸವಾಲುಗಳನ್ನು ಹಾಕಿ ನ್ಯಾಯಸ್ಥಾನದ ಪಂಜರವೇರುವ ಪ್ರಾಣಿಯ ನಾಲಗೆಯಿಂದ, ಬೇಕಾದುದನ್ನೂ ಬೇಡದುದನ್ನೂ ಹೊರಗೆ ಹಾಕಿಸಿ,—ಈ ಪ್ರಾಣಿಯ ಸ್ವರೂಪ ಇಂತಹದು—ಎಂದು ತೋರಿಸಿ ಕೊಡುತ್ತಾರೆ. ಈ ಗುಣಗಳಲ್ಲಿ ಶ್ಯಾಮರಾಯರ ದಿಗಂತವ್ಯಾಪಿ ಕೀರ್ತಿಗೆ ಆಧಾರವಾದುದು ಯಾವುದೆಂಬುದನ್ನು ತಿಳಿದವರಿಲ್ಲ. ಆದರೆ ನ್ಯಾಯಸ್ಥಾನದ ಹೊರಗೆ ಅವರ ಕೈಚಳಕ ಬಾಯಿಚಳಕಗಳೆರಡನ್ನೂ ಹೊಗಳುವವರ ಸಂಖ್ಯೆ ಕಡಿಮೆಯಿಲ್ಲ. ಕಾರಣವೇನೂ ಇರಲಿ; ಶ್ರೀ। ರಾಯರು ದೊಡ್ಡ ವಕೀಲರೆಂದು ಲೋಕವೆ ಹೇಳುತ್ತಿರುವಾಗ, ಅಲ್ಲಗಳೆಯುವುದಾದರೂ ಹೇಗೆ?

ನಮ್ಮೂರಿನ "ಸೆಶನ್ಸ್ ಕೋರ್ಟಿ"ನಲ್ಲಿ ಗದ್ದಲವೆ ಗದ್ದಲ. ಈಗಲೂ ಜೀವಂತರಾಗಿರುವ ವಯೋವೃದ್ಧರ ನೆನಪಿನಲ್ಲಿ—ಇಂತಹ ಉದ್ವೇಗಕಾರಿ ಪ್ರಕರಣ ಹಿಂದೆ ಆಗಿದ್ದಿರಬಹುದೆಂಬುದಕ್ಕೆ ಸಾಕ್ಷಿಯಿಲ್ಲ. ಒಂದು ಪಕ್ಷದಲ್ಲಿ ಚೆನ್ನಮ್ಮ; ಅವಳ ಪಕ್ಷವಾದಿಯಾದ ವಕೀಲ ಶ್ಯಾಮರಾಯರು. ಇನ್ನೊಂದು ಪಕ್ಷದಲ್ಲಿ ಕೋದಂಡರಾಯರು; ಇವರು ಮದ್ರಾಸಿನಿಂದಲೇ ವಕೀಲರನ್ನು ಬರಮಾಡಿದ್ದರು; ನಾಲ್ಕಾರು ದಿನ ನ್ಯಾಯಸ್ಥಾನದಲ್ಲಿ ಹಿಡಿಯಲಾರದಷ್ಟು ಸಂದಣಿ ಕೂಡಿತ್ತು. ಅಡ್ಡಸವಾಲುಗಳನ್ನೂ "ಹೇರೀಂಗಿ"ಗಳನ್ನೂ ಕೇಳುವುದಕ್ಕಿಂತಲೂ ವಿಚಾರಣೆಯನ್ನು ನೋಡುವ ಕುತೂಹಲವೆ ಹಲವರಲ್ಲಿ ಹೆಚ್ಚಾಗಿದ್ದಿತೆಂದು ತೋರುತ್ತದೆ. ವಕೀಲ ಶ್ಯಾಮರಾಯರೂ ಕೋದಂಡರಾಯರೂ, ಶ್ರೀಮತಿ ಚೆನ್ನಮ್ಮನೂ ಯಾವ ಮೂಲೆಯಲ್ಲಿ ಮುಖ ಕಾಣಿಸಿಕೊಂಡ

ರೂ, ಅತ್ತನೋಡಿ, ಅತ್ತ ಸುಳಿದು, ದೂರದಲ್ಲಿ ನಕ್ಕು, ತಮಗೆ ಬೇಕಾದಂತೆ ಟೀಕೆ ಮಾಡಿ ತೃಪ್ತಿಹೊಂದುತ್ತಿದ್ದರು.

ಇಷ್ಟು ದೊಡ್ಡ ವ್ಯಾಜ್ಯಕ್ಕೆ ಕಾರಣವಾದ ಸಂಗತಿಗಳಿಷ್ಟೆ:—ಕೋದಂಡರಾಯರು ಚೆನ್ನಮ್ಮನ ಕೈಹಿಡಿದ ಗಂಡ. ಹತ್ತು ಲಕ್ಷದ ಸಂಪನ್ನರು; ಆದರೇನು? ಧನಿಕತೆಯೊಂದಿಗೆ ಹಲವು ವೇಳೆ ಬರುವ ದುರ್ಗುಣಗಳೆಲ್ಲ, ಅವರಲ್ಲಿವೆ. ದುರಾಚಾರಿಗಳು; ದುಂದುಗಾರರು; ಕುಡಿಯುತ್ತಾರೆ. ಮನೆಯೊಳಗಿರುವುದಕ್ಕಿಂತ ಹೆಚ್ಚುಕಾಲ ಹೊರಗೆ ಅಡ್ಡ ಬೀದಿಗಳಲ್ಲಿ ಅಲೆದಾಡುತ್ತಾರೆ. ಇಷ್ಟನ್ನೆ ಮಾಡುತ್ತಿದ್ದರೆ ಚೆನ್ನಮ್ಮನೂ ಆಕ್ಷೇಪಿಸುತ್ತಿರಲಿಲ್ಲ. ಒಮ್ಮೊಮ್ಮೆ ಇಡೀ ಶರೀರವು ಮಾಂಸದ ಮುದ್ದೆಯಾಗುವಂತೆ ಮರ್ದನ ಮಾಡುತ್ತಾರೆ. ಇಂತಹ ಗಂಡನೊಡನೆ ಸಂಸಾರ ನಡೆಸುವುದು ಅಸಾಧ್ಯ. ಬಿಡುಗಡೆಯಾಗಬೇಕಾಗಿದೆ. ಯಾವ ಕಾನೂನು ಅವರನ್ನು ಒಂದು ಮಾಡಿತೋ ಅದೇ ಕಾನೂನು ಇಂದು ಸದಯ ದೃಷ್ಟಿಯನ್ನು ಬೀರಿ, ಅವಳಿಗೆ ಬಂಧವಿಮೋಚನೆಯನ್ನೂ ತಿಂಗಳೊಂದಕ್ಕೆ ಸಾವಿರ ರುಪಾಯಿಯ ಜೀವನಾರ್ಥವನ್ನೂ ಕೊಡಬೇಕಾಗಿದೆ. ಇದಕ್ಕೆ ಪ್ರತಿಯಾಗಿ ಕೋದಂಡರಾಯರ ಪ್ರತಿಪಾದನೆ ಹೀಗೆ: —ಹೆಸರು ಮಾತ್ರ ಚೆನ್ನಮ್ಮ; ಆದರೆ ಆಕೆಯ ನಡತೆ ಮಾತ್ರ ಚೆನ್ನಾಗಿಲ್ಲ. ದಾಂಪತ್ಯ ಧರ್ಮದ ಮೂಲ ತತ್ವಗಳನ್ನೇ ಆಕೆ ಅರಿತಿಲ್ಲ. ಮದುವೆಯಾದಂದಿನಿಂದ ಇಂದಿನ ವರೆಗೆ ಕೋದಂಡರಾಯರು ಅವಳೊಡನೆ ಒಂದು ಗಳಿಗೆ ಸುಖಾನುಭವ ಮಾಡಿಲ್ಲ; ಹೀಗಿದ್ದರೂ ಅವರು ಸಹಿಸಿದ್ದಾರೆ. ಸಹನೆಯ ನಿಧಿ ಸಂಪೂರ್ಣ ಸವೆದು ಹೋಗುವಷ್ಟು ಸಹಿಸಿದ್ದಾರೆ. ಇನ್ನೂ ಸಹಿಸಬಲ್ಲರು; ಬಿಡುಗಡೆಯಾಗಬೇಕಾಗಿಲ್ಲ. ಒಂದು ವೇಳೆ ಆಗುವುದಿದ್ದರೂ ತಿಂಗಳಿಗೆ ಐವತ್ತು ರುಪಾಯಿಗಳಿಗಿಂತ ಹೆಚ್ಚಿನ ಜೀವನಾರ್ಥವನ್ನು ಅಪೇಕ್ಷಿಸುವ ಯೋಗ್ಯತೆ ಅವಳಲ್ಲಿಲ್ಲ. ಹಳ್ಳಿಯ ಒಂದು ಮೂಲೆಯಲ್ಲಿ ತಿಂಗಳಿಗೆ ಹದಿನೈದು ರುಪಾಯಿ ಸಂಪಾದನೆಯ ಶಿಕ್ಷಕಳಾಗಿದ್ದ ಚೆನ್ನಮ್ಮ ಕೋದಂಡರಾಯರ ಕೈಹಿಡಿದು ಬಿಡುಗಡೆಹೊಂದುವ ಕಾಲಕ್ಕೆ ತಿಂಗಳಿಗೆ ಸಾವಿರದ ಅಧಿಕಾರಿಣಿಯಾಗುವುದರಲ್ಲಿ ಅರ್ಥವೇನೂ ಇಲ್ಲ. ಶಿಕ್ಷಣ ವೃತ್ತಿಯನ್ನು ಬಿಟ್ಟು ಮದುವೆಯ ವೃತ್ತಿಯನ್ನು ಕೈಕೊಂಡು

ಈಗ ನಿವೃತ್ತರಾಗಬೇಕೆಂದಿರುವವರಿಗೆ ಹೆಚ್ಚೆಂದರೆ ಐವತ್ತು ರುಪಾಯಿಯ ವೇತನ ಕೊಡಬಹುದು; ಇದಕ್ಕೆ ಕೋದಂಡರಾಯರು ಸಿದ್ಧರಾಗಿಯೇ ಇದ್ದರು. ಎರಡು ಕಡೆಗಳಿಂದಲೂ ಬಹಳ ಸಾಧನೆ ನಡೆದಿತ್ತು. ಆದುದರಿಂದಲೇ ಈ ದಾವೆಗೆ ಇಷ್ಟು ಕಳೆಯೇರಿದುದು. ಯಾರು ಗೆಲ್ಲುವರೋ ಯಾರು ಸೋಲುವರೋ? ವಿಚಾರಣೆಯ ಮಧ್ಯದಲ್ಲಿ ಹೊರಬೀಳುವ ಗುಪ್ತಾನುಸಂಧಾನಗಳೆಷ್ಟೋ? ಎಂತಹ ರೋಮಾಂಚಕ ಘಟನೆ ಆಗಲುಂಟೊ? ಯಾರು ಬಲ್ಲರು? ಎಲ್ಲರ ಕಿವಿಗಳೂ ನೆಟ್ಟಗೆ ನಿಂತಿದ್ದುವು.

* * * *

ಕತೆಯ ಪೀಠಿಕೆಯಾಗಿ, ಕೋದಂಡರಾಯರು ಚೆನ್ನಮ್ಮನನ್ನು ಸಂಧಿಸಿದ, ಚೆನ್ನಮ್ಮನು ಕೋದಂಡರಾಯರ ಕೈಹಿಡಿದ ಹೆಂಡತಿಯಾದ ಘಟನೆಯನ್ನು ಸಂಕ್ಷೇಪವಾಗಿಯಾದರೂ ಹೇಳದಿದ್ದರೆ, ಸ್ವಾರಸ್ಯ ಕೆಡುತ್ತದೆ. ಚೆನ್ನಮ್ಮ ಆಕಾಲದ ಸುಶಿಕ್ಷಿತೆ; ಆಕಾಲದ ಬೆಡಗುಗಾರ್ತಿ; ಆ ಕಾಲದ ಸ್ವತಂತ್ರ ಸ್ತ್ರೀ. ಮೆಟ್ರಿಕ್ ಪರೀಕ್ಷೆಯ ವರೆಗೆ ಓದಿ, ಶಿಕ್ಷಣ ವೃತ್ತಿಯನ್ನು ಕೈಕೊಂಡು ಹಲಜನರ ಕಣ್ಣಮುಂದೆ ಓಡಾಡುವ ಹೆಣ್ಣಿಗೆ ಪುರುಷನಂತಹ ಗಂಡುತನ ಬೇಕಾಗಿದ್ದ ಕಾಲವದು. ಆದರಲ್ಲಿಯೂ ಬೋರ್ಡಿನ ನೌಕರಿ. ಬೋರ್ಡಿಗೆ ದಿನಕ್ಕೊಬ್ಬ ಗಂಡ; ದಿನಕ್ಕೊಬ್ಬ ಅಧಿಕಾರಿ. ಒಬ್ಬನಿಗೆ ಪೂರ್ವವೇ ಪಶ್ಚಿಮವೆಂದು ತೋರಿದರೆ, ಮತ್ತೊಬ್ಬ ಅಧ್ಯಕ್ಷನಿಗೆ ರಾತ್ರಿಯೇ ಹಗಲಾಗಿ ತೋರುತ್ತದೆ. ಇಂತಹ ವಿಕ್ಷಿಪ್ತ ವ್ಯಕ್ತಿಗಳನ್ನು ಕೆಲಸದಿಂದ ಮೆಚ್ಚಿಸಬೇಕು; ಹೊಗೆಕಾರುವ ಅವರ ಮುಖದಲ್ಲಿ ನಗುವನ್ನು ಅರಳಿಸಬೇಕು; ಅವರ ಅನುಗ್ರಹದಿಂದ ಉದ್ಯೋಗ ಸ್ಥಾನಮಾನಗಳನ್ನು ಹೆಚ್ಚಿಸಿಕೊಳ್ಳಬೇಕು. ಈ ಭಾಗದಲ್ಲಿ ಚೆನ್ನಮ್ಮನ ಚಾತುರ್ಯ ಕಡಿಮೆಯೆಂದು ಯಾರೂ ಆರೋಪಣೆ ಮಾಡಿಲ್ಲ. ಬಣ್ಣ—ಎಣ್ಣೆಕಪ್ಪಾದರೂ, ತುಳುಕುವ ನಗೆ, ಬಳುಕುವ ನಡೆಗಳು ರೂಪದಲ್ಲಿರಬಹುದಾದ ಸಕಲ ದೋಷಗಳನ್ನೂ ಮುಚ್ಚಿಮರಸಿ, ಆಕೆಯನ್ನು "ಸುಂದರಿ"ಯಾಗಿ ಮಾಡಿದ್ದುವು. ವಯಸ್ಸೂ ಚಿಕ್ಕದು!

ಕೋದಂಡರಾಯರು ತಾಲೂಕು ಬೋರ್ಡಿನ ಅಧ್ಯಕ್ಷರಾಗುವ

ಮುಂಚೆ ಏನಾಗಿದ್ದರೆಂಬ ವಿವರಗಳು ಬೇಕಾಗಿಲ್ಲ. ಶ್ರೀಮಂತರ ಕುಟುಂಬದಲ್ಲಿ ಹುಟ್ಟಿದವರು. ತಂದೆಯ ಕೊಂಡಾಟದಲ್ಲಿ ಬಳೆದವರು. ಹೀಗಾಗಿ ಅವರ ವಿದ್ಯಾಭ್ಯಾಸವು ಕುಂಟುಗಾಲಿನಲ್ಲಿ ನಡೆಯಿತು. ತಂದೆ ದೀರ್ಘಾಯುಷಿಯಾಗಿದ್ದುದು ಕೋದಂಡರಾಯರಿಗೆ ಆಕ್ಷೇಪಕರವಾಗಿ ತೋರಿರಬೇಕು. ಎಷ್ಟೆಂದರೂ ಕುಲೀನರ ಕುಟುಂಬ "ನಮ್ಮಪ್ಪ ಹಾಗೆ ಮಾಡಿರಲಿಲ್ಲ; ನಮ್ಮಜ್ಜ ಹೀಗೆ ಮಾಡಿರಲಿಲ್ಲ"—ಎಂಬ ತಂದೆಯ ವಿಧಿ ನಿಷೇಧಗಳು ಸೌಮ್ಯವಾಗಿದ್ದರೂ ಅವುಗಳನ್ನು ಬಹಿರಂಗವಾಗಿ ಮೀರಿ ನಡೆಯುವ ಧೈರ್ಯ ಅವರಿಗಿರಲಿಲ್ಲ. ಎಂಟನೆಯ ತರಗತಿಯಲ್ಲಿ ಓದುತ್ತಿದ್ದಾಗಲೇ, ಕೋದಂಡರಾಯರಿಗೆ ಬಾಹ್ಯ ಪ್ರಪಂಚದ ಅನುಭವ ವಾಯಿತು. ಪೊಲೀಸರು ಅವರನ್ನೂ ಯಾರೋ ಒಬ್ಬಳನ್ನೂ ಕೈದು ಮಾಡಿ ತಂದೆಯ ಕೈಗೊಪ್ಪಿಸಿ ರಶೀದಿ ಪಡೆಯಬೇಕಾಯಿತು. ಮತ್ತೊಮ್ಮೆ ಮುಂಬಯಿಯ ವರೆಗೆ ಪ್ರಯಾಣ ಮಾಡಿ ಮರಳಿ ಬಂದಾಗ, ಎಲುಬು ಗೂಡಾಗಿದ್ದ ಅವರನ್ನು ತಂದೆಗೆ ಗುರುತಿಸುವುದಕ್ಕೂ ಆಗ ಲಿಲ್ಲ. ಈ ಎಲ್ಲ ಸಂಕಟಗಳಿಂದ ಮಗನನ್ನು ಬಿಡುಗಡೆ ಮಾಡುವುದ ಕ್ಕೆಂಬಂತೆ, ಕೋದಂಡರಾಯರ ತಂದೆ ಕೀರ್ತಿಯನ್ನೂ ತಮ್ಮ ಪುತ್ರರತ್ನ ವನ್ನೂ ಹಿಂದೆ ಬಿಟ್ಟು ಪರಲೋಕ ಪ್ರಯಾಣ ಮಾಡಿದರು. ಲಕ್ಷಾಂತರ ಬೆಲೆಬಾಳುವ ಆಸ್ತಿ, ಮನೆ ನೆಲಹೊಲಗಳಿಗೆ ರಾಯರೊಬ್ಬರೆ ಅಧಿಕಾರಿ; ಅವರೊಬ್ಬರೇ ಸರ್ವಾಧಿಕಾರಿಗಳು! ಕಾಲಕ್ರಮದಲ್ಲಿ ತಾಲೂಕು ಬೋರ್ಡಿನ ಅಧ್ಯಕ್ಷ ಪದವಿಯೂ ಅವರ ವರ್ಗದ ಆಸ್ತಿಯಂತೆ ಅವ ರದೇ ಆಗಿಹೋಯಿತು.

ಕುಟುಂಬ ಸುಖವಿಲ್ಲದೆ ಏಸಿದ್ದರೇನು? ಎರಡೋ ಮೂರೋ ಬಾರಿ ಮದುವೆಯಾಗಿ ಪುನಃ ಪುನಃ ಅವರು ವಿಧುರರಾಗಿದ್ದರು. ವಿಧು ರತ್ವದೊಡನೆ ಪಂತಕಟ್ಟಿ ಓಡುವ ಪಂದ್ಯ ಬೇಡವೆಂದು ಕೊನೆಗವರು ಮುಷ್ಕರ ಹಿಡಿದಂತೆ ತೋರುತ್ತದೆ. ವರ್ಷ ಐವತ್ತು; ಮನೆಯಲ್ಲಿ ಆರೆಂಟು ಮಕ್ಕಳು; ಅಧ್ಯಕ್ಷಪದವಿ—ಇವುಗಳ ನಡುವೆ ಶಾಸ್ತ್ರೋಕ್ತ ವಿವಾಹಕ್ಕೆ ಎಡೆಯೇ ಇಲ್ಲ .. ಹೆಂಡಿರ ಸ್ಥಾನದಲ್ಲಿ 'ವೇಕೆನ್ಸಿ' ಇಲ್ಲವೆ ಇಲ್ಲ .. ಎಂದವರು ವಿನೋದಕ್ಕಾಗಿ ಹೇಳುವುದಿತ್ತು. ರಾಯರಿಗೆ ಚೆನ್ನಮ್ಮನ ಪರಿಚಯವಾದುದು ಈ ಕಾಲದಲ್ಲಿ.

ಪರಿಚಯದೊಂದಿಗೆ ಚೆನ್ನಮ್ಮನು ಅನುಭವಿಸುತ್ತಿದ್ದ ಅನೇಕ ಕಷ್ಟ ಸಂಕಷ್ಟಗಳ ಮನವರಿಕೆಯಾಯಿತು ಬಲು ದೂರವಾದ ಯಾವುದೋ ಒಂದು ಹಳ್ಳಿಯಲ್ಲಿ ಚೆನ್ನಮ್ಮನ ಉದ್ಯೋಗ. ಇಂತಹ ಕೋಮಲ ಪುಷ್ಪ ಹಳ್ಳಿಗಾಡಿನಲ್ಲಿ ಬಾಡಿ ಉದುರಿಹೋಗಬೇಕೆ? ವಾಸಕ್ಕೊಂದು ಮನೆ ಯಿಲ್ಲದೆ ಹೆರವರ ಮನೆಯಲ್ಲಿ ಆತಿಥ್ಯವನ್ನು ಅಪೇಕ್ಷಿಸುತ್ತಾಳೆ; ಲೋಕ ಕ್ಕಿದು ನ್ಯಾಯವಾಗಿ ಕಂಡೀತೆ? ಕೇವಲ ಹೊಟ್ಟೆಗಾಗಿ – ಬಟ್ಟೆಗಾಗಿ, ಈ ಸುಂದರ ಶರೀರ ದುಡಿದು ದಣಿದು ಕಂದಿ ಕುಂದಿಹೋಗುತ್ತದೆ. ದಯಾ ವಂತರಿಗೆ ಮೆಚ್ಚುವ ಸ್ಥಿತಿಯೇ ಇದು? ಚೆನ್ನಮ್ಮನೆಂಬ ಸ್ತ್ರೀ ವ್ಯಕ್ತಿಯನ್ನು ಸಂಶೋಧಿಸಿ ತೆಗೆದ ಕೋದಂಡರಾಯರು, ಅವಳನ್ನು ತಮ್ಮ ನಗರದ ಶಾಲೆಗೆ ವರ್ಗಮಾಡಿದರು. ಅಧ್ಯಕ್ಷರ ಭೆಟ್ಟಿಗಾಗಿ ಒಮ್ಮೆ ಬಂದಿದ್ದವ ಳೊಡನೆ ಕ್ಷೇಮ ಸಮಾಚಾರವನ್ನು ಪ್ರಸ್ತಾವಿಸಿದ ಮೇಲೆ, ಕೋದಂಡ ರಾಯರು ಅವಳ ಉದ್ದ ತೋರಗಳನ್ನು ಕಣ್ಣಳತೆಯಿಂದ ಅಳೆದು ಅವಳ ಭಾವಿ ಜೀವನದ ಪಂಚಾಂಗಕ್ಕೆ ಅಡಿಗಲ್ಲುಹಾಕಿದರು. 'ಚೆನ್ನಮ್ಮ.. ನಿನ್ನ ವಯಸ್ಸೆಷ್ಟು?" ಎಂಬುದು ರಾಯರ ಪ್ರಶ್ನೆಯಾಗಿತ್ತು.

'ಹದಿನೆಂಟು .."

"ಹದಿನೆಂಟೇ?—" Yes. that is good ಸರಿ ಅದು ಚೆನ್ನಾಯಿತು. ನೀನು ಏಕಾಕಿನಿ ಅಲ್ಲವೇ?"

"ಹೂಂ .."

"ಹೌದು ಎನ್ನು; ನೀನು ಏಕಾಕಿನಿ ಬಂಧುಗಳ ಮನೆಯ ಬಿಟ್ಟಿ ಕೂಳನ್ನು ತಿನ್ನುತ್ತಿ .. ಸ್ವತಂತ್ರವಾಗಿ ಇರಬಾರದೇಕೆ?"

ಚೆನ್ನಮ್ಮನ ಇಡಿ ಮುಖ ಕೆಂಪಾಗಿ ನೆತ್ತರನ್ನು ಚಿಮ್ಮಿಸುವಂತಾ ಯಿತು.

"ಇಂತಹ ವಿಷಯಗಳಲ್ಲಿ ಸಂಕೋಚವೇಕೆ ಚೆನ್ನಮ್ಮ? ನನ್ನ ತಲೆ ಕೂದಲನ್ನು ನೋಡು .. ಕಪ್ಪಾದುದು ಒಂದೂ ಇಲ್ಲ. ವಯಸ್ಸು ಐವತ್ತನ್ನು ದಾಟಿ .. ನಾಳೆ .. ನಾಡಿದು .. ಆಚೆಯ ನಾಡಿದು ಅರುವ ತ್ತರ ಗಡಿ ಕಲ್ಲಿನ ಸಮೀಪಕ್ಕೆ ಕಾಲಿಡುತ್ತದೆ. ಮನೆ ತುಂಬ ಮಕ್ಕಳು. ಹೆಸರಿಗೊಂದು ಸ್ತ್ರೀವ್ಯಕ್ತಿ ಮನೆಯೊಳಗಿಲ್ಲ .. ಹೆಂಗುಸಿಲ್ಲದ ಮನೆ

ಮನೆಯೆ? ಗುಹೆಯಲ್ಲವೆ? ಗುಹೆಯನ್ನು ಮನೆಯಾಗಿ ಮಾರ್ಪಡಿಸಿದ ಪುಣ್ಯವನ್ನೇಕೆ ಕಟ್ಟಿಕೊಳ್ಳಬಾರದು?''

ಈ ಪ್ರಶ್ನೆಗೆ ಏನುತ್ತರ ಬರುವುದೋ ಎಂದು ಕೋದಂಡರಾಯರು ಆಕೆಯ ಮುಖವನ್ನು ಕಣ್ಣು ತೆಗೆಯದೆ ನೋಡಿದರು. ಏನೋ ಒಂದು ಅಭಿಪ್ರಾಯ ತುಟಿಯನ್ನು ಅಲುಗಾಡಿಸಿ ಹೊರಗೆ ಪ್ರಕಟವಾಗಲು ಪೇಚಾಡುತ್ತಿದ್ದಂತೆಯೂ, ಅದನ್ನು ಲಜ್ಜೆ ತಡೆಯುತ್ತಿದ್ದಂತೆಯೂ ಅವರಿಗೆ ಭಾಸವಾಯಿತು. ಎರಡು ನಿಮಿಷ ಉಭಯಸಂಕಟದ ಮೌನದಲ್ಲಿದ್ದ ಚೆನ್ನಮ್ಮನನ್ನು ನಿರ್ಧಾರದ ದಡದ ಕಡೆಗೆ ಹಾಯಿಸುವ ಉದ್ದೇಶದಿಂದ ಕೋದಂಡರಾಯರು ಹೀಗೆ ಆಡಿದರು; "ನೋಡು ಚೆನ್ನಮ್ಮ . . ಇಂದು ನಾನು ಅಧ್ಯಕ್ಷನಾಗಿರುವುದರಿಂದ ನಿನ್ನ ಆಗುಹೋಗುಗಳನ್ನು ವಿಚಾರಿಸುತ್ತೇನೆ. ಅಧ್ಯಕ್ಷಪದವಿಯೆಂದರೆ ಸ್ಥಿರಪಟ್ಟವಲ್ಲ. ನಾಳೆ ಇನ್ನೊಬ್ಬರು ಏರಬಹುದು. ಆಗ ನಿನ್ನ ಗತಿಯೇನಾಗುವುದೋ ನೋಡು. ಮಲೆಜ್ವರದಿಂದ ಹಿಂಡಿ ಹಿಪ್ಪೆಯಾಗಿದ್ದ ನಿನ್ನನ್ನು ಈ ಇಂದ್ರನಗರಕ್ಕೆ ಬರಮಾಡಿಸಿದ ನಾನು, ನಾಳೆಯೆ ಕಣ್ಣುಮುಚ್ಚಿದೆನೆಂದು ಭಾವಿಸಿಕೊ. ಹೊಸ ಅಧ್ಯಕ್ಷರು 'ಈ ಹುಡುಗಿ ನನ್ನನ್ನು ಕಂಡಾಗ ಮುಖ ಮುದುಡಿಸಿಕೊಂಡಳು' ಎಂಬಂತಹ ಟೊಳ್ಳು ಕಾರಣದಿಂದ ಸಂಪಾಜೆ ಗಟ್ಟದ ತುದಿಗೆ ನಿನ್ನನ್ನು ವರ್ಗಾಯಿಸಿ ಬಿಟ್ಟರೆ? ಚೆನ್ನಾಗಿ ಆಲೋಚಿಸು . . ನಾನಿರುವಷ್ಟು ಕಾಲ ನೀನೂ ಇಲ್ಲಿರುವೆ . . ಇಲ್ಲದಾಗುವಾಗ ಏನಾಗುವೆಯೊ ದೇವನೇ ಬಲ್ಲ . . ಮತ್ತೆ ಈ ಉಪಾಧ್ಯಾಯ ವೃತ್ತಿ . . ಯಾವುದಕ್ಕೂ ಆಗದ ಗೊಡ್ಡುಗಳು ಇದಕ್ಕೆ ಬರುತ್ತಾರಲ್ಲದೆ ಒಂದಿಷ್ಟು ಸ್ವತಂತ್ರ ಶಕ್ತಿಯುಳ್ಳವರು ಈ ಹದಿನೈದು ರುಪಾಯಿಯ ಸಂಬಳಕ್ಕಾಗಿ ಕೊಳೆತು ಸಾಯುತ್ತಾರೆಯೆ? ಉಪಾಧ್ಯಾಯ ವೃತ್ತಿ ಪವಿತ್ರವೆಂದು ಬಾಯಿಯಲ್ಲಿ ಹೇಳದೆ ನಿರ್ವಾಹವಿಲ್ಲ . . ಈ ಉಪಚಾರೋಕ್ತಿಯನ್ನೂ ಕೊಡದಿದ್ದರೆ ಆ ಬಡ ಪ್ರಾಣಿಗಳು ಹೇಗೆ ಬದುಕುತ್ತಿರಬೇಕು? ನಿನ್ನ ಮುಂದೆ ಎರಡು ಸಂಭವಗಳನ್ನಿಡುತ್ತೇನೆ . . ಹೀಗೆಯೆ . . ಹದಿನೈದು . . ಹದಿನಾರು . . ಹದಿನೇಳು . . ಎಂಬ ಹಂತಗಳನ್ನು ಏರಿ ಏರಿ, ಮೂವತ್ತೈದು ದೊರೆಯುವ ಕಾಲಕ್ಕೆ ಹಲ್ಲುಗಳನ್ನು ಕಳೆದುಕೊಂಡು ಕೂದ

ಲನ್ನು ಬಿಳಿದಾಗಿಸಿಕೊಂಡು ಶ್ಮಶಾನಯಾತ್ರೆಗೆ ಗಂಟುಮೂಟೆ ಕಟ್ಟು ವುದು ವಾಸಿಯೆ? ಅಥವಾ ಇಂದೇ ಸ್ವತಂತ್ರಳಾಗಿ, ಗರತಿಯಾಗಿ, ಹಾಗೂ ನಿನ್ನ ಅಪೇಕ್ಷೆಯಾದರೆ ಹಲವು ಸಾವಿರಗಳ ಒಡತಿಯಾಗಿ, ಲೋಕದಲ್ಲಿ ನಿನಗಿಂತ ನಿಕೃಷ್ಟರಾಗಿರುವವರನ್ನು ಕಂಡು ಸಾವಕಾಶ ವಾಗಿ ಕನಿಕರಪಟ್ಟು ನಿಟ್ಟುಸಿರು ಬಿಡುವುದು ವಾಸಿಯೆ? ನೀನೇ ಹೇಳು."

ಈ ಕುರಿತು ಬಹಳವಾಗಿ ಚರ್ಚೆ ನಡೆಯಲಿಲ್ಲವೆಂದು ತೋರು ತ್ತದೆ. ಮರುದಿನವೇ ಚೆನ್ನಮ್ಮ ಕೆಲಸಕ್ಕೆ ರಾಜಿಕೊಟ್ಟಳು. ಕೋದಂಡ ರಾಯರ ಸ್ತ್ರೀಶೂನ್ಯ ಭವನದಲ್ಲಿ ಕೋಮಲ ಕಂಠವೊಂದು ಅಧಿಕಾರದ ವಾಣಿಯಲ್ಲಿ ಆಜ್ಞೆಕೊಡತೊಡಗಿತು. ಈ ಸಂಗತಿಯು ಒಂದೆರಡು ವಾರ ಕೌತುಕದ ಸುದ್ದಿಯಾಗಿ ನಗರವಾಸಿಗಳಲ್ಲಿ ಹಲವರ ಕಿವಿಗಳನ್ನು ನೆಟ್ಟಗೆ ಮಾಡಿದ್ದಿರಬೇಕು. ವರ್ಷಗಳ ಮೇಲೆ ವರ್ಷಗಳುರುಳಿದುವು. ಚೆನ್ನಮ್ಮ ಕೋದಂಡರಾಯರ ಮನೆಯನ್ನು ಪ್ರವೇಶಿಸಿದುದರಲ್ಲಿಯೂ ಅವರ ಕೌಟುಂಬಿಕ ಜೀವನದಲ್ಲಿ ಒಂದಾಗಿ ಸೇರಿದುದರಲ್ಲಿಯೂ ಯಾರಿ ಗೇನೂ ವಿಶೇಷ ತೋರಲಿಲ್ಲ. ಹೀಗೆ ಹೇಗಾಯಿತೆಂದು ಬಲುದೂರ ಕಾರಣವನ್ನು ಹುಡುಕಹೋದವರೂ ಇಲ್ಲ. ಮತ್ತೆ ಚೆನ್ನಮ್ಮನಿಗೆ ವಕೀಲ ಶ್ಯಾಮರಾಯರ ಪರಿಚಯವಾದುದು.

ಸ್ವದೇಶಿ ಚಿತ್ರಮಂದಿರ; "ಪ್ರಣಯ ಭಂಗ"ವೆಂಬ ರೋಮಾಂಚಕರ ಚಿತ್ರಪ್ರದರ್ಶನ. ಮಕ್ಕಳು ಹಟಹಿಡಿದುವು. ಚೆನ್ನಮ್ಮ ಅವುಗಳನ್ನು ಬಗ ಲಿಗೆ ಸೇರಿಸಿಕೊಂಡು ಚಿತ್ರಮಂದಿರದ ಕಡೆಗೆ ನಡೆದಳು. ಮೇಲ್ತರ ಗತಿಯ ಆಸನದಲ್ಲಿ ಕುಳಿತಿದ್ದಳು. ಚಿತ್ರಾರಂಭವಾಗುವ ಕಾಲಕ್ಕೆ ಈ ಉಪ್ಪರಿಗೆಯ ಕುರ್ಚಿ ಸಾಲುಗಳು ಖಾಲಿಯಾಗಿಯೆ ಇದ್ದುವೆನ್ನ ಬಹುದು. ಸಭಾಮಂದಿರದ ಬಾಗಿಲನ್ನು ಹಾಕಿ ಕತ್ತಲೆಮಾಡಿ ಚಲ ಚಿತ್ರವನ್ನು ತೋರಿಸುತ್ತಾರೆ ಎನ್ನುವಷ್ಟರಲ್ಲಿ ದೊಡ್ಡ ಮನುಷ್ಯರೊಬ್ಬರು ಬಾಗಿಲನ್ನು ರಭಸದಿಂದ ದೂಡಿ ಒಳಹೊಕ್ಕರು. ಮೆಂಚೆಸ್ಟರ್ ಮಲ್ಲ ನ್ನುಟ್ಟು, ತೆಳ್ಳಗಿನ ನೀಳ ಜುಬ್ಬವನ್ನು ತೊಟ್ಟು, ಅವರ ಕ್ರೇಪ್ ಬಾಚಿದ ಮುಖದ ಮೇಲೆ ಹುರಿಮೀಸೆಗಳು ಬೀಸುತ್ತಿದ್ದುವು. ಕಾಲಿಗೆ ಬರಿಯ ಕ್ರೋಮ್ ಚರ್ಮದ ಚಂದದ ಜೋಡುಗಳು. ಹೆಗಲ ಮೇಲೆ ಅಜಾ

ಗರೂಕತೆಯಿಂದ ಹಾಕಿಕೊಂಡ ಕರಿಯಂಚಿನಬಿಳಿ ರೇಶ್ಮೆಯ ಶಾಲು. ಪದೇ ಪದೇ ಕೈಯಿಂದಜಾರಿಬೀಳುವ ಬೆತ್ತ. . . ಯಾವುದಕ್ಕೂ ಬಿಡು ವಿಲ್ಲ ಎನ್ನುವಂತಹ ವ್ಯಕ್ತಿಗಳಲ್ಲಿ ಎಷ್ಟು ಅಜಾಗರೂಕತೆಯಿರ ಬಹುದೋ ಅಷ್ಟೇ ಗಡಿಬಿಡಿ ಅವರ ಮುಖಭಾವದಲ್ಲಿಯೂ ವೇಷಭೂಷ ಣಗಳಲ್ಲಿಯೂ ಸ್ಪಷ್ಟವಾಗಿ ಕಂಡುಬರುತ್ತಿತ್ತು. ಅವರು ಅವಸರದಿಂದ ಬಂದು ಇದು ಸ್ತ್ರೀಯರಿಗಿಟ್ಟ ಸ್ಥಾನ ಎಂಬುದನ್ನು ಗಮನಕ್ಕೆ ತಾರದೆ ಚೆನ್ನಮ್ಮನಿಂದ ಎರಡು ಕುರ್ಚಿಯ ದೂರದಲ್ಲಿ ಈ ಕಡೆ ಆಸನಗ್ರಹಣ ಮಾಡಿದುದರಲ್ಲಿ ಆಶ್ಚರ್ಯವೇನೂ ಇಲ್ಲ. ಅವರ ಅಜಾಗರೂಕತೆ ಅಂತಹದು!

ಕಥೆಯ ಕೋಲಾಹಲವೇ ಕೋಲಾಹಲ. ಸಭಿಕರ ಗದ್ದಲ; ಸಿಳ್ಳು; ಕೈಚಪ್ಪಾಳೆ, ನಾಯಕನು ನಾಯಕಿಯನ್ನು ಕಂಡು ಅನೇಕ ಚೇಷ್ಟೆಗಳನ್ನು ಆರಂಭಿಸುತ್ತಾನೆ. ಪ್ರಥಮ ದರ್ಶನವಾದುದರಿಂದ ನಾಯಿಕೆಗೆ ಸ್ವಲ್ಪ ನಾಚಿಕೆ; ಅಡಿಗಣ್ಣಿನಿಂದ ನೋಡಬೇಕಾಗುತ್ತದೆ. ನಾಯಕನ ದೃಷ್ಟಿ ಬಿದ್ದೊಡನೆ ಪೊಲೀಸನ ಕೈಯಿಂದ ತಪ್ಪಿಸಿಕೊಂಡು ಓಡುವ ಕೈದಿಯಂತೆ ಅವಳ ನೋಟ ದಾರಿ ತಪ್ಪಿಸಿ ಓಡುತ್ತದೆ. ಹೀಗೆ ಸ್ವಲ್ಪಕಾಲ ವ್ಯಾಪಾರ ನಡೆದು ಕೊನೆಗೆ ನಾಯಕನು ಹಿಂಬದಿಯಿಂದ ಬಂದು ನಾಯಿಕೆಯ ಕಣ್ಣುಗಳನ್ನು ಕೈಯಿಂದ ಬಿಗಿ ಹಿಡಿಯುವಾಗ ಕೇಳುವುದೇನು? ಇಡೀ ಸಭಾರಂಗವು ಗದ್ದಲದಿಂದ ಎದ್ದು ಹಾರು ವಂತಾಯಿತು. ಶ್ಯಾಮರಾಯರೂ ಹಾರಿದರು. ತಮ್ಮ ಕುರ್ಚಿಯಿಂ ದೆದ್ದು ಪಕ್ಕದ ಕುರ್ಚಿಯಲ್ಲಿ ಹಾರಿ ಕುಳಿತರು. ಸ್ವಲ್ಪ ಸಮಯದಲ್ಲಿ ಒಂದಂಕ ಮುಗಿದುಹೋಯಿತು. ಆ ಅಂಕದ ಕೊನೆಯಲ್ಲಿ ಬೆಳಕಾ ದಾಗ ಬಂದ ವ್ಯಕ್ತಿ ಚೆನ್ನಮ್ಮನ ಒತ್ತಿನ ಆಸನದಲ್ಲಿ ಕುಳಿತಿತ್ತು. ಆವೇಶ ಅಂತಹದು; ಉದ್ವೇಗ ಅಂತಹದು. ನಾಯಕ ನಾಯಿಕೆಯರ ಸ್ವಾಭಾ ವಿಕ ನಟನೆಯ ರಸಾಸ್ವಾದನದಲ್ಲಿ ಮೈಮರೆತಿದ್ದ ಅವರಿಗೆ ತಾವು ಯಾರೆಂದೇ ತಿಳಿಯಲಿಲ್ಲ. ಯಾರೆಂದು ತಿಳಿಯದಿದ್ದರೂ ಪಕ್ಕದಲ್ಲಿಯೇ ಕುಳಿತಿರುವೆನೆಂಬುದು ತಿಳಿಯದೆಯೂ ಇರಲಿಲ್ಲ.

ಚೆನ್ನಮ್ಮನ ಪಕ್ಕದಲ್ಲಿ ಹೊಸಬರು ಒಬ್ಬರೆ; ಹೊಸಬರ ಒತ್ತಿನಲ್ಲಿ

ಚೆನ್ನಮ್ಮನೊಬ್ಬಳೆ . . ಅವಳ ಜೊತೆಯಲ್ಲಿ ಬಂದಿದ್ದ ಮಕ್ಕಳು ಕುರ್ಚಿ ಯಿಂದ ಕುರ್ಚಿಗೆ ದಾಟುತ್ತಾ ಹೋಗಿ ನಾಲ್ಕಾರು ಸಾಲು ಹಿಂದಿನ ಕುರ್ಚಿಗಳಲ್ಲಿ ಕುಳಿತು ಗಹಗಹಿಸಿ ನಗುತ್ತಿದ್ದುವು ಚೆನ್ನಮ್ಮ ಅವರನ್ನು ಗದರಿಸಲಿಲ್ಲ; ಅವರನ್ನು ನೋಡಿ ನಸುನಗುವೊಂದನ್ನು ಬೀರಿ ಸುಮ್ಮ ನಾದಳು. ಬಂದವರಿಗೆ ಮೌನವ್ರತ ಬಿಡುವುದಕ್ಕೆ ಇದೇ ಸುಸಂ ದರ್ಭವೆಂದು ತೋರಿತು. "ಯಾರು ತಮ್ಮ ಮಕ್ಕಳೆ . .?" ಎಂದು ಹೊಸಬರು ಕುರ್ಚಿಯಿಂದೆದ್ದು, ಅವಶ್ಯವಿದ್ದರೆ ಆ ಮಕ್ಕಳನ್ನು ಹೆಡ ಮುರಿಗಟ್ಟಿ ತಂದೊಪ್ಪಿಸುವುದಕ್ಕೆ ಸಿದ್ಧತೆಯನ್ನೂ ತೋರಿಸಿದರು . . "ಸುಡುಗಾಡಿನ ಮಕ್ಕಳು . . ಅಲ್ಲೇ ಇರಲಿ; ಬಿದ್ದು ಸಾಯಲಿ . .ನಿಮಗೆ ಬೇರೆ ಕೆಲಸವಿಲ್ಲವೆ? ಕುಳಿತುಕೊಳ್ಳಿ ನೋಡೋಣ" ಎಂದು ಚೆನ್ನಮ್ಮ ಹುಕುಂ ಕೊಟ್ಟಳು . .

"ಇಲ್ಲಿಯೇ ಕುಳಿತಿರಬೇಕೆ? ಕ್ಷಮೆ ಬೇಡಬೇಕೆಂದಿದ್ದೆ . . ಕತ್ತಲೆ ಯಲ್ಲಿ ಗಂಡುಸರ ಸ್ಥಾನವಾವುದು, ಹೆಂಗುಸರ ಸ್ಥಾನವಾವುದೆಂದು ತಿಳಿಯದೆ ನಿಮ್ಮ ಪಕ್ಕದಲ್ಲಿ ಕುಳಿತುಬಿಟ್ಟೆ;"

"ಕ್ಷಮೆಗೆ ಕಾರಣವಿಲ್ಲ. ಸ್ತ್ರೀಯರ ಪಕ್ಕದಲ್ಲಿ ಬಂದು ಕುಳಿತು ಕೊಳ್ಳುವವರು ಅಸಭ್ಯರೆಂದಾಗಲಿ, ದೂರದಲ್ಲಿ ನೋಡುತ್ತಾ ನಿಲ್ಲು ವವರು ಸಭ್ಯರೆಂದಾಗಲಿ . . ಕಾನೂನಿನಲ್ಲಿ ಬರೆದಿಲ್ಲ. ನನಗೂ ಹಾಗಾ ಯಿತು ನೋಡಿ . . ಚಿತ್ರದ ಸ್ವಾರಸ್ಯದಲ್ಲಿ ಮಗ್ನಳಾದವಳಿಗೆ ಒಂದು ಕುರ್ಚಿಯನ್ನು ಬಿಟ್ಟು ಇನ್ನೊಂದಕ್ಕೆ ಹೋದುದು ತಿಳಿಯಲೇ ಇಲ್ಲ . ."

"ಹಾಗಾದರೆ ನೀವೂ ನನ್ನಂತೆ ಅಪರಾಧ ಮಾಡಿದಿರಿ?"

"ಅಪರಾಧವಾದರೆ ಅಪರಾಧ; ಅದನ್ನು ಮಾಡಿದೆ."

"ಇಂತಹ ಅಪರಾಧ ಆಗದೆ ಹೇಗಿದ್ದೀತು? ಕಥೆಯು ಸ್ವಭಾವ ನಟನೆಯು ಅಷ್ಟು ಮೋಹಕವಾಗಿತ್ತು."

"ಪರಸ್ಪರವಾಗಿ ಕ್ಷಮಿಸಬೇಕಾದ ಸಂದರ್ಭ ಇಲ್ಲವೆಂದಿಷ್ಟೆ ಹೇಳಿದೆ."

"ಪರಸ್ಪರವಾಗಿ ಅಭಿನಂದಿಸಿಕೊಳ್ಳಬೇಕಾಗಿದೆ-ಎಂಬ ಮಾತನ್ನು ನಾನು ಕೂಡಿಸಿ ಬಿಡುತ್ತೇನೆ."

ಚೆನ್ನಮ್ಮನೊಮ್ಮೆ ಸೂಕ್ಷ್ಮವಾಗಿ, ಬಂದವರ ಕಡೆಗೆ ನೋಡಿದಳು. ಅವರು ನಸುನಗುವಿನ ಮೊಗವನ್ನೊಡ್ಡಿ ಅವಳ ದೃಷ್ಟಿಯ ದಾಳಿಯನ್ನು ಇದಿರಿಸಿದರು . . ಯಾರು ಸೋತರೋ ಯಾರು ಗೆದ್ದರೋ ಹೇಳಬರುವುದಿಲ್ಲ. ಚೆನ್ನಮ್ಮ "ಕಂಡ ಮುಖದ ಹಾಗಿದೆಯಲ್ಲ!" ಎಂದು ಉದ್ಗರಿಸಿದಳು.

"ನಾನೂ ಮುಂಚೆ ಕಂಡ ಮುಖವೇ ಇದು."

"ನೀವೂ ಕಂಡಿದ್ದೀರಿ; ನಾನೂ ಕಂಡಿದ್ದೇನೆ . . ಎಲ್ಲಿ ಹೇಗೆ . . ತಿಳಿದಿಲ್ಲ" ಎಂದು ನಗುವಿನ ಮುಚ್ಚಳದಿಂದ ಮಾತನ್ನು ಹೊರಡಿಸಿದಳು ಚೆನ್ನಮ್ಮ. .

"ಎಲ್ಲಿ ಹೇಗೆ? ಎಂಬ ವಿಚಾರ ಬೇಕಾಗಿಯೇ ಇಲ್ಲ. ಹೀಗೆ ಅತಿಯಾಗಿ ಹುಡುಕುವುದರಿಂದಲೇ ಮನುಷ್ಯರು ಹಾಳಾಗುತ್ತಾರೆ. ನಾವು ಹಿಂದೆ ಎಲ್ಲಿಯೋ ಹೇಗೋ ಕಂಡುದಿರಬಹುದು; ಇಂದು ಪ್ರತ್ಯಕ್ಷವಾಗಿ ಇಲ್ಲಿ ಪರಸ್ಪರ ಮುಖ ಪರಿಚಯ ಮಾಡಿಕೊಳ್ಳುತ್ತೇವೆ ಎಂದರೆ ಸಾಲದೆ?"

"ಮುಖದೊಡನೆ ಹೃದಯ ಪರಿಚಯವೂ ಆಗುತ್ತದೆ."

"ಆಗದೆ ಹೇಗಿದ್ದೀತು? ಹೃದಯವು ಮುಖದ ಮೂಲಕ ಹೊರಟು ಬರುವುದಲ್ಲವೆ? ಆ ಚಿತ್ರದಲ್ಲಿ ಏನಾಯಿತು ನೋಡಿ!"

"ನಿಜ; ಅದನ್ನೇ ನಾನಾದರೂ ಹೇಳುತ್ತಿರುವುದು. ಮುಖದ ಪರಿಚಯವಲ್ಲದೆ ಹೆಸರಿನ ಪರಿಚಯವೂ ಬೇಕಾಗಿದ್ದರೆ ಕೇಳಿ....ನನ್ನ ಹೆಸರು ಶ್ಯಾಮರಾಯನೆಂದು"

"ಶ್ಯಾಮರಾಯರು!" ಚೆನ್ನಮ್ಮ ಬೆಚ್ಚಿಬಿದ್ದಳು........

"ಹೌದು! ಇದರಲ್ಲೇನು ಆಶ್ಚರ್ಯ?"

ಆಶ್ಚರ್ಯವೇಕೆ? ಎಂಬುದು ಚೆನ್ನಮ್ಮನಿಗೇ ಗೊತ್ತು. ಕೋದಂಡರಾಯರಿಗೆ ನ್ಯಾಯಸ್ಥಾನದಲ್ಲಿ ದಾವೆಗಳು ಬಹಳ ಪ್ರತಿಯೊಂದರಲ್ಲಿಯೂ ಅವರ ಪ್ರತಿ ಕಕ್ಷಿಗಳ ಕಡೆಯಿಂದ ಶ್ಯಾಮರಾಯರೇ ವಕಾಲತ್ತು ವಹಿಸುತ್ತಿದ್ದರು. "ಶ್ಯಾಮರಾಯನೊ........ಆತ ದೊಡ್ಡ ಮಾರೀಚ; ಇನ್ನೊಂದು ನಿಮಿಷದಲ್ಲಿ ಎಂತಹ ಮಾಯಾ ಮೋಸಮಾಡುತ್ತಾನೋ

ಹೇಳಬರುವುದಿಲ್ಲ-''ಎಂದು ಕೋದಂಡರಾಯರು ಪದೇ ಪದೇ ಹೇಳು ತ್ತಿದ್ದ ಮಾತು ಆಗ ಅವಳ ಕರ್ಣ ಕುಹರದಲ್ಲಿ ಪ್ರತಿಧ್ವನಿಸಿತು.

"ಏಕೆ ಸುಮ್ಮನಾದಿರಿ? ಶ್ಯಾಮರಾಯ ಎಂಬ ಹೆಸರಿನಲ್ಲಿ ಯಾವ ದೋಷ ಕಂಡಿರಿ?....ಮುಂದೆ ಮಾತಾಡುವುದಕ್ಕೇ ಬರಲಿಲ್ಲ; ಏಕೆ?'' ಎಂದು ಶ್ಯಾಮರಾಯರು ಪ್ರಶ್ನೆಮಾಡಿದರು.

"ಮತ್ತೇನೂ ಕಾರಣವಿಲ್ಲ. ನನ್ನ ಪಕ್ಕದಲ್ಲಿ ಶ್ಯಾಮರಾಯರಂತಹ ಮಹಾ ಪುರುಷರು ಕುಳಿತಿದ್ದಾರೆಂದು ಈ ನಿಮಿಷದ ವರೆಗೂ ತಿಳಿಯ ಲಿಲ್ಲ.''

"ನಾವು ವಕೀಲರು........ಯಾರ ಹತ್ತಿರಕ್ಕೂ ಸೇರಿಕೊಳ್ಳಬೇಕಾ ಗುತ್ತದೆ'' ಎಂದು ಗಹಗಹಿಸಿ ನಕ್ಕರು. ಈ ನಗುವಿನಲ್ಲಿ ಚೆನ್ನಮ್ಮನಿಗೂ ಅರ್ಥ ಪಾಲುಸಿಕ್ಕಿತು.

ಚಿತ್ರದ ಮತ್ತಿನ ಅಭಿನಯದಲ್ಲಿ ಹಿಂದಿನಷ್ಟೆ ಸ್ವಭಾವ ರಮ್ಯತೆ ಯಿತ್ತೋ ಇಲ್ಲವೋ ತಿಳಿಯದು. ಚೆನ್ನಮ್ಮನೂ ಶ್ಯಾಮರಾಯರೂ ಉಳಿದ ಸಮಯವನ್ನು ಮಾತಿನಲ್ಲಿಯೇ ಕಳೆದರು. ಮುಖಪರಿಚಯ ವಾಯಿತು; ಹೃದಯ ಪರಿಚಯವೂ ಆಗಿರಬೇಕು. ಚಿತ್ರವು ಕೊನೆ ಹೊಂದಿ ಕತ್ತಲೆಯ ಮಧ್ಯದಲ್ಲಿ ಬೆಳಗಾದಾಗ, ಇಬ್ಬರ ಹೃದಯಗಳೂ ಕತ್ತಲಿಸಿದುವು. ಇಬ್ಬರೂ ನಿಟ್ಟುಸಿರು ಕರೆದರು.

' ಹಾಗಾದರೆ ಹೋಗುತ್ತೇನೆ....ಎಂದರು ಶ್ಯಾಮರಾಯರು

'ಬರುತ್ತೇವೆ ಎನ್ನಿ....' ಎಂದಳು ಚೆನ್ನಮ್ಮ....

"ಉಪಚಾರಕ್ಕಾಗಿ ನಾನು ಆ ಮಾತನ್ನೆ ಪ್ರತಿಧ್ವನಿಸುತ್ತೇನೆ........ ಬರಬೇಕಾದವರು ನೀವು....ನನ್ನ ಕಚೇರಿ ತೇರಬೀದಿಯ ಕೊನೆಯ ಕೋ ರಿಯಲ್ಲಿ''-ಎನ್ನುತ್ತಾ ವಕೀಲ ಶ್ಯಾಮರಾಯರು ಅಂತರ್ಧಾನ ಹೊಂದಿ ದರು. ಅವರ ಹಿಂದೆ ಚೆನ್ನಮ್ಮನೂ ಕಣ್ಮರೆಯಾದಳು

* * * * *

ಕೋದಂಡರಾಯರ ಗ್ರಹಕುಂಡಲಿಯಲ್ಲಿ ವಕೀಲ ಶ್ಯಾಮರಾಯರಿ ಶನಿಯಾಗಿ ಕಾಣಿಸಿಕೊಂಡಿದ್ದರೆಂಬುದು ತಿಳಿದು ಬಂದಿದೆ. ಈಗ ನಡೆ ಯುತ್ತಿರುವ ದಾವೆಯಲ್ಲಿ ಚೆನ್ನಮ್ಮನ ಪಕ್ಷವನ್ನು ವಹಿಸಿದುದರಲ್ಲಿ

ಆಶ್ಚರ್ಯವಿಲ್ಲ. ಚಲಚ್ಚಿತ್ರ ಮಂದಿರದಲ್ಲಿ ಅವರಿಬ್ಬರ ಸಂದರ್ಶನವಾಗಿ ವರ್ಷಗಳು ಕಳೆಯುವುದರೊಳಗೆ ಚೆನ್ನಮ್ಮ ಕೋದಂಡರಾಯರ ಮೇಲೆ ದಾವೆ ಹೂಡಿದಳು.

ಒಂದು ದಿನ ಬೆಳಗ್ಗೆ ಚೆನ್ನಮ್ಮ ಕೋದಂಡರಾಯರ ಮನೆಯನ್ನು ಬಿಟ್ಟಳು. ಅವಳು ಅನೇಕ ಹೊಸ ಶೋಧಗಳನ್ನು ಮಾಡಿದ್ದಳು. ಕೋದಂಡರಾಯರು ಹುಚ್ಚು ಮುದುಕರು; ಮದ್ಯಪಾಯಿಗಳು; ದುರಾಚಾರಿಗಳು; ಕಾನೂನಿನ ಕ್ರಮದಿಂದ ಕೈಹಿಡಿದ ಹೆಂಡತಿಗೆ ನರಕಯಾತನೆಯನ್ನು ಕೊಡುತ್ತಾರೆ! -ಈ ಸಂಗತಿ ಊರ ಜನರಿಗೆ ತಿಳಿದಿರಲಿಲ್ಲ. ಚೆನ್ನಮ್ಮನ ಅಂತರಾತ್ಮಕ್ಕೂ ತಿಳಿದಿರಲಿಲ್ಲ. ಅವಳ ಬಹಿರಾತ್ಮವಾಗಿದ್ದ ಶ್ಯಾಮರಾಯರು "ಇಂತಹ ಸಾಧನೆಯಿಲ್ಲದೆ ಆ ಮುದಿ ಕೋತಿಯಿಂದ ಹೇಗೆ ಬಿಡುಗಡೆ ಹೊಂದುತ್ತಿ?" ಎಂದು ಕೇಳಿದುದಕ್ಕೆ ಚೆನ್ನಮ್ಮ "ಹಾಗೆಯೇ ಆಗ"ಲೆಂದು ಉತ್ತರಕೊಟ್ಟಳು.

ಕೊನೆಗೆ ವ್ಯವಹರಣೆಗೆ ಪ್ರಾರಂಭವಾಯಿತು. ವಾದಿಪ್ರತಿವಾದಿಗಳ ವಾಜ್ಮೂಲಗಳಾದುವು. ಪುರೋಹಿತರಿಲ್ಲದಿದ್ದರೂ, ವೈದಿಕವಿಧಿ ಸಮ್ಮತವಾಗಿ ಅಲ್ಲದಿದ್ದರೂ, ಚೆನ್ನಮ್ಮ ಕೋದಂಡ ರಾಯರನ್ನು ವಿವಾಹವಾಗಿರುವಳು; ಅಥವಾ ಕೋದಂಡ ರಾಯರು ಚೆನ್ನಮ್ಮನನ್ನು ಪಾಣಿಗ್ರಹಣದಿಂದ ಸ್ವೀಕರಿಸಿರುವರು; ಎಂಬುದಕ್ಕೆ ರಿಜಿಸ್ಟ್ರಿ ಕಚೇರಿಯ ಆಧಾರವು ಸಾಕಾಯಿತು. ಆದರೆ ಗಂಡ ಹೆಂಡತಿಯನ್ನು ಪೀಡಿಸುತ್ತಿದ್ದಾನೆ-ಎಂಬುದು ಋಜುವಾಗುವುದಾದರೂ ಹೇಗೆ? ಅದಾಗದೆ ಚೆನ್ನಮ್ಮ ಕೋದಂಡ ರಾಯರ ಪತ್ನಿ ಎಂದಿಷ್ಟೆ ಸ್ಥಾಪಿತವಾಗುವುದರಿಂದ ಬರುವ ಲಾಭವೇನು? ಆ ಮುದಿ ಗೂಬೆಯನ್ನು ಕೈಹಿಡಿದ ತನ್ನ ಜನ್ಮ ವ್ಯರ್ಥ ಎಂಬ ವೈರಾಗ್ಯವಲ್ಲದೆ ಮತ್ತೇನೂ ಇಲ್ಲ. ಶ್ಯಾಮರಾಯರು ಸಾಕ್ಷಿಗಳನ್ನು ತನ್ನಿ ಎಂದರು. ಸಾಕ್ಷಿಗಳನ್ನು ಎಲ್ಲಿಂದ ತರೋಣ? ಆಪಾದನ ಕ್ರಮವನ್ನು ಕಲಿಸಿದವರು ನೀವೇ ಆಗಿರುತ್ತಾ ಸಾಕ್ಷಿಗಳನ್ನೂ ನೀವೆ ನಿರ್ಮಿಸಬೇಕಾಗಿದೆ-ಎಂದು ಕಣ್ಣೀರು ತುಳುಕಿಸುವ ನೋಟದಿಂದ ನೋಡಿ, ನಡುಗುವ ತುಟಿಯಿಂದ ಮಾತುಗಳನ್ನು ಚೆಲ್ಲಿದಳು ಚೆನ್ನಮ್ಮ...."ಈ ಸುಂದರ ವಸ್ತು ದುಃಖದಿಂದ ಬಾಡಿ ಬಸವಳಿಯುತ್ತದೆ. ಇದರ ಕಷ್ಟವನ್ನು ನೋಡಿ

ಸಹಾನುಭೂತಿ ತೋರುವ ಮನುಷ್ಯ ವ್ಯಕ್ತಿ ಒಂದೂ ಇಲ್ಲವೆ?'' ಎಂದು ವಕೀಲರು ತಮ್ಮಲ್ಲಿ ತಾವೇ ಪ್ರಶ್ನಿಸಿಕೊಂಡರು.

ಕೊನೆಗೆ "ಆಗಲಿ ಚೆನ್ನಮ್ಮ, ದೇವರಲ್ಲಿ ವಿಶ್ವಾಸವಿಡುವಂತೆ ನನ್ನಲ್ಲಿ ನಂಬಿಕೆಯಿಡು; ಆಗುವುದೆಲ್ಲ ನಮ್ಮ ಹಿತಕ್ಕಾಗಿ ಎಂದು ಭಾವಿಸಿಕೊ.... ಇಂತಹ ದೃಢನಿಶ್ಚಯದಿಂದ ಲೋಕವನ್ನೂ ಕೋದಂಡ ರಾಯರನ್ನೂ ಒಟ್ಟಾಗಿ ಇದಿರಿಸುವೆಯಂತೆ"-ಎಂದು ನಿರ್ಧಾರದ ಗಟ್ಟಿ ದನಿಯಲ್ಲಿ ಆಡಿದರು ವಕೀಲರು.

"ದೇವರಲ್ಲಿ ವಿಶ್ವಾಸ ಆ ಮೇಲೆ; ನಿಮ್ಮಲ್ಲಿ ವಿಶ್ವಾಸ ಮೊದಲು'' ಎಂದು ಚೆನ್ನಮ್ಮ ಭರವಸೆಯಿತ್ತಳು.

ಅತಿ ದೀರ್ಘ ವಿಚಾರಣೆಯ ಅನಂತರ ನ್ಯಾಯಾಧೀಶರ ತೀರ್ಮಾನವು ಹೊರಬಿತ್ತು. ಕೋದಂಡ ರಾಯರ ಪ್ರತಿಪಾದನೆ ಅಕ್ಷರಶಃ ಸತ್ಯ. ಚೆನ್ನಮ್ಮನದು ಹಸಿ ಸುಳ್ಳು. ರಿಜಿಸ್ಟ್ರಿ ಮದುವೆ ಆಗಿದ್ದಿರಬಹುದು; ಆದರೆ ವಿಚ್ಛೇದಕ್ಕಾಗಲಿ ಭಿನ್ನವಸತಿಗಾಗಲಿ, ಜೀವನಾಂಶಕ್ಕಾಗಲಿ ಯಾವ ಕಾರಣವೂ ಇಲ್ಲ. ವಿಷಮ ಸಂಬಂಧದ ಕಾರಣದಿಂದ ಇರಬಹುದು; ಅಥವಾ ಬೇರೆ ಕಾಣದ ಮಹತ್ವಾಕಾಂಕ್ಷೆಯ ದುಷ್ಪರಿಣಾಮದಿಂದ ಇರಬಹುದು; ಆಮುದಿ ಧನಿಕರನ್ನು ಸುಲಿದು ಸ್ವಚ್ಛಂದವಾಗಿ ವ್ಯವಹರಿಸಬೇಕೆಂದೆಣಿಸಿದ ಈ ಹೆಣ್ಣಿಗೆ ಯಾವ ಪರಿಹಾರ ಕೊಡಬಹುದು? ಕೋದಂಡರಾಯರು ಮನಸ್ಸನ್ನು ಉದಾರಗೊಳಿಸಿ ಚೆನ್ನಮ್ಮನಂತಹ ನಡತೆಯವಳನ್ನು ಮನೆಯೊಳಗೆ ಇರಿಸಿಕೊಂಡು ಒಡ ಬಾಳಲು ಸಿದ್ಧರಾಗಿದ್ದಾರೆಎಂದ ಮೇಲೆ ಪ್ರತಿವಾದಿಯಾದ ಗಂಡನ ಅಪರಾಧವೇನೂ ಇಲ್ಲ. ಹೆಂಡತಿ ಕ್ಷಮೆ ಬೇಡಿ ಗಂಡನ ಔದಾರ್ಯಕ್ಕೆ ಒಪ್ಪುವಂತೆ ತನ್ನ ಆಚಾರವನ್ನು ಸೆಗಣಿ ನೀರಿನಿಂದ ಶುದ್ಧೀಕರಿಸಿ ಒಂದೇ ಮನೆಯಲ್ಲಿ ಬಾಳತಕ್ಕುದು-ಎಂದು ನ್ಯಾಯಾಧೀಶರು ತೀರ್ಮಾನಿಸಿದರು.

ಈ ತೀರ್ಮಾನವನ್ನು ಕೇಳಿದಾಗ, ಆಕಾಶ ಮಾತ್ರವಲ್ಲ; ಅಖಿಲ ಬ್ರಹ್ಮಾಂಡಗಳೂ ತನ್ನ ತಲೆಯ ಮೇಲೆ ಕೆಡೆದಂತಾಯಿತು ಚೆನ್ನಮ್ಮನಿಗೆ........ಈ ವ್ಯಸನದ ಮಧ್ಯದಲ್ಲಿ ತಾನು ಕೆಟ್ಟೆನೆಂಬ ಅರಿವಾಯಿತು. ವಕೀಲ ಶ್ಯಾಮರಾಯರು ಒಳ್ಳೆಯ ಮುತವರ್ಜಿ ವಹಿಸಿ ತನ್ನ ಪಕ್ಷದಿಂದ

ವ್ಯವಹರಣೆಯನ್ನು ಮಾಡಲಿಲ್ಲ; ಯಾರೋ ಒಬ್ಬ ವಕೀಲನಿಂದ ಏನೋ ಹೇಳಿಸಿದರು. ಇದರ ಕಾರಣ ತಿಳಿಯಲಿಲ್ಲ. ಕಾವಲಿಯಿಂದ ಒಲೆಗೆ ಬಿದ್ದಂತಾಯಿತಲ್ಲ? ' ಪ್ರಣಯ ಭಂಗ" ಎಂಬ ಚಲಚ್ಚಿತ್ರ ಜೀವಿತ ಭಂಗಕ್ಕೆ ಕಾರಣವಾಯಿತಲ್ಲ? ವಕೀಲ ಶ್ಯಾಮರಾಯರು ಕೋದಂಡರಾಯರಿಗೆ ಶನಿಯಾಗುವುದರ ಬದಲು ಚೆನ್ನಮ್ಮನಿಗೇ ಶನಿ ಯಾದರು. ಹೀಗೆ ಏಕಾಯಿತು? ಏಕೆ? ಶ್ಯಾಮರಾಯರಲ್ಲಿಗೆ ಹೋಗಿ ಅವರನ್ನು ಇದಿರಿಸಿ ಸತ್ಯಸಂಗತಿಯನ್ನು ಅವರ ಬಾಯಿಯಿಂದಲೇ ಕಾರಿ ಸಬೇಕೆಂದು ಚೆನ್ನಮ್ಮ ದೃಢಸಂಕಲ್ಪಮಾಡಿದಳು; ಧೈರ್ಯವನ್ನು ವಹಿಸಿದಳು.

* * * * *

ಶ್ಯಾಮರಾಯರು ತಮ್ಮ ಕಚೇರಿಯ ಮಾಳಿಗೆಯಲ್ಲಿ ವಿರಾಮ ವೇತ್ರಾಸನದಲ್ಲಿ ಕುಳಿತಿದ್ದರು. ಸಂಜೆಯ ನೆರಳು ಇಳಿಯುತ್ತಿತ್ತು. ತಂಗಾ ಳಿಬೀಸುತ್ತಿತ್ತು. ಕಾದಂಬರೀಕಾರರು ಹೇಳುವಂತೆ ಕೈಕಾಲುಗಳನ್ನು ಚಾಚಿ ಅವರು ಹಾಯಾಗಿ ಕುಳಿತಿದ್ದರು. ಅಥವಾ ಮನಸ್ಸಿನ ಹಾಯಿ ಯನ್ನು ಬಿಚ್ಚಿ ಗಾಳಿಯಲ್ಲಿ ಅಲೆದಾಡ ಬಿಡುತ್ತಿದ್ದರೋ ಏನೊ....ಅವರ ಮನಸ್ಸೆಂಬುದು ಹಡಗಿನಂತೆ ಭಾವನಾತರಂಗಗಳ ಮೇಲೆ ನರ್ತಿಸು ತ್ತಿತ್ತು. ದೂರದಲ್ಲಿ ಒಂದು ಚಿಕ್ಕ ದ್ವೀಪ; ನಿರ್ಜನ ದ್ವೀಪ. ಇದ್ದ ಜನ ಒಂದೇ ಒಂದು-ಚೆನ್ನಮ್ಮ! ಎಣ್ಣೆ ಕಪ್ಪಿನ ಬಣ್ಣವಾಗಿದ್ದರೂ ಸ್ಫುರದ್ರೂಪ; ಎದೆಯನ್ನು ಕುಕ್ಕುವ ನೋಟ; ಮರುಳಾಗಿಸುವ ನಗು; ಮುದ್ದಾಡಿಸುವ ಹಾವಭಾವ; ಆ ಕಡೆಗೆ ಪಯಣ........ಕಡಲ ಪಯಣ........ಕರ್ಣವೂ ತಮ್ಮದು; ಕರ್ಣಧಾರರೂ ತಾವೆ; ಪ್ರಯಾಣಿಕರೂ ತಾವೆ....ಎಂದು ದಡವನ್ನು ಸೇರುವುದೋ, ಎಂದು ಬಂದರಿನಲ್ಲಿ ಹಡಗವನ್ನು ನಿಲ್ಲಿಸ ಬಹುದೊ....ನಿರೀಕ್ಷಿಸುತ್ತಿದ್ದರು ಶ್ಯಾಮರಾಯರು.

ಮನುಷ್ಯರನ್ನು ಗುರುತಿಸಬಹುದು-ಬಾರದು ಎನ್ನುವಷ್ಟು ಸಮ ಯವಾದಾಗ ಫಕ್ಕನೆ ಮಾಳಿಗೆಯ ಬಾಗಿಲು ತೆರೆಯಿತು. ಬಂದ ವ್ಯಕ್ತಿ ಸ್ತ್ರೀ. ಸ್ತ್ರೀಯೆಂದರೆ ಬೇರಾರೂ ಅಲ್ಲ; ಚೆನ್ನಮ್ಮ. ಶ್ಯಾಮರಾಯರು ಬೆಳ ಕನ್ನು ಹಚ್ಚಿದರು. ಬೆಳಗಿದ ಮುಖವನ್ನು ಕಾಣಬೇಕೆಂದು ಅವರ ನಿರೀ

ಕ್ಷೆಯಾಗಿತ್ತು. ಇದೇಕೆ ಚೆನ್ನಮ್ಮನ ಮುಖ ಮತ್ತೂ ಕರಿದಾಗಿದೆ? ಬಾತು ಹೋದಂತಾಗಿದೆ? ಅಂದಿನ ಚೆನ್ನಮ್ಮನಲ್ಲ ಇಂದು.

ಚೆನ್ನಮ್ಮನ ಕಣ್ಣುಗಳಲ್ಲಿ ನೀರಿನ ಕಟಾಹವಿದ್ದಿತೆಂದು ತೋರುತ್ತದೆ; ಒಂದೇ ಸವನೆ ಧಾರೆ ಧಾರೆಯಾಗಿ ಕಣ್ಣೀರು ಸುರಿಸಿದಳು........

ವಕೀಲರು ಪಕ್ಕದ ಕುರ್ಚಿಯಲ್ಲಿ ಕುಳಿತಿರುವಂತೆ ಚೆನ್ನಮ್ಮನಿಗೆ ಸನ್ನೆಮಾಡಿದರು. "ನನ್ನನ್ನು ಕೊಂದಿರಿ. ಸಜೀವ ವಧೆಮಾಡಿದಿರಿ; ಕೊಲೆಗಡಿಕರ ಪಕ್ಕದಲ್ಲಿ ಹೇಗೆ ಕುಳಿತುಕೊಂಡೇನು?" ಎಂದು ಅವಳು ಭಯಂಕರ ಕೋಪದಿಂದ ಉತ್ತರಕೊಟ್ಟಳು.

"ಕೊಲೆಯಾದವಳು ನನ್ನ ಕಣ್ಣ ಮುಂದೆ ನಿಂತಿರುವುದು ಹೇಗೆ?"

"ಇದು ಪ್ರೇತ! ನಿಜವಾದ ರೂಪವಲ್ಲ."

"ಪ್ರೇತ ಏಕೆ ಬಂತು?"

"ಕೊಲೆಯ ಕಾರಣವನ್ನು ಕೇಳುವುದಕ್ಕೆ"

"ಕೊಲೆ ಮಾಡಿದವರಾರು?"

"ವಕೀಲ ಶ್ಯಾಮರಾಯರು!"

"ಯಾವ ಕಾರಣದಿಂದ?"

"ಯಾವುದರಿಂದಲೋ ಅದರಿಂದ"

"ನಿನ್ನ ಪ್ರಣಯ ಕೋಪ ಸಾಕು; ತಮಾಷೆ ಸಾಕು." ಎಂದು ವಕೀಲರು ಎರಡು ಹಜ್ಜೆ ಮುಂದಿಟ್ಟರು. ಅವಳು ಅಷ್ಟೇ ದೂರ ಹಿಂದಕ್ಕೆ ಸರಿದಳು.

"ಇದು ತಮಾಷೆಯಲ್ಲ; ಪ್ರಣಯ ಕೋಪವಲ್ಲ"

"ಮತ್ತೇನು?"

"ವಕೀಲ ಶ್ಯಾಮರಾಯರು ತಂದ ಪ್ರಳಯಕ್ಕಾಗಿ ಕೋಪ...."

"ಇನ್ನೊಮ್ಮೆ ಆ ಶಬ್ದವನ್ನು ಉಚ್ಚರಿಸು"

"ಪ್ರ-ಳ-ಯ"

"ಪ್ರಣಯವಲ್ಲ!"

"ಸರ್ವಥಾ ಅಲ್ಲ......."

"ಹಾಗಾದರೆ ಲೆಕ್ಕಾಚಾರ ಮುಗಿಸಿ ಬಿಡೋಣ....ಅವರವರು ಅವ

ರವರ ದಾರಿಯನ್ನು ಹಿಡಿಯೋಣ" ಎಂದು ನಿರ್ವಿಕಾರ ಚಿತ್ತದಿಂದ ವಕೀಲರು ಆಡಿದರು.

"ನಿಮಗೆ ದಾರಿಯಾದರೂ ಇದೆ; ನನಗಿಲ್ಲ"

ಆಗ ವಕೀಲ ಶ್ಯಾಮರಾಯರು 'ಈ ಪತ್ರವನ್ನು ನೋಡು' ಎಂದು ಜೇಬಿನೊಳಗಿಂದ ಲಕೋಟೆಯೊಂದನ್ನು ಹೊರ ತೆಗೆದು ಚೆನ್ನಮ್ಮನ ಮುಂದೆ ಇಟ್ಟರು. ಆಸನ ಬಹಿಷ್ಕಾರ ಮಾಡಿದ್ದ ಚೆನ್ನಮ್ಮ ಇಷ್ಟರಲ್ಲಿ ಕುರ್ಚಿಯನ್ನು ಸ್ವೀಕರಿಸಿದ್ದಳು. ರಾಯರು ಚೆನ್ನಮ್ಮನ ಕೈಗೇ ಪತ್ರವನ್ನಿತ್ತರು. "ನನಗಿದು ಅವಶ್ಯವಿಲ್ಲ" ಎಂದು ಚೆನ್ನಮ್ಮ ಗಂಭೀರ ಕ್ರೋಧ ಭಾವವನ್ನು ಪ್ರದರ್ಶಿಸಿದಳು.

"ಇಪ್ಪತ್ತೈದು ಸಾವಿರದ ಚೆಕ್ಕು!" ಎಂದು ಶ್ಯಾಮರಾಯರು ಉದ್ಗರಿಸಿದರು. ಹಣದ ಮಾತು ಕಿವಿಗೆ ಬಿದ್ದೊಡನೆ ಚೆನ್ನಮ್ಮನ ಕಿವಿ ಅರಳಿತು.

"ಏನೆಂದಿರಿ?" ಎಂದವಳ ಪ್ರಶ್ನೆ.

"ನಿನಗಾಗಿ ನನ್ನ ಹೆಸರಲ್ಲಿ ಬರೆದ ಹುಂಡಿ ಪತ್ರ...."

"ನಿಮಗಾಗಿ ನಿಮ್ಮ ಹೆಸರಲ್ಲಿ ಬರೆದುದು ಎನ್ನಿ....ಜನರೂ ಹೀಗೆಯೇ ಆಡುತ್ತಿದ್ದಾರೆ"

"ಹೇಗೆ ಆಡುತ್ತಾರೆ?"

"ಕೋದಂಡರಾಯರಿಂದ ಹೊಟ್ಟೆತುಂಬ ಲಂಚ ತಿಂದು ಪ್ರಕರಣವನ್ನು ಹಾಳು ಮಾಡಿದರು ಎಂದು!'

"ನಿನಗೆ ಇಪ್ಪತ್ತೈದು ಸಾವಿರ ಸಂಪಾದಿಸಿದೆ; ಇದು ನಾನು ಮಾಡಿದ ಕೇಡಾಗಿದ್ದರೆ ಒಪ್ಪಿಕೊಳ್ಳುತ್ತೇನೆ".

"ತಪ್ಪೋ ಸರಿಯೋ....ನನಗೆ ಈ ಅವಸ್ಥೆ ಬರಲು ನೀವೆ ಕಾರಣ."

"ಕೋದಂಡರಾಯರಿಗೆ ನಿನ್ನನ್ನು ಕನ್ಯಾದಾನ ಮಾಡಿದವನೂ ನಾನಾಗಿರಬಹುದೆ?"

"ನನ್ನ ಮಾನ ಮರ್ಯಾದೆ ಸಕಲವೂ ಹೋಯಿತು!"

"ಮಾನ ಮರ್ಯಾದೆಯೆಲ್ಲ ನಾವು ಭಾವಿಸಿದಂತೆ!"

"ಕೋದಂಡರಾಯರು ನನ್ನ ಮೇಲೆ ಅನಾದರ ತಳೆಯಲೂ ನೀವೆ ಕಾರಣ."

"ನಾನು!"

"ನಿಸ್ಸಂದೇಹ....ನಿಮ್ಮನ್ನು ಚಿತ್ರಮಂದಿರದಲ್ಲಿ ಕಂಡೆನಲ್ಲ; ಅದು ರಾಹು ಕಾಲವಾಗಿತ್ತು.

"ರಾಹು ಕೇತುಗಳಿಗೂ ಕೋದಂಡರಾಯರಿಗೂ ಸಂಬಂಧವೇನು?'

"ಸಂಬಂಧವಿಷ್ಟೆ ಅಂದಿನಿಂದ ನಿಮ್ಮೊಡನೆ ಪತ್ರವ್ಯವಹಾರ ತೊಡಗಿದೆ."

"ಹೌದು ಪತ್ರ ಬರೆಯತೊಡಗಿದೆ."

"ಈ ಪತ್ರಗಳಲ್ಲಿ ಒಂದೆರಡು ಅವರಕೈ ಸೇರಿದುವು."

"ಒಂದೆರಡು ಎಂದರೇನು? ಎಲ್ಲವೂ"

"ಇಷ್ಟು ವಿಶ್ವಾಸಘಾತ ಮಾಡಿ ನಿರಪರಾಧಿಗಳಂತೆ ನಟಿಸುತ್ತಿದ್ದೀರಲ್ಲವೆ?"

"ವಿಶ್ವಾಸಘಾತವೂ ಇಲ್ಲ; ನಟನೆಯೂ ಇಲ್ಲ. ನೀನು ನನಗೆ ಬರೆದು ಕಳುಹಿಸಿದ ಸಾಹಿತ್ಯ ರಾಶಿಗೆ ಇಪ್ಪತ್ತೈದು ಸಾವಿರ ಬೆಲೆ ಬಂತು! ಈ ಹಣವೆಲ್ಲ ಸಹಜವಾಗಿ ನಿನ್ನದು."

"ಈ ಪತ್ರಗಳನ್ನು ಮಾರಿ ನನ್ನನ್ನು ಲಜ್ಜೆಗೇಡಿಯಾಗಿ ಕಾಣಿಸಿದಿರಲ್ಲವೆ?" ಎಂದು ಚೆನ್ನಮ್ಮ ಕಣ್ಣುಗಳಿಂದ ಕಿಡಿಕಾರಿದಳು.

"ಲಜ್ಜೆಗೇಡಿಯಾಗಿ ಮಾಡಿದವನು ನಾನಲ್ಲ—ಲಜ್ಜೆ ತನ್ನಿಂದ ತಾನೇ ಕೆಟ್ಟಿರಲಿಲ್ಲವೇ?" ಎಂದು ವಿಕಟವಾಗಿ ನಕ್ಕರು ವಕೀಲರು.

ಚೆನ್ನಮ್ಮನ ಮುಖದಲ್ಲಿ ಸುರಿಯುತ್ತಿದ್ದ ಕಣ್ಣೀರು ಆವಿಯಾಗಿತ್ತು. ದುಃಖದ ಮೋಡವೋಡಿ ಕೋಪದ ಬಿರುಗಾಳಿ ರಭಸದಿಂದ ಬೀಸುತ್ತಿತ್ತು. ಚೆನ್ನಮ್ಮ ಮತ್ತೇನನ್ನೂ ಅಡದೆ ತನ್ನ ಸೆರಗಿನಲ್ಲಿದ್ದ ಪತ್ರವೊಂದನ್ನು ಮೇಜಿನ ಮೇಲೆ ಎಸೆದಳು. ವಕೀಲರು ಅದನ್ನೋದಿ ಹುಳಿಹುಳಿಯಾಗಿ ನಕ್ಕರು. "ಇದಕ್ಕೇನೆನ್ನುತ್ತೀರಿ?" ಎಂದು ಜರ್ಬಿನಿಂದ ಕೇಳಿದಳು ಚೆನ್ನಮ್ಮ.

"ಹೇಳಬೇಕಾದುದು ಏನಿರುವುದು?"

"ನೀವು ವಕೀಲರು. ಸರ್ವವನ್ನೂ ಬಲ್ಲವರು ...ಕೋದಂಡರಾಯರ ಪತ್ರದಿಂದ ಇಷ್ಟು ಆಧಾರ ಸಿಕ್ಕಿರುವಾಗ ನಿಮ್ಮ ವಿಶ್ವಾಸಘಾತವು ಋಜುವಾಗಬಹುದೇ ಇಲ್ಲವೇ?

"ಇಲ್ಲಿ ಘಾತ ಘೀತ ಯಾವುದೂ ಇಲ್ಲ. ನಿನಗೆ ಬಂಧವಿಮೋಚನೆ ಆಗಬೇಕಾಗಿತ್ತು."

"ಎಂದೂ ಇರಲಿಲ್ಲ; ಇಂತಹ ಪ್ರಸಂಗ ಬರುವಂತೆ ಮಾಡಿದವರೆ ನೀವು...."

"ಗಂಡ ಹೆಂಡಿರ ಹೃದಯ ಮಧ್ಯದಲ್ಲಿ ನಿಂತು........"

"ಹೌದು; ನಿಂತು....' 'ಮನಸ್ಸಿಗೆ ವಿಷ ಹಾಕಿ...."

"ಚೆನ್ನಮ್ಮ.......ಬರಿಯ ಆರೋಪಗಳಿಂದ ಪ್ರಯೋಜನವಿಲ್ಲ. ಒಂದುವೇಳೆ ಆರೋಪಣೆಗಳಲ್ಲಿ ಸತ್ಯವಿದ್ದರೂ ಸದ್ಯದ ಸಂಕಟ ನಿವಾರಣೆಯಾಗುವುದಿಲ್ಲ. ನೀನು ಮತ್ತೊಮ್ಮೆ ನಿರ್ಗತಿಗಳಾಗುವೆಯೆ? ಅಥವಾ ಈ ಇಪ್ಪತ್ತೈದು ಸಾವಿರದಿಂದ ಸ್ವತಂತ್ರಳೆನಿಸುವೆಯಾ...." ಎಂದು ಮೇಜಿನ ಮೇಲಿದ್ದ ಹುಂಡಿ ಪತ್ರವನ್ನು ಜೇಬಿಗೆ ಸೇರಿಸಿಕೊಂಡರು.

"ಹುಂಡಿಪತ್ರವು ನಿಮ್ಮಲ್ಲಿಯೇ ಇರಲಿ; ಸ್ವಾತಂತ್ರ್ಯವು ನನ್ನಲ್ಲಿಯೇ ಇದೆ." ಎಂದು ಚೆನ್ನಮ್ಮ ಕುರ್ಚಿಯನ್ನು ಬಿಟ್ಟು ಎದ್ದಳು.

"ನಿನ್ನ ಸ್ವಾತಂತ್ರ್ಯವು ಯಾವ ಕಡೆಗೆ ಒಯ್ಯುವುದು?"

"ಎಲ್ಲಿಗೆ ಒಯ್ಯಬೇಕೋ ಅಲ್ಲಿಗೆ...."

"ಎಂದರೆ ಯಾರ ಮನೆಗೆ?"

'ನಮ್ಮವರ ಮನೆಗೆ...."

'ನಿಮ್ಮವರೆಂದರೆ........?"

"ಕೋದಂಡರಾಯರು!"

"ಇನ್ನೂ ಕೋದಂಡರಾಯರು ನಿಮ್ಮವರೆ ಆಗಿದ್ದರೆ ನನಗೂ ಸಂತೋಷ" ಎಂದು ಕುರ್ಚಿಯಿಂದೆದ್ದು ವಕೀಲರು ಹೊರಡಲನುವಾದರು.

ಕಚೇರಿಯನ್ನು ಬಿಟ್ಟು ಇಬ್ಬರೂ ಹೊರಗೆ ಕಾಲಿಡುವಷ್ಟರಲ್ಲಿ ಕೋದಂಡರಾಯರ ಕಾರು ಅಲ್ಲಿಯೇ ಬಂದು ನಿಂತಿತ್ತು. ಅದರೊಳಗೆ ರಾಯರ ಮುಖವೂ ಕಾಣಿಸಿತು. "ಬನ್ನಿ ವಕೀಲರೆ—ಬನ್ನಿ....ನಿಮ್ಮ ಮನೆ ಬಳಿಯಲ್ಲಿ ಇಳಿಸಿಬಿಡುತ್ತೇನೆ." ಎಂದು ಕೋದಂಡರಾಯರು

ವಕೀಲರನ್ನು ಒಂದು ಬಗೆಯ ಬಲಾತ್ಕಾರದಿಂದ ಒಳಗೆ ಬರಿಸಿ ಅವರ ಮನೆಯ ವರೆಗೆ ಕಾರನ್ನೋಡಿಸಿ ಹೊರೆಯನ್ನಿಳಿಸಿದರು. ಪರಸ್ಪರ ಮುಖ ನೋಡುವುದಕ್ಕೂ ಅವಕಾಶವಿರಲಿಲ್ಲ. ಹೋಗುವಾಗ "ಈ ಹುಡುಗಿಗೆ ಇನ್ನೂ ಲೋಕಾನುಭವ ಕಡಿಮೆ. ಅವರ ಕಡೆಯಿಂದ ವಕಾಲತ್ತು ವಹಿಸಿ ಬುದ್ಧಿನೀತಿ ಕಲಿಸಿದಿರಿ. ಇದಕ್ಕಾಗಿ ಸಹಸ್ರ ಧನ್ಯವಾದಗಳು!" ಎನ್ನುತ್ತಾ ಗಹಗಹಿಸಿ ನಕ್ಕು ಶೇಕ್‌ಹೇಂಡ್ ಮಾಡಿ ಕಳುಹಿಸಿ ಕೊಟ್ಟರು.

ತನ್ನವನು ತನ್ನವಳು ಎಂಬ ಮಮಕಾರದಿಂದ ಇಬ್ಬರೂ ಏಕಾಸನವನ್ನಲಂಕರಿಸಿ ಕಾರನ್ನು ಓಡಿಸುತ್ತಿದ್ದಾಗ ಚೆನ್ನಮ್ಮ "ಆ ಇಪ್ಪತ್ತೈದು ಸಾವಿರದ ಗತಿಯೇನು?" ಎಂದು ಕುತೂಹಲದಿಂದ ಪ್ರಶ್ನಿಸಿದಳು.

"ಆ ಸಾವಿರಗಳೊ? ಯಾರವು? ಎಲ್ಲಿವೆ? ಯಾರ ಪತ್ರ? ಯಾರ ಸಹಿ?" ಎಂದು ಮತ್ತೊಮ್ಮೆ ನಕ್ಕರು ಕೋದಂಡರಾಯರು.

"ಪ್ರಪಂಚದ ಅನುಭವ ಈಗ ಆಯಿತು." ಎಂದು ಚೆನ್ನಮ್ಮ ಗಂಭೀರ ಮುಖಮುದ್ರೆಯನ್ನು ಬರಿಸಿಕೊಂಡಳು.

"ನನಗೂ ಅಷ್ಟೆ ಬೇಕಾಗಿತ್ತು. ಅದಾದ ಮೇಲೆ ನಮ್ಮ ದಾಂಪತ್ಯದ ಧರ್ಮಕ್ಕೆ ಲೋಪವಿಲ್ಲ"—ಇಷ್ಟರಲ್ಲಿ ಮನೆ ಸಮೀಪಿಸಿತು. "ಹಿಂದಿನದನ್ನೆಲ್ಲ ಮರೆತು ಬಿಡೋಣ" ಎಂದಿಬ್ಬರೂ ನಿರ್ಧರಿಸಿದರು. ಹಿಂದೆ ಬಂದಾಗ ಚೆನ್ನಮ್ಮನ ಮುಂದೆ ಅದೇ ಮನೆ....ಅದೇ ಉದ್ಯಾನ.... ಅದೇ ನಾಯಿ....ಅದೇ ಬೆಕ್ಕು....ಎಲ್ಲವೂ ಚೆನ್ನಮ್ಮನ ಆಗಮನವನ್ನು ನಿರೀಕ್ಷಿಸಿ ಸ್ವಾಗತ ಕೊಡಲು ಸಿದ್ಧವಾಗಿದ್ದಂತೆ ಕಾಣಿಸಿಕೊಂಡುವು.

"ಚಿಕ್ಕಮ್ಮ ಬಂದಳು...." ಎಂದು ಕೋದಂಡರಾಯರ ಕೊನೆಯ ಮುದ್ದುಮಗು ಸಾವಿತ್ರಿ ಚೆನ್ನಮ್ಮನನ್ನು ಬಲವಾಗಿ ಅಪ್ಪಿಕೊಂಡಳು.....

"ನಿನ್ನ ಚಿಕ್ಕಮ್ಮ ನಿನ್ನವಳೆ" ಎನ್ನುತ್ತ ಚೆನ್ನಮ್ಮ ಕಣ್ಣಿನ್ನೊರಸಿದಳು.

೩೦—೬—೧೯೩೦.

ಒಂದು ನಾಟಕ

ಜನಾರ್ದನಯ್ಯನವರು ತಮ್ಮ ಕೋಣೆಯೊಳಗೆ ಕುರ್ಚಿಯಲ್ಲಿ ಕುಳಿತುಕೊಂಡು, ಆಗ ತಾನೇ ಮೇಜಿನ ಮೇಲೆ ನೆಲಸಿದ್ದ ಪತ್ರವನ್ನೆತ್ತಿ ಓದಿದರು. ಆಮಂತ್ರಣಪತ್ರವದು. ಮಗಳು ಪ್ರಭಾವತಿ ಕಲಿಯುವ ಕಲಾಶಾಲೆಯ ವರ್ಧಂತ್ಯುತ್ಸವಕ್ಕೆ ಆಮಂತ್ರಣ ಬಂದಿದೆ.

''ನಾಳೆಗೇ ಇಟ್ಟರೇ ಈ ಸುಟ್ಟ ವರ್ಧಂತಿಯನ್ನು? ಹೋಗುವುದಕ್ಕಾಗುವುದಿಲ್ಲ. ಹೋಗದೆ ಇರುವುದಕ್ಕೂ ಆಗುವುದಿಲ್ಲ!" ಎಂದು ತಮ್ಮಲ್ಲಿ ತಾವೆ ಆಡುವಷ್ಟರಲ್ಲಿ ಪ್ರಭಾವತಿ ಬಾಗಿಲ ಪಡಿಯನ್ನು ಅತ್ತ ಸರಿಸಿ ಒಳಗೆ ಬಂದು "ನಮ್ಮ ಪ್ರಿನ್ಸಿಪಾಲರು ಕೊಟ್ಟರು!'' ಎಂದಳು.

''ಪ್ರಿನ್ಸಿಪಾಲರು ಪದ್ಧತಿಯ ಪ್ರಕಾರ ಕೊಡುತ್ತಾರೆ!''

''ನೀವು ನಾಳೆಯ ಉತ್ಸವಕ್ಕೆ ಬರಲೇ ಬೇಕಂತೆ!''

''ಪ್ರಿನ್ಸಿಪಾಲರದೇನು ಸುಗ್ರೀವಾಜ್ಞೆಯೇ?........ನಾಳೆ ಅವರು ಬಂದಾರು........ಅತಿಥಿಗಳು ಮನೆಯಲ್ಲಿರುವಾಗ ಅವರಿಗೆ ಎಲೆಅಡಿಕೆಯ ಸಂಚಿಯನ್ನು ಕೊಟ್ಟು ನಾವು ಮನೆಯಿಂದ ತಪ್ಪಿಸಿಕೊಳ್ಳುವುದೇ?''

''ತಪ್ಪಿಸಿಕೊಂಡು ಹೋಗುವುದಲ್ಲ: ಅವರನ್ನೂ ಕರೆದುಕೊಂಡು''

''ಅವರು ವರ್ಧಂತ್ಯುತ್ಸವಕ್ಕೆ ಬರುವವರಲ್ಲ. ಹುಡುಗಿಯನ್ನು ನೋಡುವುದಕ್ಕೆ''

''ಯಾವ ಹುಡುಗಿಯನ್ನು?''

''ನೀನೂ ಒಬ್ಬಳು ಹುಡುಗಿಯೆಂದು ನನ್ನ ಭಾವನೆ''

"ನಮ್ಮ ಶಾಲೋತ್ಸವಕ್ಕೆ ನಾನು ಹೋಗದಿರುವುದು ಅಸಾಧ್ಯ''

''ಹೋಗುವುದು ಅಸಾಧ್ಯ...."

''ಹೋಗದಿದ್ದರೆ ಪ್ರಿನ್ಸಿಪಾಲರು ಏನೆಂದಾರು?"

''ಏನೂ ಹೇಳಲಿ; ಅದಕ್ಕೂ ನನಗೂ ಸಂಬಂಧವಿಲ್ಲ.''

''ಕ್ಷಮಿಸಬೇಕು ತಂದೆ....ನಾನು ವರ್ಧಂತಿಯಲ್ಲಿ ಭಾಗವಹಿಸಲೇಬೇಕು" ಎಂದೆನ್ನುವಾಗ ಪ್ರಭೆಯ ಕಂಠ ನಡುಗಿತು.

''ದಿವಾನ್ ಬಹದೂರ್ ರಾಮಕೃಷ್ಣಯ್ಯ ಇಲ್ಲಿಗೆ ಬರುವುದು

ನಮ್ಮ ಮನೆಯೊಳಗಣ ಇಲಿ ಹೆಗ್ಗಣಗಳ ಲೆಕ್ಕ ತೆಗೆಯುವುದಕ್ಕಲ್ಲ. ತಮ್ಮ ಮಗನಿಗೆ ಯೋಗ್ಯ ಸಂಬಂಧ ಹುಡುಕುವುದಕ್ಕೆ!"

ದಿವಾನ್ ಬಹದೂರ್ ರಾಮಕೃಷ್ಣಯ್ಯನವರ ಮತ್ತು ಅವರ ಮಗನ ಹೆಸರು ಕೇಳಿದೊಡನೆ ಶರೀರವಿಡೀ ಜುಮ್ಮೆಂದಿತು. ಬೇರೆ ಯಾವ ಸಂಬಂಧವಾದರೂ ಚಿಂತೆಯಿಲ್ಲ; ಅದಾಗದು ಎಂಬ ದೃಢ ಚಿತ್ತದಿಂದ ಪ್ರಭಾವತಿ ದಟ್ಟಿಸಿ ಮಾತಾಡಿದಳು: "ಅವರು ಎಷ್ಟು ಬೇಕಾದರೂ ಹುಡುಕಲಿ; ಈ ನೆಂಟಸ್ತಿಕೆ ಆಗಲಾರದು."

"ಏಕೆ?"

"ಕಾರಣವನ್ನು ಹೇಳಬೇಕಾದ ಅವಶ್ಯತೆಯಿಲ್ಲ."

"ಅವಶ್ಯತೆ ಇದೆ....ಹೇಳು....ಹೇಳದಿದ್ದರೆ...."

"ಹೇಳುವುದಿಲ್ಲ; ಪ್ರಳಯ ಬಂದರೆ ಬರಲಿ!"

ಜನಾರ್ದನಯ್ಯನವರ ಸಿಟ್ಟು ನೆತ್ತಿಗೇರಿತು. "ಏನು ಸೊಕ್ಕು ಈಗಿನ ಹುಡುಗಿಯರಿಗೆ........ಇಲ್ಲ....ಎನ್ನುವ ಅಧಿಕಾರವನ್ನು ಯಾರು ಕೊಟ್ಟಿದ್ದಾರೆ?"

"ಅಂತರಾತ್ಮ....ಮನಸ್ಸಾಕ್ಷಿ."

"ಮನಸ್ಸಾಕ್ಷಿಯೆಂದರೆ ಏನು ಗೊತ್ತಿದೆಯೋ ನಿಮಗೆ...."

"ಹುಡುಗಿಯರಿಗೂ ಮನಸ್ಸಾಕ್ಷಿಯಿದೆ."

ಈ ಡೊಂಕು ಮಾತನ್ನು ಸಹಿಸುವುದು ಅಯ್ಯನವರಿಗೆ ಅಶಕ್ಯವಾಯಿತು. "ನೀನು ಹೇಗೆ ತಪ್ಪಿಸಿಕೊಂಡು ಹೋಗುವೆಯೋ ನೋಡೋಣ....ಕೋಣೆಯೊಳಗೆ ದಾಸ್ತಾನು ಮಾಡುತ್ತೇನೆ ನಿನ್ನನ್ನು!" ಎಂದವರು ಹಲ್ಲು ಕಡಿದರು

ಪ್ರಭಾವತಿಯ ಮುಖ ಕಪ್ಪಾಯಿತು. ಹೆಚ್ಚು ಮಾತಾಡುವುದರಿಂದ ಪ್ರಯೋಜನವಾಗಲಾರದೆಂದು ಏನೂ ಹೇಳದೆ ಒಂದೇ ಒಂದು ನಿಟ್ಟುಸಿರನ್ನು ಕರೆದು ಕಣ್ಮರೆಯಾದಳು....."ಇಂದಿನ ಹುಡುಗಿಯರ ಸೊಕ್ಕೆ!" ಎಂದು ಉದ್ಗರಿಸುತ್ತಾ ಜನಾರ್ದನಯ್ಯನವರು ಕಾರ್ಯಾಂತರಕ್ಕೆ ಹೊರಟರು ತಮ್ಮ ಬಿರುದನಿ ಕೇಳಿ ಮಗಳು ಬೆಚ್ಚಿಬಿದ್ದಳೆಂದು ಅವರ ಯೋಚನೆಯಾಗಿತ್ತು. ಬಿಸಿಯಾಗದೆ ಬೆಣ್ಣೆ ಕರಗುವುದಿಲ್ಲವಷ್ಟೆ?

ಇಂದು ಬಿಸಿಯೂ ಆಯಿತು—ಬೆಣ್ಣೆಯೂ ಕರಗಿರಬೇಕೆಂಬುದರಲ್ಲಿ ಸಂದೇಹವಿರಲಿಲ್ಲ.

ಪ್ರಭಾವತಿ ಸಂಕಟದಲ್ಲಿದ್ದಳು. ಎರಡಲಗಿನ ಕತ್ತಿಯಂತೆ ಅವಳ ನಿರ್ಧಾರವು ಎರಡು ಕಡೆಗಳಲ್ಲಿಯೂ ಇರಿಯುವಂತಾಗಿತ್ತು. ಕಾಲೇಜಿನ ಪ್ರಿನ್ಸಿಪಾಲರು ವರ್ಧಂತಿಯನ್ನು ನಿರ್ಣಯಿಸಿರುವಾಗ ದಿವಾನ್ ಬಹದೂರ್ ರಾಮಕೃಷ್ಣಯ್ಯನವರ ಅನುಕೂಲವನ್ನು ಕೇಳಿ ನಿರ್ಣಯಿಸಬೇಕಾದುದೇನೂ ಇಲ್ಲ. ಅವರು ಕನ್ಯಾನ್ವೇಷಣಕ್ಕೆ ಬೇರೆ ದಿನವನ್ನು ಇಡಬಾರದೆಂದೂ ಇಲ್ಲ. ವರ್ಧಂತಿಯ ದಿನವನ್ನು ಬದಲಿಸಬಹುದೆ? ಆ ದಿನ ಕನ್ನಡ ನಾಟಕವೊಂದನ್ನು ಆಡಬೇಕೆಂದು ನಿರ್ಧರಿಸಿದ್ದಾರೆ ವಿದ್ಯಾರ್ಥಿ ಸಂಘದವರು. ಪ್ರಿನ್ಸಿಪಾಲರು ಅದಕ್ಕೆ ಪ್ರೋತ್ಸಾಹ ಕೊಟ್ಟಿದ್ದಾರೆ. ತರಬೇತಿಯೂ ಆಗಿದೆ. ಪ್ರಭಾಕರ ರಾಮವರ್ಮನಾಗುವನು. ಪ್ರಭಾವತಿ ಲೀಲಾವತಿಯಾಗುವಳು! ಈ ಪಾತ್ರ ಸಂಭಾಷಣೆಗಳನ್ನು ಚೆನ್ನಾಗಿ ಅಭ್ಯಾಸಿಸಿ, ನಟನೆಯನ್ನು ಕಲಿತು ಆಗಿದೆ. ವರ್ಧಂತಿಯ ದಿನ ಬಣ್ಣದ ಉಡಿಗೆ ತೊಡಿಗೆಗಳನ್ನುಧರಿಸಿ ಪ್ರಭಾವತಿಲೀಲಾವತಿಯಾಗಿಯೂ ಪ್ರಭಾಕರ ರಾಮವರ್ಮನಾಗಿಯೂ ರಂಗಭೂಮಿಯ ಮೇಲೆ ಅವತರಿಸುವ ಕೆಲಸ ಮಾತ್ರ ಉಳಿದಿದೆ. ಅದನ್ನು ತಡೆದು ನಿಲ್ಲಿಸುವುದಕ್ಕಾಗುವುದೇ?

ವೇಷ ಹಾಕುವುದಕ್ಕೆ ಮುಂಚಿತವಾಗಿ ತಂದೆಯ ಸಮ್ಮತಿಯನ್ನವಳು ಪಡೆದಿರಲಿಲ್ಲ. ಪಡೆಯಲು ಪ್ರಯತ್ನಿಸುತ್ತಿದ್ದರೆ ಅದು ವ್ಯರ್ಥವಾಗುತ್ತಲೂ ಇತ್ತು. ಇದು ಅಪರಾಧವಾದರೆ ಅಪರಾಧ; ಆಗುವುದೆಲ್ಲ ಆಗಿಹೋಯಿತು; ಇನ್ನು ಅಡಿಯನ್ನು ಹಿಂದಿಡಲಾಗುವುದಿಲ್ಲ....ಹೀಗೆ ಯೋಚಿಸುತ್ತಾ ಕುಳಿತು ಕೊನೆಗೆ ಪ್ರಭಾವತಿ ನಿರ್ಣಯ ಮಾಡಿದಳು:

"ಇದು ವಯಸ್ಸಿನ ದೋಷದಿಂದ ಉಂಟಾದ ರೋಗ....ತಿರುಗುವ ಪ್ರಪಂಚವನ್ನು ಕಾಣಲಾರದ ದೃಷ್ಟಿಮಾಂದ್ಯದಲ್ಲಿ ಹುಟ್ಟಿದ ರೋಗ.... ಅಲ್ಪ ಧೈರ್ಯದ ಅಲ್ಪ ಜೀವಿಗಳನ್ನು ಬಲವಾಗಿ ಬಿಗಿದಪ್ಪಿ, ಶ್ಮಶಾನ

ಯಾತ್ರೆಯ ವರೆಗೂ ಬಿಡದ ರೋಗ....ಏನು ಮಾಡಲಾಗುತ್ತದೆ ಈ ಮುದಿ ಭ್ರಾಂತರನ್ನು....ಸಹಿಸಬೇಕಷ್ಟೆ...."

* * * *

ಕಾಲೇಜಿನ ವರ್ಧಂತಿಯು ನಿಜವಾಗಿಯೂ ಯಶಸ್ವಿಯಾಗಿ ಜರಗಿತು. ಪತ್ರಿಕಾಕರ್ತರ ಭಾಷೆಯಲ್ಲಲ್ಲ; ಯಥಾರ್ಥವನ್ನು ಕಂಡ ಸತ್ಯವಾದಿಗಳ ಮಾತನ್ನೆ ಉದ್ಧರಿಸಿ ಹೇಳುವುದಿದ್ದರೂ ಸಮಾರಂಭವು ಯಶಸ್ವಿಯೆ. ನಾಟಕದ ಸೊಬಗನ್ನಂತೂ ಹೇಳಿತೀರದು. ರಾಮವರ್ಮ ಲೀಲಾವತಿಯರ ವಿಷಾದಾಂತ ಜೀವನ ಚಿತ್ರವು ಅಷ್ಟು ಮಾರ್ಮಿಕವಾಗಿ ನಿರೂಪಿತವಾಗಿತ್ತು. ಸಮಾರಂಭ ಮುಗಿದು ಹೊರಟಾಗ ಭಾವಿಕರಾದ ಹಲಮಂದಿಗಳು ಕಣ್ಣೊರಸುತ್ತಿದ್ದರು.

ಆ ದಿನದ ಅಧ್ಯಕ್ಷರಾಗಿದ್ದ ಕಲೆಕ್ಟರ್ ದೊರೆಗಳು, ಪಾತ್ರ ಧರಿಸಿದವರನ್ನು ಅಮಿತವಾಗಿ ಕೊಂಡಾಡಿದರು. ಮಾತ್ರವಲ್ಲ; ತಾವೂ ತರುಣರಾಗಿದ್ದು, ಇದೇ ಶಾಲೆಯ ವಿದ್ಯಾರ್ಥಿಗಳಾಗಿರುತ್ತಿದ್ದರೆ, ಈ ನಾಟಕದಲ್ಲಿ ಭಾಗವಹಿಸುವ ಶ್ರೇಯಸ್ಸಿನಲ್ಲಿ ಒಂದು ತುಣುಕಿಗಾದರೂ ಕೈಚಾಚದಿರುತ್ತಿರಲಿಲ್ಲ; ಎಂದಾಗ ಇಡೀ ಸಭೆ ಕೈಚಪ್ಪಾಳೆಯ ಕೋಲಾಹಲದಲ್ಲಿ ಮುಳುಗ ಹೋಯಿತು. ಸಾಹೇಬರು ಇಷ್ಟರಿಂದಲೇ ತೃಪ್ತರಾಗಲಿಲ್ಲ. ರಾಮವರ್ಮ ಲೀಲಾವತಿಯರನ್ನು-ಅರ್ಥಾತ್-ಪ್ರಭಾಕರ ಪ್ರಭಾವತಿಯರನ್ನು,ಪ್ರತ್ಯೇಕವಾಗಿ ಪರದೆಯಿದಿರಲ್ಲಿ ನಿಲ್ಲಿಸಿ ನಾಲ್ಕು ಹೊಗಳಿಕೆಯ ಮಾತನ್ನಾಡಿದರು. ಆಗ ಆದ ಗದ್ದಲದಲ್ಲಿ ಕೆಲವು ಕುರ್ಚಿ ಬೆಂಚುಗಳಿಗಾದರೂ ಜಖಂ ಆಗಿರಬೇಕು.

ಪ್ರಿನ್ಸಿಪಾಲರು ಆಧುನಿಕ ಸಂಸ್ಕಾರವಂತರು. ಆಕ್ಸ್‌ಫರ್ಡಿಗೆ ಹೋಗಿ ಉಪಾಧಿ ಪಡೆದು ವಿದ್ಯಾಂಗವನ್ನು ಸೇರಿ ತಮ್ಮ ಉದಾರ ವಿಶಾಲ ಮನೋವೃತ್ತಿಗಾಗಿ ಹಿರಿಯರಿಂದ ಕಿರಿಯರಿಂದ ಸ್ತುತಿಪಡೆದವರು. ಅಧ್ಯಕ್ಷರ ಪಕ್ಕದಲ್ಲಿಯೇ ಕುಳಿತಿದ್ದ ಅವರು ಆನಂದಾವೇಶರಭಸದಲ್ಲಿ ಎದ್ದುನಿಂತು, ರಾಮವರ್ಮ ಲೀಲಾವತಿಯವರ ಮನೋರಂಜಕವಾದ ಅಭಿನಯವನ್ನುಕೊಂಡಾಡಿ, ಅವರಿಗೆ ಒಂದೊಂದು ಬಹುಮಾನ ಕೊಡುವುದಾಗಿ ಪ್ರಕಟಿಸಿದರು.

ಬಹುಮಾನ ಕೊಡುವ ಹುಚ್ಚು ಇನ್ನೊಂದು ವ್ಯಕ್ತಿಯನ್ನು ಹಿಡಿಯಿತು. ಎರಡನೆಯ ಸಾಲಿನ ಕುರ್ಚಿಯಲ್ಲಿ ಮಂಡಿತರಾಗಿದ್ದ-ನಖಶಿಖಾಂತವಾಗಿ ಆಂಗ್ಲ ವೇಷವನ್ನು ಧರಿಸಿದ್ದ ತರುಣ ಗೃಹಸ್ಥರೊಬ್ಬರು ಎದ್ದುನಿಂತು ಅಧ್ಯಕ್ಷರ ಅಪ್ಪಣೆ ಪಡೆದು ತಮ್ಮದೂ ಒಂದು ಬಹುಮಾನವಿದೆ-ಎಂದು ತಿಳಿಸಿದರು. ಪ್ರಿನ್ಸಿಪಾಲರು "ದಯಮಾಡಿ ರಂಗಭೂಮಿಯ ಮೇಲೆ ನಿಂತು ಬಹುಮಾನ ಕೊಡಿರಿ" ಎಂದರು. ತರುಣ ಗೃಹಸ್ಥರು ದಯಮಾಡುವುದಕ್ಕಾಗಿ ರಂಗಭೂಮಿಯನ್ನೇರಿದರು.

ರಂಗಭೂಮಿಯನ್ನೇರಿದವರಿಗೆ, ಲೀಲಾವತಿಯಾಗಲಿ ರಾಮವರ್ಮನಾಗಲಿ ಕಾಣಿಸಲಿಲ್ಲ. "ನನ್ನ ಒಲುಮೆಯ ಲೀಲಾವತಿಯೆಲ್ಲಿ?...." ಎಂದು ಅತ್ತಿತ್ತ ದೃಷ್ಟಿಬೀರಿ ನಡುಗುವ ಧ್ವನಿಯಲ್ಲಿ ಆಡಿದಾಗ ಇಡೀ ಕಟ್ಟಡ ಮುರಿದುಬೀಳುವಂತೆ ಚಪ್ಪಾಳೆಯ ಗದ್ದಲವಾಯಿತು. ಕಲ್ಲೆಕ್ಟರ್ ಸಾಹೇಬರು ಕುಳಿತ ಕುರ್ಚಿಯಲ್ಲಿಯೇ ಮೂರ್ಛೆಹೋಗುವಷ್ಟು ನಕ್ಕರು. ಏಳಡಿ ಎತ್ತರದ ಹತ್ತುಮಣ ಭಾರದ ಪ್ರಿನ್ಸಿಪಾಲರಿಗೆ ನಗುವಿನಲ್ಲಿ ತೆರೆದ ಬಾಯಿಯನ್ನು ಮುಚ್ಚುವುದಕ್ಕಾಗಲಿಲ್ಲ. ಮುಖದ ಮಾಂಸರಾಶಿಯ ಮರ್ದನದಲ್ಲಿ ಮುಚ್ಚಹೋದ ಕಣ್ಣುಗಳನ್ನು ತೆರೆಯುವುದಕ್ಕಾಗಲಿಲ್ಲ.

ತಮ್ಮ ಮಾತನ್ನು ಸಕಲರೂ ಮೆಚ್ಚಿದರೆಂದು, ರಂಗವೇರಿದ ತರುಣ ಗೃಹಸ್ಥರಿಗೆ ಧೈರ್ಯವಾಯಿತು. "ಲೀಲಾವತಿಯೆಲ್ಲಿ?" ಎಂದು ಪ್ರಶ್ನಿಸಿದರು.

ಲೀಲಾವತಿ ಪರದೆಯ ಹೊರಗೆ ಮಿಂಚಿನಂತೆ ಮಿಂಚಿದಳು. "ಲೀಲಾವತಿ! ನಿನ್ನ ಅಭಿನಯ ಕೌಶಲದಿಂದ ಶೇಕ್ಸ್‌ಪೀಯರ್ ಮಹಾಕವಿ ಅಜರಾಮರನಾದ!" ಎಂದು ರಸವತ್ತಾಗಿ ಕೊಂಡಾಡಿ ಹೊಸ ಮಾತುಗಳನ್ನು ಹುಡುಕುತ್ತಾ ಹುಡುಕಾಟಕ್ಕೆ ಸಹಾಯವಾಗುವಂತೆ ದೃಷ್ಟಿಯನ್ನು ಲೀಲಾವತಿಯು ಗಾತ್ರದ ಮೇಲಕ್ಕೂ ಕೆಳಕ್ಕೂ ಸುಳಿಸುತ್ತಾ ಏನೂ ಆಡಲಾರದೆ, ತಟಸ್ಥರಾಗಿ ನಿಂತುಬಿಟ್ಟರು. ಹಿಂದಿನ ಕುರ್ಚಿ ಸಾಲುಗಳಲ್ಲಿ ಕುಳಿತಿದ್ದ ತುಂಟ ಹುಡುಗರು ಕೋಲಾಹಲ ಮಾಡಿದರು....ಕೆಲವೇ ನಿಮಿಷಗಳ ಹಿಂದೆ ಸತ್ತುಹೋಗಿದ್ದ ಲೀಲಾವತಿ ಲಜ್ಜೆ

ಯಿಂದ ಮುಖವೆತ್ತಲಾರದೆ ಪರದೆಯೊಳಗೆ ಓಡೋಣ ಎಂದು ಯೋಚಿಸುತ್ತಿದ್ದಿರಬೇಕು.

ವ್ಯಕ್ತಿ ಸ್ತಂಭದಂತೆ ರಂಗಭೂಮಿಯ ಮೇಲೆ ನಿಂತು ಮಾತು ಬಾರದೆ, ಮಾಡುವುದೇನೆಂದು ತಿಳಿಯದೆ, ಒಮ್ಮೆ ಲೀಲಾವತಿಯನ್ನೂ ಮತ್ತೊಮ್ಮೆ ಅಧ್ಯಕ್ಷರನ್ನೂ ನೋಡುತ್ತಾ ಮುಖ ಕೆಂಪೇರಿಸುತ್ತಾ ನಿಂತಿದ್ದನಲ್ಲದೆ ಬಹುಮಾನ ಕೊಡುವುದಕ್ಕಾಗಲಿ, ಆಡುವುದೇನಾದರೂ ಇದ್ದರೆ ಆಡುವುದಕ್ಕಾಗಲಿ ಸಿದ್ಧತೆಯನ್ನು ತೋರಿಸಲಿಲ್ಲ. ಪ್ರಿನ್ಸಿಪಾಲರು "ಲೀಲಾವತಿ ಶೇಕ್‌ಸ್ಪೀಯರನನ್ನು ಅಜರಾಮರನನ್ನಾಗಿ ಮಾಡಿದುದು ನಿಜ. ತಾವು ಲೀಲಾವತಿಗೆ ಅಮರತ್ವ ಕೊಟ್ಟಿರಿ. ಸಮಯ ಮೀರುತ್ತದಲ್ಲ!" ಎಂದು ಬಳಿಗೆ ಹೋಗಿ ಕಿವಿಯಲ್ಲಿ ಎಚ್ಚರಿಸಿದರು. ಗೃಹಸ್ಥರು ಗಡಿಬಿಡಿಯಿಂದ ನಾಲ್ಕಾರು ಜೇಬುಗಳಿಗೆ ಕೈಹಾಕಿ ಒಂದು ಲಕೋಟೆಯನ್ನು ತೆಗೆದು ಲೀಲಾವತಿಯ ಕೈಗೊಪ್ಪಿಸಬೇಕೆಂದಿದ್ದಾಗ ಆಕೆ ಕಣ್ಮರೆಯಾಗಿದ್ದಳು. ಪ್ರಿನ್ಸಿಪಾಲರು ಆಕೆಯ ಪರವಾಗಿ ಬಹುಮಾನವನ್ನು ಸ್ವೀಕರಿಸಿ, ಕೃತಜ್ಞತೆಯನ್ನು ಸಮರ್ಪಿಸಿದರು. ಕೊನೆಗೆ ಮರೆತ ಒಂದು ವಿಷಯವನ್ನು ಹೇಳಬೇಕಾಗಿತ್ತು. ಬಹುಮಾನ ವಿತರಣೆ ಮಾಡಿದವರ ಪರಿಚಯ ಕೊಡುವುದು ಕರ್ತವ್ಯವಲ್ಲವೆ? ವಿನೋದ ಕೋಲಾಹಲದಲ್ಲಿ ಮೈಮರೆತಿದ್ದ ಪ್ರಿನ್ಸಿಪಾಲರು ಮತ್ತೊಮ್ಮೆ ರಂಗಭೂಮಿಯನ್ನೇರಿ ಹೀಗೆ ಪರಿಚಯ ಮಾಡಿಕೊಟ್ಟರು; "ಈ ದಿನ ನಮ್ಮ ನಾಟಕ ವೇಷಧಾರಿಗಳಿಗೆ ಪ್ರೋತ್ಸಾಹ ಕೊಡುವ ನೆವದಿಂದ ರಂಗಭೂಮಿಯನ್ನೇರಿದವರು ಮತ್ತಾರೂ ಅಲ್ಲ. ದಿವಾನ್‌ಬಹದೂರ್ ರಾಮಕೃಷ್ಣಯ್ಯನವರ ಮಗ ಭಾಸ್ಕರರಾಯರು. ನಮ್ಮ ಕಾಲೇಜಿನ ಹಳೆಯ ವಿದ್ಯಾರ್ಥಿಗಳು. ಇವರು ಸ್ವತಃ ಅಭಿನಯ ವಿಶಾರದರು. ಇಲ್ಲಿ ಹಳೆಯ ನೆನಪನ್ನು ಸ್ವಲ್ಪ ಕೆದರಬೇಕಾಗುತ್ತದೆ. ಹಿಂದೆ ಇದೇ ಸ್ಥಳದಲ್ಲಿ ಇಂತಹದೇ ಒಂದು ಸಮಾರಂಭ ಕಾಲದಲ್ಲಿ ಇವರು ಒಥೆಲ್ಲೊ ಪಾತ್ರವನ್ನು ಎಷ್ಟು ಚೆನ್ನಾಗಿ ವಹಿಸಿದ್ದರೆಂದರೆ, ಡೆಸ್ಡೆಮೋನಳನ್ನು ಕೊಲ್ಲುವ ದೃಶ್ಯದಲ್ಲಿ ನಿಜವಾಗಿಯೂ ಖೂನಿ ಮಾಡುತ್ತಿದ್ದರು. ಅಂತಹ ಸ್ವಾಭಾವಿಕವಾದ ಆವೇಶಮಯ ನಟನೆಯಲ್ಲಿ ಇವರು ನಿಸ್ಸೀಮ ನೈಪುಣ್ಯವುಳ್ಳವರು (ಪ್ರಚಂಡ ಕರತಾ

ಡನ); ಅಂತಹ ಮಹಾನುಭಾವರು ಇಂದಿನ ನಾಟಕಾಭಿನಯವನ್ನು ಕೊಂಡಾಡಿದುದರಿಂದ, ನಮ್ಮ ನಟವರ್ಗಕ್ಕೆ ಬಹುಮಾನ ವಿತರಣ ಮಾಡಿದುದರಿಂದ ನಮ್ಮ ಇಂದಿನ ಸಮಾರಂಭವು ಕಳೆಯೇರಿದೆ ಎಂಬು ದರಲ್ಲಿ ಸಂದೇಹವಿಲ್ಲ"

ಕೈಚಪ್ಪಾಳೆ ಹೊಡೆದು ಎಲ್ಲರೂ ಈ ಮಾತನ್ನು ಸಮರ್ಥಿಸಿದರು. ಸಭೆ ಬಿರಿಯಿತು.

*　*　*　*

ರಾತ್ರಿ ಎಂಟು ಗಂಟೆಯಾಗಿತ್ತು ಜನಾರ್ದನಯ್ಯನವರ ತವಕ ವನ್ನು ಹೇಳಿತೀರದು. ರಾಮಕೃಷ್ಣಯ್ಯನವರು ಬರಲಿಲ್ಲ; ಇನ್ನಾದರೂ ಬರುವರೇ? ಬರುವರೆಂಬ ನಿಶ್ಚಯವೇನು? ಬಾರದಿದ್ದರೆ ಗತಿಯೇನು? ತಂದೆ ಮಕ್ಕಳಿಬ್ಬರೂ ಒಟ್ಟಿಗೆ ಬಂದು ಕನ್ನಿಕೆಯನ್ನು ನೋಡುವುದಾಗಿ ಹೇಳಿದ್ದರು. ನೋಡಿ ಒಪ್ಪಿದ್ದರೆ, ಪ್ರಭಾವತಿ-ಭಾಸ್ಕರರ ಭವಿಷ್ಯಗಳನ್ನು ಒಂದಾಗಿಸುವ ಭಾರವನ್ನು ಜೋಯಿಸರಿಗೆ ಬಿಟ್ಟುಕೊಡಬಹು ದಾಗಿತ್ತು ತಾಯಿಯಿಲ್ಲದ ಮಗಳು; ಮುದ್ದುಮೋಹದ ಮಗಳು; ಒಬ್ಬಳೇ ಒಬ್ಬಳು ಮಗಳು. ರಾಮಕೃಷ್ಣಯ್ಯನವರಂತಹ ಸಂಬಂಧ ಸಿಕ್ಕಿದರೆ, ತಾವು ಇದುವರೆಗೆ ಲಾಲಿಸಿ ಪಾಲಿಸಿ ಮುದ್ದಾಡಿದುದು ಸಾರ್ಥಕವಾಗುತ್ತಿತ್ತು. ನಿಶ್ಚಿತ ಕಾಲಕ್ಕೆ ಬಾರದ ಜನ ರಾಮಕೃಷ್ಣಯ್ಯ ನಲ್ಲ; ಆದರೆ ಬರಲಿಲ್ಲವಲ್ಲ; ಇದರಲ್ಲಿ ವಿಶೇಷ ಸಂಕೇತವೇನಾದರೂ ಇರಬಹುದೆ?

ಅವರ ಮನಸ್ಸು ಅತ್ತಿತ್ತ ಅಲೆದಾಡತೊಡಗಿತು. ದಿವಾನ್ ಬಹ ದೂರರ ಮನೆಗೊಮ್ಮೆ—ಅವರು ಬರತಕ್ಕ ರಸ್ತೆಗೊಮ್ಮೆ—ಅವರನ್ನು ಸ್ವಾಗತಿಸುವುದಕ್ಕೆ ಸಿದ್ಧವಾಗಿ ನಿಂತಿದ್ದ ತಮ್ಮ ಮನೆಗೊಮ್ಮೆ—ಓಡಾ ಡುತ್ತಾ ಇದ್ದು ಕೊನೆಗೆ ಪ್ರಭಾವತಿಯನ್ನು ಬೆಂಬತ್ತಿತು. "ಪ್ರಭಾವತಿ!" ಎಂದು ಕೂಗಿದರು ಜನಾರ್ದನಯ್ಯನವರು

ಉತ್ತರ ಬರಲಿಲ್ಲ. ಮತ್ತೊಮ್ಮೆ ಕರೆದರು; ಯಾರೂ ಇರಲಿಲ್ಲ. ಅಡಿಗೆ ಕೋಣೆಯೊಳಗೆ ಹೋಗಿ ಅಡಿಗೆಯ ಭಟ್ಟನಲ್ಲಿ—"ಪ್ರಭೆಯೆಲ್ಲಿ?" ಎಂದು ವಿಚಾರಿಸಿದರು. ಒಗ್ಗರಣೆಯ ಕಾರ ಮೂಗಿಗೆ ಹೊಕ್ಕು ರಭಸದಿಂದ

ಸೀನುತ್ತಿದ್ದ ಭಟ್ಟ ಮುಖಕ್ಕೆ ಕೈಹಿಡಿದುಕೊಂಡು "ಬಂದೆ ರಾಯರೆ...." ಎಂದ.

"ನೀನು ಬರಬೇಕಾದುದಿಲ್ಲ; ಪ್ರಭೆಯೆಲ್ಲಿ?"

"ಪ್ರಭೆಯೊ....ನಾಟಕವಂತೆ....ನಾಟಕ...."

"ಏನು ಸುಡುಗಾಡಿನ ನಾಟಕವೊ"

"ಸುಡುಗಾಡಿನದಲ್ಲ....ಶಾಲೆಯದು...."

"ದುಷ್ಟೆ....ಇಂದು ಅವರು ಬರುತ್ತಾರೆಂದು ತಿಳಿದೂ ಹೋದಳೆ?"

"ಹೋದಳೆಂಬುದಕ್ಕೆ ಈ ಕಣ್ಣುಗಳೇ ಸಾಕ್ಷಿ"

"ಮರಳಿ ಬರುವ ಉದ್ದೇಶವಿದೆಯೊ?"

"ಸಂದೇಹವೇನು? ಇಂದು-ತಪ್ಪಿದರೆ ನಾಳೆ ಬಂದೇ ಬಿಡುತ್ತೇನೆ" ಎಂದಿದ್ದಾಳೆ.

"ಇಂದು ಹೋಗಬೇಕಿತ್ತು ಏಕೆ? ಇಂದು ತಪ್ಪಬೇಕಾದುದು ಏಕೆ? ಇಂದನ್ನು ತಪ್ಪಿಸಿಕೊಂಡು ನಾಳೆ ಬಳಬೇಕಾದುದು ಏಕೆ? ನೀನಾದರೂ ಏಕೆ ತಡೆಯಲಿಲ್ಲ....ತಲೆ ಹಣ್ಣಾಯಿತು....ಆ ತಿಳಿಯದ ಹುಡುಗಿ ತಾನು ಮಾಡುವ ಕೆಲಸದ ಫಲಾಫಲವನ್ನು ತಿಳಿಯದೆ ಹೋಗುತ್ತಾಳೆ ಎಂದು ಭಾವಿಸಿಕೊ....ಅನ್ನ ತಿನ್ನುವವನಾದ ನೀನಾದರೂ ಬುದ್ಧಿಹೇಳ ಬೇಕಾಗಿತ್ತಲ್ಲವೆ?"

"ಪ್ರಿನ್ಸಿಪಾಲರ ಹೆಂಡತಿ ತಮ್ಮ ಮನೆಗೆ ಕರೆದಿದ್ದಾರಂತೆ ರಾತ್ರಿಗೆ. ತಮಗೆ ಗೊತ್ತಿಲ್ಲದಿರಲು ಕಾರಣವಿಲ್ಲ ಎಂದು ಭಾವಿಸಿದೆ" ಎನ್ನುತ್ತ ಅಡಿಗೆಯ ಭಟ್ಟ ತನ್ನ ಸೊಂಟದಲ್ಲಿ ಸಿಕ್ಕಿಸಿಕೊಂಡಿದ್ದ ಪತ್ರವನ್ನು ಅವರ ಕೈಯಲ್ಲಿಟ್ಟ

ಜನಾರ್ದನಯ್ಯನಿಗೆ ಮೂರು ಲೋಕಗಳನ್ನು ಸುಟ್ಟು ಬೂದಿ ಮಾಡುವಷ್ಟು ಸಿಟ್ಟೇರಿತು. ಈ ಗದ್ದಲದಲ್ಲಿ ಅಡಿಗೆ ಭಟ್ಟ ಮಾಡುತ್ತಿದ್ದ ಪಾಕದ ಹೊರತು ಬೇರೇನೂ ಸುಡಲಿಲ್ಲ. ಆ ಭಟ್ಟನನ್ನೆ ನುಂಗಿಬಿಡು ವಂತಹ ರೋಷ ಕಣ್ಣಿನಿಂದ ಹೊರಟಿತು. ಆದರೆ ಏನೂ ಹೇಳಲಿಲ್ಲ. ಪತ್ರವನ್ನು ಕಿತ್ತುಕೊಂಡು ಓದಿದರು.

ತೀರ್ಥರೂಪರ ಸನ್ನಿಧಿಯಲ್ಲಿ – ಪ್ರಭೆಯ ಬಿನ್ನಹ....

ಶಾಲಾ ವರ್ಧಂತಿಗೆ ಹೋಗದೆ ಉಪಾಯವಿರಲಿಲ್ಲ. ನಿಮ್ಮಲ್ಲಿ ಒಪ್ಪಿಗೆ ಕೇಳಿದೆ; ನೀವು ಕೊಡುವಂತಿರಲಿಲ್ಲ. ಹೆಚ್ಚು ಮಾತಾಡಿ ಫಲ ವಿಲ್ಲವೆಂದು ಈ ಪತ್ರ ಬರೆದು ಹೋಗಿದ್ದೇನೆ

ಅಡಿಗೆ ಭಟ್ಟನಲ್ಲಿ ಸಿಟ್ಟುಬೇಡ. ಆವನು ಹೋಗಬಾರದು ಎಂದ. ಅಲ್ಲಿಯೇ ಇದ್ದ ಸೌಟನ್ನೆತ್ತಿ ಅವನ ತಲೆಗೆರಡು ಏಟು ಕೊಡುತ್ತೇನೆ ಎಂದು ಹೆದರಿಸಿದೆ.

ನಾನು ವರ್ಧಂತಿಗೆ ಹೋಗದಿದ್ದರೆ ಏನಾಗುತ್ತಿತ್ತು? ಎಂದು ನೀವು ಸಹಜವಾಗಿ ಪ್ರಶ್ನಿಸಬಹುದು. ಇದಕ್ಕೆ ನನ್ನ ಉತ್ತರವೊಂದೆ; ರಾಮಕೃಷ್ಣಯ್ಯನವರು ನಮ್ಮ ಸಂಬಂಧಕ್ಕಾಗಿ ಹಾತೊರೆಯದಿದ್ದರೆ-ಅಥವಾ ನಾನೇ ಅವರ ನೆಂಟಸ್ತಿಕೆಗೆ ಬಾಯಿತೆರೆಯದಿದ್ದರೆ ಏನಾಗುತ್ತಿತ್ತು?-ಎಂಬುದು.

ರಾಮಕೃಷ್ಣಯ್ಯನವರು ಮಗನನ್ನು ಪಡೆದು ಡಾರ್ವಿನನ ವಿಕಾಸ ವಾದಕ್ಕೊಂದು ಪ್ರತ್ಯಕ್ಷ ನಿದರ್ಶನ ಕೊಟ್ಟರು. ಅವರ ಮಗ ಭಾಸ್ಕರ ನೆಂದರೆ ಶುದ್ಧ ಕೋತಿಯಂತಿದ್ದಾನೆ. ರೂಪಕ್ಕಿಂತಲೂ ಗುಣದಲ್ಲಿ ಕೋತಿಯ ಸಾದೃಶ್ಯ ಹೆಚ್ಚು.

ಇಂಥ ವರನನ್ನು ಒಲ್ಲೆನೆಂದು ಹೇಳಿ ನಿಮ್ಮ ಸಿಟ್ಟಿನ ಬೆಂಕಿಗೆ ಕಟ್ಟಿಗೆ ಹಾಕುವುದಕ್ಕಿಂತ, ಬೇರೆ ರೀತಿಯಲ್ಲಿ ತಪ್ಪಿಸಿಕೊಳ್ಳಬಹುದೆಂದು ಯೋಚಿಸಿದೆ. ಆ ರೀತಿಯೆ ಇದು.

ನಾವು ಈ ವಿಷಯವನ್ನು ಚರ್ಚಿಸಿ ಒಲಿಸುವುದನ್ನೂ ಒಲಿಯುವುದನ್ನೂ ನಿರ್ಣಯಿಸಬಹುದಾಗಿತ್ತು. ಆದರೆ ನಿಮ್ಮ ಮುಂಗೋಪವನ್ನು ಕಂಡು ಹೆದರಿದೆ

ಈ ಸಂಬಂಧವನ್ನು ಆಹ್ವಾನಿಸುವ ಮುಂಚೆ ಸಜೀವ ಪ್ರಾಣಿಯಾದ ನನ್ನಲ್ಲಿ ಒಂದು ಮಾತನ್ನೂ ಆಡಲಿಲ್ಲ-ಎಂದಿಷ್ಟೆ ವ್ಯಸನ. ಆಡಿದ್ದರೆ, ಇಂತಹ ಏಷಮ ಬರುತ್ತಿರಲಿಲ್ಲ.

ಭಾಸ್ಕರರಾಯ ನಿರುದ್ಯೋಗಿ; ಕುಬೇರನ ಸಂಪತ್ತು ಇದೆ; ಒಪ್ಪಿಕೊಳ್ಳಬಹುದು. ನಿರುದ್ಯೋಗಿಯಾದರೂ ಮರ್ಯಾದೆಯಿಂದ ಕಾಲ

ಹರಣ ಮಾಡುವಷ್ಟು ಸ್ಥಿತಿಯಿದೆ. ಆದರೂ ಹುಡುಗಿಯರ ಖಾನೇಶು ಮಾರಿ ಲೆಕ್ಕ ತೆಗೆಯುವ ಕೆಲಸವನ್ನೇಕೆ ಮಾಡಬೇಕೊ....ನನಗೆ ತಿಳಿ ಯದು.

ಭಾಸ್ಕರನನ್ನು ನಾನು ಕಂಡಿದ್ದೇನೆ....ಅವನು ಪ್ರತಿದಿನ ಎಂಬಂತೆ ನನ್ನನ್ನು ಕಾಣುತ್ತಾನೆ. ಕಾಲೇಜಿನ ಮುಂದುಗಡೆಯಲ್ಲಿರುವ ಅರಳಿ ಮರದ ಬುಡದಲ್ಲಿ ಪ್ರತಿದಿನ ಸರಿ ಒಂಬತ್ತು ಗಂಟೆಯ ಮುಹೂರ್ತಕ್ಕೆ ಆತ ಹಾಜರಿರುತ್ತಾನೆ.

ವಿಧಿಸಮ್ಮತವಾಗಿ ನಿಮ್ಮಲ್ಲಿ ಕೇಳಿ ಅಪ್ಪಣೆ ತೆಗೆದುಕೊಂಡು ಪರ್ಥಂತಿಗೆ ಹೋಗುವುದು ಅಶಕ್ಯ. ಆದುದರಿಂದ ಈ ದಾರಿಯನ್ನು ಅವಲಂಬಿಸಬೇಕಾಯಿತು.

ಸದ್ಯಕ್ಕೆ ನಾನು ಹೆದರುವ ವಿಪತ್ತು ಒಂದೇ ಒಂದು - ಕೋತಿಯ ಹೆಂಡತಿಯಾಗಿರಬೇಕಾದ ಸಂಭವ. ಹಾಗಾಗುವುದಿಲ್ಲ— ಎನ್ನಿ; ನಾನು ನಿಮ್ಮವಳು; ನಿಮ್ಮ ಏಕಮಾತ್ರ ಪುತ್ರಿ.

ಇದಕ್ಕೆ ಉತ್ತರ ದೊರೆಯುವ ವರೆಗೆ ನಮ್ಮ ಪ್ರಿನ್ಸಿಪಾಲರ ಮನೆ ಯಲ್ಲಿ ಉಳಿದುಕೊಳ್ಳಬೇಕಾಗುತ್ತದೆ. ಅವರ ಹೆಂಡತಿ ರಾಜಲಕ್ಷ್ಮಮ್ಮ ನಂತಹ ಸಂಭಾವಿತ ಮಹಿಳೆಯನ್ನು ನಾನು ಇದುವರೆಗೆ ಕಂಡಿಲ್ಲ. ಗಂಡನ ಆಚಾರ ಕ್ರಮಗಳಿಗೂ ಅವರಟಕ್ಕೂ ಅಜಗಜಾಂತರ ವ್ಯತ್ಯಾಸ. ಮನೆಯಲ್ಲಿ ಅವರ ಅತ್ತೆಯಿದ್ದಾರೆ; ಚಿಕ್ಕಮ್ಮನಿದ್ದಾರೆ; ನಾಲ್ಕಾರು ಮಕ್ಕಳು ಮರಿಗಳಿವೆ....

ಒಂದು ರಾತ್ರಿಯ ಮಟ್ಟಿಗೆ ಅಲ್ಲಿಯೆ ಉಳಿದುಕೊಂಡರೆ ಯಾರೇ ನೂ ಹೇಳುವಂತಿಲ್ಲ. ಒಂದುವೇಳೆ ಇಡೀ ಲೋಕವೇ-ಆ ಬಗೆಗ ನನ್ನನ್ನು ನಿಂದಿಸಿದರೂ—ಹಸನ್ಮುಖದಿಂದ ಲೋಕವನ್ನಿದಿರಿಸಬಲ್ಲೆನು.

ಹೆಚ್ಚೇನೂ ಬರೆಯುವುದಿಲ್ಲ; ಸಾಧ್ಯವಾದರೆ ಪರ್ಥಂತಿಗೆ ಬನ್ನಿ; ಬಂದರೆ, ಆಗಲೆ ಎಲ್ಲ ನಿಷ್ಕರ್ಷೆಯಾಗುವುದು. ನೀವು ಕೋಪಾವೇಶ ಹೊಂದದಿದ್ದರೆ, ನಾವಿಬ್ಬರೂ ಒಂದೇ ಬಂಡಿಯಲ್ಲಿ ಕುಳಿತು ಹಿಂದೆ ಬರಬಹುದು.

ಇಂತೀ ಪ್ರಭಾ.

ಪತ್ರವನ್ನು ಎರಡು ಬಾರಿ ಓದಿದರು. ಇಡಿ ಶರೀರವು ನಡುಗಿತು. "ರಾಮ ರಾಮಾ ಈಗಿನ ಮಕ್ಕಳ ಬುದ್ಧಿಯೆ!" ಎಂದು ತಲೆ ತಲೆ ಹೊಡೆದುಕೊಂಡರು. ಈಗ ರಾಮಕೃಷ್ಣಯ್ಯ ಬಂದರೆ ಏನೆನ್ನಬೇಕು? ಪ್ರಭಾವತಿ ಮನೆಯಲ್ಲಿಲ್ಲವೆಂದು ತಿಳಿದರೆ ಅವರೇನು ಭಾವಿಸಬಹುದು? "ಅಯ್ಯೋ....ಹುಡುಗಿಯ ತಂದೆಯಾಗಿ ಕೆಟ್ಟೆ—ಕೆಟ್ಟೆ!" ಎಂದು ಬೊಬ್ಬಿಟ್ಟರು. ಆಗ ಅಡಿಗೆ ಭಟ್ಟ ಇನ್ನೊಂದು ಚೀಟನ್ನು ಕೊಟ್ಟ....ಅದು ರಾಮಕೃಷ್ಣಯ್ಯನ ಹಸ್ತಾಕ್ಷರದಲ್ಲಿತ್ತು. ಅದರಲ್ಲಿ ಇಷ್ಟೆ ಬರೆದಿತ್ತು; "ಕ್ಷಮಿಸಬೇಕು. ನಿಮ್ಮ ಸಂದರ್ಶನದ ಸಮಯ ನಿಷ್ಕರ್ಷೆಯಾದಾಗ ಒಂದು ವಿಷಯವನ್ನು ಮರೆತಿದ್ದೆ. ಮಗನ ಹಳೆಯ ಶಾಲೆಯ ವರ್ಧಂತಿ ಈ ದಿನ. ಆತ ಇದುವರೆಗೂ ತಿಳಿಸಿರಲಿಲ್ಲ. ಇಂದು ತಾನೇ ಹೇಳಿದ. ಅದಕ್ಕೆ ಹೋಗದೆ ನಿರ್ವಾಹವೇ ಇಲ್ಲವಂತೆ. ಮುಂದೆ ಯಾವಾಗ ಬರುತ್ತೇವೆ ಎಂಬುದನ್ನು ಖಂಡಿತ ಮಾಡಿ ಸಕಾಲದಲ್ಲಿ ತಿಳಿಸುತ್ತೇನೆ."

"ಈ ಚೀಟನ್ನು ಬಂದೊಡನೆ ಯಾಕೆ ಕೊಡಲಿಲ್ಲ?" ಎಂದು ಜನಾರ್ದನಯ್ಯ ದಟ್ಟಿಸಿ ಕೇಳಿದರು.

"ಇದನ್ನೂ ಪ್ರಭೆಯೇ ಕೊಟ್ಟಳು. ಆ ಪತ್ರದೊಂದಿಗೆ ಕೊಟ್ಟಳು"

ಜನಾರ್ದನಯ್ಯನಿಗೆ ಎಲ್ಲ ತಿಳಿಯಿತು ಇದು ದೊಡ್ಡ ಒಳಸಂಚು. ಪ್ರಿನ್ಸಿಪಾಲರದೆ ಮುಖ್ಯ ಪಾತ್ರ....ಪ್ರಭೆ ..ಬಲಿಯಾದಳು....ಆಹುತಿಯಾದಳು....ತಮ್ಮ ಮಾನಮರ್ಯಾದೆಯೆಲ್ಲ ರಸಾತಳಕ್ಕೆ ಬಿತ್ತು. ಕೂಡಲೇ ಹೊರಡಬೇಕು. ಪ್ರಿನ್ಸಿಪಾಲರ ಮನೆಗೆ ದಾಳಿಯಿಡಬೇಕು. ಜುಟ್ಟು ಹಿಡಿದು ಆ ಹುಡುಗಿಯನ್ನು ಎಳೆದು ತರಬೇಕು....ಬೇರೆ ಉಪಾಯವೆ ಇಲ್ಲ. ರಾತ್ರಿ ಬೆಳಗಾದರೆ ಮುಖಕ್ಕೆ ಮಸಿ. ಜನ ಏನೆಂದಾರು? ಪ್ರಿನ್ಸಿಪಾಲರ ಅಪಖ್ಯಾತಿ ಊರಲ್ಲೆಲ್ಲ ಹರಡಿದೆ. ಅವರ ಮನೆಯಲ್ಲಿ ಒಂದು ಇರುಳನ್ನಾದರೂ ಕಳೆದರೆ ಸಾಕು ಮತ್ತೆ ಮಗಳಿಗೆ 'ಗಿರಾಕಿ' ಸಿಕ್ಕುವ ಹಾಗಿಲ್ಲ.

ಈ ಭೀತಿಯ ಆವೇಗದಲ್ಲಿ ಒಂದು ವಿಚಾರ ನಿಷ್ಕರ್ಷೆ ಹೊಂಟಿತು. ರಾಮಕೃಷ್ಣಯ್ಯ ಬರುವ ಹಾಗಿಲ್ಲ ಈ ದಿನ....ಆಗಬಹುದಾಗಿದ್ದ ಒಂದು ಆಭಾಸ ತಪ್ಪಿಹೋದಂತಾಯಿತು. ಇನ್ನು ಮಗಳ ಹುಚ್ಚನ್ನು

ತಡೆದರಾಯಿತಲ್ಲವೆ? ಉತ್ಸವ ಮುಗಿಯುವ ಮುಂಚೆಯೆ ಶಾಲೆಯ ಬಾಗಿಲಿನಲ್ಲಿ "ಜೋಡ್ಣೆ" ಹಸ್ತರಾಗಿ ನಿಂತುಬಿಡೋಣ ಎಂದೆನಿಸಿತು ಅಯ್ಯನವರಿಗೆ "ಬಂದರೆ ಬರುತ್ತಾಳೆ! ಜೊತೆಯಲ್ಲಿ. ಬಾರದಿದ್ದರೆ ಇದರಿಂದಲೆ ಅಪ್ಪಳಿಸಿಬಿಡುತ್ತೇನೆ" ಎಂದು ನಾಗರಬೆತ್ತ ಹಿಡಿದುಕೊಂಡು ನೆಟ್ಟಗೆ ಕಾಲೇಜಿನ ಕಡೆಗೆ ಓಡಿದರು. ದೈವವಶಾತ್ ಇವರು ಹೋದಾಗ ವರ್ಧಂತಿ ಮುಗಿದಿತ್ತು. ಸಭೆ ಚೆದರಿತ್ತು. ಕಾಲೇಜಗೆ ಬಾಗಿಲು ಹಾಕುತ್ತಿದ್ದರು ಪೇದೆಗಳು. ಪ್ರಭೆಯ ತಲೆಯೊಡೆದು ಓಡಾಗಿ ಬೀಳುವ ಗಂಡಾಂತರ ಒಮ್ಮೆಗೆ ತಪ್ಪಿಹೋಯಿತು.

* * * * *

ಕಾಲೇಜಿನ ಪ್ರಿನ್ಸಿಪಾಲರು ವಿಶಾಲವಾದ ಮನೆಯಂಗಳದಲ್ಲಿ ಕುಳಿತಿದ್ದಾರೆ ಅಕ್ಕಿತ್ತ ಹಿಂದೆ ಮುಂದೆ ಹಲ ವಿದ್ಯಾರ್ಥಿಗಳೂ ಅಧ್ಯಾಪಕರೂ ಕುಳಿತಿದ್ದಾರೆ. ನಡುವೆ ಅಕ್ಕಪಕ್ಕದ ಕುರ್ಚಿಗಳಲ್ಲಿ ಆ ದಿನದ ರಾಮವರ್ಮ ಲೀಲಾವತಿಯರು ಆಸೀನರಾಗಿದ್ದಾರೆ. ಪ್ರಿನ್ಸಿಪಾಲರ ಪತ್ನಿ ಕುಳಿತವರ ನಡುವೆ ಓಡಾಡಿ ಎಲ್ಲರಿಗೂ ಒಂದೊಂದು ಸವಿನಾತನ್ನು ಹಂಚಿಕೊಡುತ್ತಾ ಉಪಚರಿಸುತ್ತಿದ್ದಾರೆ. ಸಮಾರಂಭವು ವಿಜೃಂಭಣೆಯಿಂದ ನಡೆದಿತ್ತು ನಾಟಕವಂತೂ ಭವ್ಯದಿವ್ಯ....ಎಲ್ಲರೂ ಕೊಂಡಾಡಿದರು; ಎಲ್ಲರೂ ಚಪ್ಪಾಳೆ ಹೊಡೆದರು. ಪ್ರಿನ್ಸಿಪಾಲರು "ಈ ನಾಯಕ ನಾಯಿಕೆಯರ ಚಿತ್ರವನ್ನು ತೆಗೆಯ ಬೇಕಾಗಿತ್ತಲ್ಲವೆ?" ಎಂದರು.

"ಸಂದೇಹವೇನು? ತೆಗೆಯಲೇ ಬೇಕು!" ಎಂದು ಹತ್ತು ಧ್ವನಿಗಳಾದುವು.

"ಹಾಗಾದರೆ ನಾಳೆ ಮುಂಜಾನೆ ಎಂಟು ಗಂಟೆಯ ವೇಳೆಯಲ್ಲಿ ಚಿತ್ರ ತೆಗೆಯಲಾಗುತ್ತದೆ. ಪ್ರಭಾವತಿ ಚಿತ್ರ ತೆಗೆಯಿಸಿಕೊಂಡೇ ಮನೆಗೆ ಹೋಗುತ್ತಾಳೆ" ಎಂದು ಪ್ರಿನ್ಸಿಪಾಲರು ತೀರ್ಮಾನ ಕೊಟ್ಟರು.

"ಲೀಲಾವತಿಗೆ ಭಾಸ್ಕರರಾಯರಿಂದ ಪ್ರಾಣಾಪಾಯ ಭಯವಿದೆ. ಈ ಮನೆಯೊಳಗೆ ಆಶ್ರಯ ಹೊಂದಿ ನಾಳೆಗೆ ಪೊಲೀಸರ ಸಹಾಯದಿಂದ ಮನೆಗೆ ಹೋಗಬಹುದಲ್ಲವೆ?" ಎಂದು ಪ್ರಿನ್ಸಿಪಾಲರ ಪತ್ನಿ ಕುಚೇಷ್ಟೆ ಮಾಡಿದಾಗ ನಗುವಿನ ಗದ್ದಲವಾಯಿತು. ಆ ಮೇಲೆ ಪ್ರಿನ್ಸಿ

ಪಾಲರು ಭಾಸ್ಕರ ರಾಯರು ಪ್ರಭಾವತಿಗೆ ಬಹುಮಾನವಾಗಿ ಕೊಟ್ಟಿದ್ದ ಲಕೋಟೆಯನ್ನು ಕೊಟ್ಟು "ಯಾವ ಉಡುಗೊರೆ ಬಂದಿದೆಯೊ ನೋಡ ಬಹುದೇ?" ಎಂದು ನಾಚಿಕೆಯಿಂದ ಕೆನ್ನೆ ಕೆಂಪೇರಿದ್ದ ಪ್ರಭಾವತಿಗೆ ಅದನ್ನು ಕೊಟ್ಟರು.

ಲಕೋಟೆಯನ್ನು ಬಿಚ್ಚಿದರು. ಚೆಲುವಾದ ಉಂಗುರ ಒಂದು ಚಿಕ್ಕ ಭಾವ ಚಿತ್ರವೊಂದು....

ಎಲ್ಲರೂ ಆಶ್ಚರ್ಯದಿಂದ ನೋಡಿದರು. ಉಂಗುರಕ್ಕೆ ವಜ್ರದ ಹರಳನ್ನು ಕೂರಿಸಿತ್ತು. ಚಿತ್ರದ ಹಿಂಬದಿಯಲ್ಲಿ "ನಿನ್ನ ಶ್ರೀಪಾದ ದಾಸ ಭಾಸ್ಕರ!" ಎಂದು ಬರೆದಿತ್ತು....ಚಿತ್ರನೋಡಿ ಎಲ್ಲರೂ ಏಕಕಾಲದಲ್ಲಿ ಹೊಟ್ಟೆ ಹುಣ್ಣಾಗುವಷ್ಟು ನಕ್ಕರು

ಈ ಗದ್ದಲದ ನಡುವೆ ಇನ್ನೊಂದು ಗಡಿಬಿಡಿ ಯಾಯಿತು. ಹೊರ ಗಿದ್ದ ಪೇದೆ ಓಡಿಬಂದು "ಯಾರೋ ಕರೆಯುತ್ತಾರೆ" ಎಂದು ಪ್ರಿನ್ಸಿಪಾಲರಿಗೆ ತಿಳಿಸಿದರು. "ಸರಿ. ಘಂಟೆ ಹತ್ತಾಗುತ್ತಾ ಬಂತು; ಎಲ್ಲರೂ ಆಯಾಸ ಗೊಂಡಿದ್ದಾರೆ." ಎನ್ನುತ್ತಾ ಪ್ರಿನ್ಸಿಪಾಲರು ಎದ್ದರು. ಪ್ರಭಾಕರ ಪ್ರಭಾವತಿಯರ ಹೊರತು ಉಳಿದವರೆಲ್ಲ ಅಪ್ಪಣೆ ಪಡೆದು ಹೊರಟು ಹೋದರು.

ಪ್ರಿನ್ಸಿಪಾಲರು ಹೊರಗೆ ಬಂದು ಉರಿ ಮುಖದ ಜನಾರ್ದನಯ್ಯ ನವರನ್ನು ಕಂಡು ಸ್ವಲ್ಪ ಗಾಬರಿಗೊಂಡರೆಂದೂ ಹೇಳಬಹುದು. ನಗು ತ್ತಿದ್ದ ಅವರ ಮುಖ ರೇಖೆಗಳು ಗಂಭೀರತೆಯಲ್ಲಿ ಮಾಸಿಹೋದುವು. "ಏನು ಈ ಕಾಲದಲ್ಲಿ ಬರೋಣಾಯಿತು?" ಎಂದು ಕೇಳಿ ಆಸನಕೊಟ್ಟು ಸತ್ಕಾರಮಾಡಿದರು.

ಜನಾರ್ದನಯ್ಯನವರಿಗೆ ಉಪಚಾರೋಕ್ತಿ ಬೇಕಾಗಿರಲಿಲ್ಲ; ಹೇಳುವುದಕ್ಕೂ ಅವರು ಸಿದ್ಧರಾಗಿರಲಿಲ್ಲ. "ನಾನು ಬಂದುದಕ್ಕೆ ಕಾರ ಣವೇನೆಂದು ತಮಗೆ ತಿಳಿದಿಲ್ಲ-ಅಲ್ಲವೆ?" ಎಂದು ಒರಟುಮಾತಿನಲ್ಲಿ ಅಯ್ಯನವರ ಪ್ರಶ್ನೆಬಂತು.

"ಸರ್ವಥಾ ಇಲ್ಲ!"

"ಹಾಗಾದರೆ ಕೇಳಿ....ನಾನು ಪ್ರಭಾವತಿಯ ತಂದೆ!"

"ತುಂಬ ಸಂತೋಷ....ಅಂಥ ಮಗಳನ್ನು ಪಡೆದ ಪುಣ್ಯಾತ್ಮರು ನೀವು."

"ಪುಣ್ಯಾತ್ಮರೋ ಪಾಪಾತ್ಮರೋ ನೋಡಬೇಕಷ್ಟೆ ಅವಳನ್ನು ಸ್ವಾಧೀನಮಾಡಿಕೊಳ್ಳುವುದಕ್ಕಾಗಿ ಬಂದಿದ್ದೇನೆ"

"ನಿಮ್ಮ ಮಗಳು ಅಲ್ಲವೆ? ಈ ವಿಷಯದಲ್ಲಿ ನಾನೇನು ಮಾಡುವುದಕ್ಕಿದೆ?"

"ಅವಳನ್ನು ಮನೆಯಲ್ಲಿ ಬಂಧಿಸಿದ್ದೀರಿ"

"ಏನು ಹುಚ್ಚು ಜನಾರ್ದನಯ್ಯ? ಕಟ್ಟಿಡುವುದು .. ಇಂದಿನ ಹುಡುಗಿಯರನ್ನು ಯಾರು ಕಟ್ಟಿಡಬಲ್ಲರು? ಪಾಪ ದಣಿದಿದ್ದಾಳೆ . ಸ್ವಲ್ಪ ವಿಶ್ರಾಂತಿಹೊಂದಲಿ .. ಎಂದು ಮನೆಗೆ ಕರೆದಿದ್ದೇನೆ."

"ದಣಿಯ ಬೇಕಾದ ಅವಶ್ಯತೆಯೇನಿತ್ತು?"

"ಶಾಲೆಯಲ್ಲವೆ? ವರ್ಧಂತಿಯಲ್ಲವೇ? ಅವಳಿಗೂ ಒಂದು ಪಾತ್ರವಿತ್ತು!"

"ನಿಮ್ಮ ಶಾಲೆಗೆ ಬೆಂಕಿ ಬೀಳಲಿ. ನನಗೇನೂ ವ್ಯಸನವಿಲ್ಲ . ಹುಡುಗಿಗೆ ವೇಷಹಾಕಿಸಿ ದೊಡ್ಡ ಅಪರಾಧ ಮಾಡಿದಿರಿ."

"ಏನಪರಾಧ?"

"ಪುರುಷರೊಡನೆ ಸೇರಿ ನಟಿಸುವುದು ಸಮಾಜನೀತಿಗೆ ವಿರುದ್ಧ!"

"ಆ ಸಮಾಜ ನೀತಿಯನ್ನೆ ತಿದ್ದಬೇಕಾಗಿದೆ."

"ನಿಮ್ಮ ಮಟ್ಟಿಗೆ ನಿಮಗೆ ಆಚಾರ ಸ್ವಾತಂತ್ರ್ಯವಿದೆ"

"ಏನು ಆಚಾರವೋ ಏನು ಸ್ವಾತಂತ್ರ್ಯವೊ....ವರ್ಷದಲ್ಲಿ ಒಂದು ದಿನ ಈ ಮಕ್ಕಳು ವೇಷ ಹಾಕಿ ಹಿಗ್ಗಿ ಕುಣಿಯುತ್ತೇವೆ ಎಂದರೆ ಅದರಲ್ಲಿ ಸ್ವಾತಂತ್ರ್ಯವೇನು ಪಾರತಂತ್ರ್ಯವೇನು? ಅದರಿಂದ ಸಮಾಜ ಯಂತ್ರದ ಕೀಲು ಕಳಚಿಬಿದ್ದ ಹಾಗಾಯಿತೆ?"

"ನಮ್ಮ ಆಚಾರ ಸಂಪ್ರದಾಯಗಳನ್ನು ತಿಳಿಯುವ ಮೆದುಳು ನಿಮ್ಮದಲ್ಲ."

"ಇರಬಹುದು....ನಿಮ್ಮ ಮೆದುಳಿಗೆ........"

"ನಿಮ್ಮ ಮೇಲೆ ಫಿರ್ಯಾದಿ ಮಾಡುತ್ತೇನೆ"

“ಏತಕ್ಕಾಗಿ?” ಎಂದು ಪ್ರಶ್ನಿಸುವಾಗ ಪ್ರಿನ್ಸಿಪಾಲರ ಮುಖ ಇಳಿದು ಹೋಯಿತು.”

“ನನ್ನ ಮಗಳನ್ನು ಬಲಾತ್ಕಾರದಿಂದ ಈ ಸ್ಥಿತಿಗೆ ಬರಿಸಿದುದಕ್ಕಾಗಿ.......”

“ಸ್ಥಿತಿಯೂ ಇಲ್ಲ.......ಬಲಾತ್ಕಾರವೂ ಇಲ್ಲ.......ನೋಡಿ, ನಿಮ್ಮ ಮಗಳು ಎಂತಹ ಸೊಗಸುಗಾರ್ತಿಯಾಗಿ ಹೃಷ್ಟ ಪುಷ್ಟಳಾಗಿ ಇಲ್ಲಿಯೇ ಇರುವಳೆಂಬುದನ್ನು ಈ ಕ್ಷಣ ನೋಡುತ್ತೀರಿ.” ಎನ್ನುತ್ತಾ ತಮ್ಮ ಪೇದೆಯನ್ನು ಒಳಗೆ ಕಳುಹಿಸಿದರು. ಲೀಲಾವತಿಯ ವೇಷವನ್ನಿನ್ನೂ ಸಂಪೂರ್ಣವಾಗಿ ಕಳಚಿರದ ಪ್ರಭಾವತಿ ಓಡುತ್ತಾ ಬಂದು ತಂದೆಗೆ ನಮಸ್ಕಾರಮಾಡಿದಳು. ಕಣ್ಣುಗಳಿಂದ ಮಾಂಸವನ್ನು ಕಿತ್ತು ತಿನ್ನುವಂತೆ ಜನಾರ್ದನಯ್ಯ ಮಗಳನ್ನು ಒಂದರೆನಿಮಿಷ ಬಿರುನೋಟದಿಂದ ನೋಡಿದರು.

“ಹೀಗೇಕೆ ಆಗಬೇಕಾಗಿತ್ತು?” ಎಂದು ಜನಾರ್ದನಯ್ಯನವರು ಆಟೋಪದಿಂದ ಪ್ರಶ್ನಿಸಿದರು.

“ಆಗಲೇ ಬೇಕಾಯಿತು!”

“ಆಗಬೇಕೆಂದು ನಿರ್ಧರಿಸಿದವರು ಯಾರು?”

“ನನ್ನ ಆತ್ಮ!”

“ಪರಪುರುಷರೊಂದಿಗೆ ವೇಷಕಟ್ಟಿ ಕುಣಿಯಬೇಕೆಂದು ಆತ್ಮ ಹೇಳಿತಲ್ಲವೇ?”

“ಕುಣಿದುದಲ್ಲ—ಅಭಿನಯಿಸಿದುದು.”

“ನನ್ನಲ್ಲಿ ಕೇಳದೆ ಮನೆ ಬಿಟ್ಟವಳು ಯಾವ ಧೈರ್ಯದಿಂದ ಹಿಂತಿರುಗುವೆ?”

ಈ ಪ್ರಶ್ನೆ ಕೇಳಿದೊಡನೆ ಪ್ರಿನ್ಸಿಪಾಲರು ಓಡುತ್ತಾ ಬಂದು “ಅಪರಾಧವೆಲ್ಲ ನನ್ನದು ಜನಾರ್ದನಯ್ಯ, ಕ್ಷಮಿಸಿಬಿಡಿ” ಎಂದು ಕೈಮುಗಿದರು.

“ಆಗುವುದೆಲ್ಲ ಆಗಿಹೋಯಿತಲ್ಲವೆ?”

“ನಾನು ಹೇಳಿ ತಿಳಿಸಬೇಕಾದ ವಿಷಯವೂ ಅದೇ.”

"ಇನ್ನು ಕ್ಷಮಿಸಿದೆನೆಂದು ಭಾವಿಸೋಣ . . ಅಪಮಾನ ತೊಡೆದು ಹೋಗುವುದೇ?"

"ಇದು ನಿರ್ದುಷ್ಟವಾದ ಮನೋರಂಜನ . . ನಾಟಕಾಭಿನಯ ದಲ್ಲಿ ತಪ್ಪೇನಾಯಿತು?"

"ತಪ್ಪೆ? ತಿಳಿವಳಿಕೆಯುಳ್ಳವರು ಮಾತ್ರ ತಿಳಿದಾರು"

"ನಿಮ್ಮ ದೃಷ್ಟಿಯಿಂದ ನಾನು ಜ್ಞಾನಹೀನ!"

"ನೀವು ಏನೂ ಇರಬಹುದು; ನನ್ನ ಮಗಳನ್ನು ಬಿಟ್ಟುಕೊಡಿ."

"ಮಗಳು ನಿಮ್ಮವಳೇ ಆಗಿದ್ದಾಳೆ ಉದ್ವೇಗದಿಂದ ಪ್ರಯೋಜನ ವಿಲ್ಲ. ನಾನು ಕೆಲ ವಿಷಯಗಳಲ್ಲಿ ಅಜ್ಞನಾಗಿದ್ದರೆ, ಹಲ ವಿಷಯ ಗಳಲ್ಲಿ ನೀವೂ ಅಜ್ಞರು . . ಆ ಡಾರ್ವಿನನ ದತ್ತಪುತ್ರನಿಗೆ ಈ ಕೂಸನ್ನು ಕೊಟ್ಟು ಅಂಧಕೂಪಕ್ಕೆ ತಳ್ಳಬೇಕೆಂದು ಇದ್ದಿರಲ್ಲವೆ?"

"ಅದು ನಿಮಗೆ ಸಂಬಂಧಿಸಿದ ವಿಷಯವಲ್ಲ."

"ನಮ್ಮ ಹಿಂದಿನ ಶಿಷ್ಯನ ಸ್ವಭಾವವನ್ನು ತಿಳಿಸುವುದು ನನಗೆ ಸಂಬಂಧಪಟ್ಟ ವಿಷಯವಲ್ಲವೆ? ಈ ದಿನ ಸಂಜೆಯ ಸಮಾರಂಭದಲ್ಲಿ ದಿವಾನ್‌ಬಹದೂರ್ ರಾಮಕೃಷ್ಣಯ್ಯನವರ ಔರಸಪುತ್ರರು ತಮ್ಮ ವಿಶ್ವ ರೂಪವನ್ನು ಕಾಣಿಸಿದರು, ಬಹಿರಂಗವಾಗಿ ಸಾವಿರ ಜನರ ಮುಂದೆ!"

ಜನಾರ್ದನಯ್ಯನವರಿಗೆ ಹೆಚ್ಚಿನ ವಾದಮಾಡುವ ಆಸಕ್ತಿಯಿರ ಲಿಲ್ಲ; "ಪ್ರಭಾ! ಹೊರಡು!" ಎಂದು ಸುಗ್ರೀವಾಜ್ಞೆಯಿತ್ತರು

ಪ್ರಿನ್ಸಿಪಾಲರು ನಡುವೆ ಬಾಯಿಹಾಕಿ "ಆಕ್ಷೇಪವಿಲ್ಲದಿದ್ದರೆ ಅವಳು ಈ ದಿನ ನನ್ನ ಆತಿಥ್ಯವನ್ನು ಸ್ವೀಕರಿಸಿ ನಾಳೆ ಮುಂಜಾನೆ ಬರು ತ್ತಾಳೆ" ಎಂದರು.

ಉರಿಯುವ ಗಾಯಕ್ಕೆ ಉಪ್ಪನ್ನು ಎರಚಿದಂತಾಯಿತು ಜನಾರ್ದ ನಯ್ಯನವರಿಗೆ. "ಪ್ರಿನ್ಸಿಪಾಲ್ ಮಹಾಶಯರೇ. ಪ್ರಭೆ ಇಂದಿನಿಂದಲೇ ನಿಮ್ಮ ಕಾಲೇಜಿಗೆ ನಮಸ್ಕಾರ ಹೊಡೆಯುತ್ತಾಳೆ. ತಂದೆ ಬೇಕಾಗಿದ್ದರೆ ಅವಳು ಈ ನಿಮಿಷದಲ್ಲಿ ಹೊರಡಲೇಬೇಕು"—ಎಂದು ಕರ್ಕಶವಾದ ಉತ್ತರಕೊಟ್ಟರು.

ಪ್ರಿನ್ಸಿಪಾಲರು ನಗುತ್ತಾ "ಪ್ರಭಾವತಿ! ನಿನಗೆ ತಂದೆ ಬೇಡವಾಗಿ

ರುವರೇ? ಚಿತ್ರವನ್ನು ಇನ್ನೊಮ್ಮೆ ತೆಗೆಯಬಹುದು; ಅಥವಾ ತೆಗೆ
ದಿರಲೂಬಹುದು. ತಂದೆಯನ್ನು ರೇಗಿಸಬೇಡ. ಶಾಲೆಗೆ ಬರುವುದನ
ನಿಲ್ಲಿಸಬೇಡ" ಎಂದರು ಪ್ರಭಾವತಿ ಮನಸ್ಸಿಲ್ಲದೆ ಪ್ರಿನ್ಸಿಪಾಲರ ವ
ಯನ್ನು ಬಿಟ್ಟು ತಂದೆಯೊಂದಿಗೆ ರಸ್ತೆಗಿಳಿದಳು.

ನೂರು ಗಜ ದೂರ ಹೋಗುವ ವರೆಗೆ ತಂದೆ ಮಕ್ಕಳಿಬ್ಬ
ನಡುವೆ ಮೌನದ ಪರದೆ ಬಿದ್ದಿತ್ತು. ಕೊನೆಗೆ ಜನಾರ್ದನಯ್ಯ ನೀರಸಸ್ವ
ದಲ್ಲಿ "ಏನೆಲ್ಲ ಅನಾಹುತ ಮಾಡಿದೆ ಪ್ರಭಾ! ನಾಲ್ಕು ಜನರ ಮುಂ
ಮುಖ ತೋರಿಸುವುದಕ್ಕೆ ಇಲ್ಲದಂತೆ ಮಾಡಿದೆಯಲ್ಲ!" ಎಂದು ಉ
ರಿಸಿದರು.

"ನಾಲ್ಕು ಜನರ ಮುಂದಲ್ಲ; ಇಡಿ ಪ್ರಪಂಚಕ್ಕೆ ಮುಖ ತೋರಿ
ಬಲ್ಲೆ."

"ನೀನು ಬಲ್ಲೆ....ನಾನು!"

"ನೀವೂ ಬಲ್ಲಿರಿ...."

"ಪರಪುರುಷನೊಂದಿಗೆ ಲೀಲಾವತೀ ಪಾತ್ರ ವಹಿಸಿದೆಯ
ತಲ್ಲ!"

"ಹೌದು."

"ಇದು ತಪ್ಪಲ್ಲವೆ?"

"ಪ್ರಭಾಕರರಾಯರು ಪರಪುರುಷರೆಂಬ ಭಾವನೆ ನನಗಿಲ್ಲ."

ಪ್ರಭಾಕರ ಎಂಬ ಹೆಸರನ್ನು ಕೇಳಿದೊಡನೆ ಹುಬ್ಬಿನಲ್ಲಿ ಕುತ
ಹಲವನ್ನು ಎತ್ತಿ ಕಟ್ಟಿ "ಯಾವ ಪ್ರಭಾಕರ?" ಎಂದು ಜನಾರ್ದನಯ
ಕೇಳಿದರು.

"ಜಮೀನುದಾರ ಭೀಮರಾಯರ ಮಗ!"

"ಭೀಮರಾಯರ ಮಗನೇ?" ಎಂದು ಅಚ್ಚರಿಯಿಂದ ಬಾಯ
ಬಿಟ್ಟರು, ಜನಾರ್ದನಯ್ಯನವರು.

"ಹೌದು—ಅವರೇ"

ಈ ಮಾತನ್ನು ಕೇಳಿದೊಡನೆ ಜನಾರ್ದನಯ್ಯನವರ ಧ್ವನಿಯಿಂ
ಆಕ್ಷೇಪದ ಭಂಗಿ ಜಾರಿಹೋದಂತಾಯಿತು. "ಹೌದು; ನಮ್ಮ ದೂರ

ಸಂಬಂಧಿಕ."

"ದೂರದ ಸಂಬಂಧಿಕರು ಹತ್ತಿರಕ್ಕೆ ಬರಬಾರದೇಕೆ?" ಎಂದು ಪ್ರಭಾವತಿ ಕೇಳಿದಳು.

ಜನಾರ್ದನಯ್ಯ ಆಲೋಚನೆಗೀಡಾದರು. ಭೀಮರಾಯರು ತಮಗೆ ಸಂಬಂಧಿಕರೆಂಬುದು ನಿಜ. ಸಂಬಂಧ ಹಳಸಿದೆ, ಯಾವುದೋ ಒಂದು ಕಲಹದ ಕಾರಣದಿಂದ ಕಹಿಯೂ ಆಗಿದೆ. ಪ್ರಭಾವತಿ ಪ್ರಬುದ್ಧ ವಯಸ್ಕಳಾಗುತ್ತಾ ಬರಲು ಜನಾರ್ದನಯ್ಯನವರಿಗೆ ಭೀಮರಾಯರ ನೆನಪಾಗಿ, ಅವರ ಮಗನ ನೆನಪಾಗಿ "ಎಲ್ಲ ಚೆನ್ನಾಗಿರುತ್ತಿದ್ದರೆ ಹುಡುಗಿಗೆ ಮನೆ ಹುಡುಕಬೇಕಾಗಿರಲಿಲ್ಲ. ಮಾಡುವುದೇನು? ಗ್ರಹ ಚಾರ!" ಎಂದು ಸಿಟ್ಟುಸಿರು ಕರೆದರು. ಈ ವಿಷಯವನ್ನು ಇಷ್ಟಕ್ಕೆ ಬಿಡ ಲಿಲ್ಲ. ಗಣಪತಿ ಜೋಯಿಸರೊಮ್ಮೆ ಒಂದು ಹೊರೆ ಪುರುಷ ಜಾತಕ ಗಳನ್ನು ತಂದು ತಮ್ಮ ಮುಂದೆ ಒಗೆದಾಗ ಭೀಮರಾಯರ ಪ್ರಸ್ತಾವ ನ್ನೆತ್ತಿ, ಪ್ರಭಾಕರನ ಪೂರ್ವಾಪರಗಳನ್ನು ವಿಚಾರಿಸಿದರು. ಮಿಂಚು ಳ್ಳಿಗೆ ಮೀನಿನ ಸುಳಿವು ಹೊಳೆಯುವ ಹಾಗೆ ಜೋಯಿಸರಿಗೆ ಅವರ ಮನೋಗತ ತಿಳಿದು "ಈ ಸಂಬಂಧ ಆದರೆ ನಿಮ್ಮ ಸೌಭಾಗ್ಯಕ್ಕೆ ಕಡಿಮೆ ಯಿಲ್ಲ" ಎಂದರು.

"ಆದರೆ! ರೆ!" ಎಂದರು ಭೀಮಯ್ಯ.

"ಆಗದೆ ಎಲ್ಲಿಗೆ ಹೋಗುತ್ತದೆ!" ಎಂದು ಜೋಯಿಸರು ಎದೆತಟ್ಟಿ ಪ್ರತಿಜ್ಞೆಮಾಡಿದರು. ತಟ್ಟಿದ ಎದೆ ನೋವಾಯಿತಲ್ಲದೆ ಪ್ರಯೋಜನವಾ ಲಿಲ್ಲ. ಭೀಮರಾಯರು ಅಭಿಮಾನವೊಂದನ್ನೆ ಆಲಂಬಿಸಿ "ಬಾಕಿಯಾದ ಲೆಕ್ಕಾಚಾರ ತುಂಬ ಇದೆ. ಅದು ಚುಕ್ತಾ ಆಗದೆ ಹೊಸ ಲೆಕ್ಕವನ್ನು ಕೊಡಲಾಗುವುದೇ? ಈ ಕುರಿತು ಮತ್ತೊಮ್ಮೆ ಆಡಬೇಡಿ" ಎಂದು ಜೋಯಿಸರನ್ನು ಬಂದಂತೆಯೇ ಹಿಂದೆ ಕಳುಹಿಸಿದರು. ಭೀಮರಾಯರ ಬೀಗನಾಗುವುದು ಸರ್ವ ವಿಧಗಳಲ್ಲಿಯೂ ಶ್ರೇಯಸ್ಕರವಾಗುತ್ತಿತ್ತು. ಅದಾಗದ ಮೇಲೆ ಅಷ್ಟೇ ಶ್ರೀಮದ್ಗಾಂಭೀರ್ಯವುಳ್ಳ ದಿವಾನ್ ಬಹ ದೂರ್ ರಾಮಕೃಷ್ಣಯನವರನ್ನು ನೆಂಟಸ್ತಿಕೆಯ ಗೂಟಕ್ಕೆ ಕಟ್ಟಿಹಾಕ ಬೇಕೆಂಬ ಯೋಚನೆ ಹುಟ್ಟಿತು. ಆದರೆ ಭಾಸ್ಕರನ ಗುಣ ನಡತೆಯು

ಕುರಿತು ಹಲವು ಆರೋಪಣೆಗಳಿದ್ದುದರಿಂದ ಹತ್ತು ಬಾರಿ ಆಲೋಚಿಸಿ ಅಂತರಾತ್ಮವು 'ಬೇಡ' ಎನ್ನಲು ಹನ್ನೊಂದನೆಯ ಬಾರಿ ಆಗಬಹುದು - ಎಂದಿತು.

ಈ ಸಂಗತಿ ಪ್ರಭಾವತಿಗೂ ಗೊತ್ತು. ಪ್ರಭಾಕರನಿಗೂ ಗೊತ್ತು. ತಮ್ಮ ಹಿರಿಯರ ದುರಭಿಮಾನವನ್ನು ಮುರಿದು ಹಾಕುವುದಕ್ಕಾಗಿ ಅವ ರೇನೂ ನಟನೆಮಾಡಲು ಒಪ್ಪಿದುದಲ್ಲ ನಾಯಕ ನಾಯಿಕೆಯರು ಯಾರೆಂದು ಹುಡುಕುವಲ್ಲಿ ಪ್ರಿನ್ಸಿಪಾಲರ ವಿಮರ್ಶಾದೃಷ್ಟಿಗೆ ಇಬ್ಬರೂ ಬಿದ್ದರು; ಬಲಿಯಾದರು! ಅಷ್ಟೆ.

ಆ ರಾತ್ರಿ ಸಿಟ್ಟಿನ ಆವೇಶದಲ್ಲಿ ಬಿರುಗಾಳಿಯಂತೆ ಮನೆ ಬಿಟ್ಟು ಹೊರಟ ಜನಾರ್ದನಯ್ಯನವರು ಸಂತೋಷವನ್ನಾಗಲಿ, ದುಃಖವನ್ನಾಗಲಿ ಪ್ರಕಟಮಾಡದೆ ಶಾಂತವಾಗಿ ಮನೆಗೆ ಹೋಗುವುದನ್ನೂಅವರ ಹಿಂದೆಯೇ ಪ್ರಭಾವತಿ ಬರುವುದನ್ನೂ ಕಂಡು ಅಡಿಗೆಯ ಭಟ್ಟ ಹಿಗ್ಗಿದ. ಬಂದವರೇ ಅವನನ್ನು ಬಳಿಗೆ ಕರೆದು-"ಗಣಪತಿ ಜೋಯಿಸರು ಊರಲ್ಲಿರುವರೇ?" ಎಂದು ಕೇಳಿದರು.

"ಊರಲ್ಲಿದ್ದಾರೆ; ನೀವು ಹೋದ ಐದು ನಿಮಿಷದಲ್ಲಿ ಇಲ್ಲಿಗೇ ಬಂದರು!"

"ಕಾರ್ಯವೇನಾದರೂ ಇತ್ತೆ?"

"ಏನೂ ಹೇಳಲಿಲ್ಲ; ಒಂದು ಜಾತಕವನ್ನು ಕೊಟ್ಟುಹೋದರು."

ಜನಾರ್ದನಯ್ಯನವರು ಕುತೂಹಲದಿಂದ ಜಾತಕವನ್ನು ಕಿತ್ತು ಕೊಂಡರು. "ಭೀಮರಾಯರ ಜ್ಯೇಷ್ಠಪುತ್ರ ಪ್ರಭಾಕರನ ಗ್ರಹಕುಂಡಲಿ- ಶುಭಂಭೂಯಾತ್" ಎಂದು ಬರೆದಿದ್ದ ಅಕ್ಷರಗಳನ್ನು ದೀಪದ ಬೆಳಕಿನಲ್ಲಿ ಓದಿ ತಿಳಿಯದವರಂತೆ ನಟಿಸಿ "ಪ್ರಭಾ ಇದೇನು ನೋಡು....ಕುರುಡು ದೀಪದ ಬೆಳಕಿನಲ್ಲಿ ಸರಿಯಾಗಿ ಕಾಣಿಸುವುದಿಲ್ಲವಲ್ಲ!" ಎಂದು ಅದನ್ನ ವಳ ಕೈಗೆ ಕೊಟ್ಟರು. ಅವಳು ಗಟ್ಟಿ ದನಿಯಲ್ಲಿ ಓದಿಹೇಳಲಾಗಿ ತಾವು ಮಾಡಿಕೊಂಡ ಅರ್ಥ ಸರಿಯೆಂದು ತಿಳಿದು ಅವರ ಮುಖ ಅರಳಿತು. ಮಗಳ ಕಡೆಗೆ ಮುಖ ತಿರುಗಿಸಿ "ಪ್ರಭಾ....ಇವನಲ್ಲವೇ ಇಂದಿನ ರಾಮ

ವರ್ಯಾ? ಎಂದು ಕೇಳಿದರು. ಉತ್ತರಬಂತು—"ಅವನೇ ಇವನು!"—ಎಂದು.

ಮತ್ತೆ ಜನಾರ್ದನಯ್ಯ ಹೆಚ್ಚಿನ ಪ್ರಶ್ನೆಗಳನ್ನು ಕೇಳಲಿಲ್ಲ. ಪ್ರಭಾವತಿಯ ನಡತೆಯ ಔಚಿತ್ಯ—ಅನೌಚಿತ್ಯಗಳನ್ನೆತ್ತಿ ಚರ್ಚಿಸಲೂ ಇಲ್ಲ. ಎಲ್ಲ ಆಗಬೇಕಾದಂತೆಯೇ ಆಯಿತು ಎಂಬ ಮನೋಭಾವ ಮುಖದಲ್ಲಿ ಹೇಗೆ ಬಿಂಬಿಸಬಹುದೋ ಹಾಗೆ ಜನಾರ್ದನಯ್ಯನ ಮುಖದಲ್ಲಿ ತೃಪ್ತಿಯ ಮುದ್ರೆ ಬಿದ್ದಿತು. "ಇನ್ನುಮುಂದೆ ಹೀಗೆಂದೂ ಮಾಡಬೇಡ ಮಗು!" ಎಂದು ಅಕ್ಕರೆ ಉಕ್ಕುವ ಮಧುರ ಧ್ವನಿಯಲ್ಲಿ ಬೋಧನೆ ಕೊಟ್ಟರು.

"ಇನ್ನುಮುಂದೆ ಹೀಗೆ ಮಾಡಬೇಕಾದ ಅವಶ್ಯತೆಯುಂಟೇ?" ಎಂದು ನಗುತ್ತಾ ತಟ್ಟನೆ ಅಡಿಗೆ ಕೋಣೆಗೆ ನೆಗೆದು ಪ್ರಭಾವತಿ ಮಾಯವಾದಳು.

೨೯—೪—೩೫

ನನ್ನ ಪತ್ರ

ಈ ಸಲ ನನ್ನಾಕೆ ಮದ್ರಾಸಿಗೆ ಹೋದಾಗ ನಮಗೆ ದೊಡ್ಡದೊಂದು ಗಂಡಾಂತರ ಒದಗಿತು. ತಿಂಗಳು ತುಂಬುವ ಮೊದಲೆ ಪ್ರಸೂತಿಯಾದುದು ಮಾತ್ರವಲ್ಲ; ಶಿಶುಗರ್ಭದಲ್ಲಿಯೇ ತೀರಿಹೋಗಿ ಹೆರಿಗೆಗೆ ಬಹಳ ಕಷ್ಟವಾಗಿ, ಆಕೆ ಒಂದೆರಡು ತಿಂಗಳವರೆಗೆ ಹೆರಿಗೆಯ ಆಸ್ಪತ್ರೆಯ ಸೇವಾ ಶುಶ್ರೂಷೆಗಳನ್ನು ಸ್ವೀಕರಿಸಬೇಕಾಯಿತು. ನಾನು ಆ ವೇಳೆಗೆ ಮದ್ರಾಸಿಗೆ ಹೋದೆ; ಕೆಲದಿನ ಅಲ್ಲಿಯೇ ಉಳಿದುಕೊಂಡೆ. ಆಕೆ ವಿಪತ್ಸೀಮೆಯನ್ನು ದಾಟಿದಳೆಂದು ಡಾಕ್ಟರರು ಡಂಗುರ ಸಾರುವವರೆಗೆ ದಿನಂಪ್ರತಿ ಆಸ್ಪತ್ರೆಗೆಹೋಗಿ ಕಣ್ಣೀರು ಸುರಿಸುತ್ತಿದ್ದೆ; ಕಣ್ಣನ್ನು ಒರಸಿಕೊಂಡು ಹಿಂದೆ ಬರುತ್ತಿದ್ದೆ. ಕೊನೆಗೆ ನನ್ನ ವಿಮಲೆ ಸುಧಾರಿಸಹತ್ತಿದಳು. ನನಗೂ ಜೀವಬಂತು. ಒಂದು ದಿನ ಬೆಳಗ್ಗೆ ಆಸ್ಪತ್ರೆಗೆ ಹೋಗಿ ಅಶ್ರುಪೂರ್ವಕ ಅವಳಿಂದ ಬೀಳ್ಕೊಂಡುದಾಯಿತು. ಪೇಟೆಯಿಂದ ಕಿತ್ತಳೆ ಹಣ್ಣುಗಳನ್ನು ತರುತ್ತೇನೆಂದು ಮಕ್ಕಳನ್ನು ವಂಚಿಸಿ ಹೊರಟು, ಸಂಜೆಯ "ಮಂಗಳೂರು ಮೈಲ್"ನೊಳಗೆ ನುಗ್ಗಿದುದೂ ಆಯಿತು. ಗಾಡಿ ಹೊರಡುವ ಗಂಟೆ ಹೊಡೆದುದೂ ಆಯಿತು. ನನ್ನ ದೇಹವನ್ನೂ ವ್ಯಸನವನ್ನೂ ಆ ಉಗಿಬಂಡಿಯು ಹೊತ್ತುಕೊಂಡು ಓಡುವುದಕ್ಕೆ ಪ್ರಾರಂಭಿಸಿದುದೂ ಆಯಿತು. ಆದರೆ ಗಂಡನ ಮನಸ್ಸಲ್ಲವೆ?....ಅದನ್ನು ಸಮಾಧಾನಪಡಿಸುವುದು ಹೇಗೆ?

ಹೊರಡುವಾಗ ನನ್ನ ಪ್ರಿಯೆ 'ಪ್ರತಿದಿನವೂ ಪತ್ರ ಬರೆಯಿರಿ' ಎಂದು ಆಜ್ಞೆಕೊಟ್ಟಿದ್ದಳು. ಕಣ್ಣೀರಿನ ಸಾಕ್ಷಿಯಾಗಿ ಬಿಕ್ಕುಮಾತಿನಲ್ಲಿ ಅಪ್ಪಣೆಕೊಟ್ಟಿದ್ದಳು. ಹೆಂಡತಿಯ ನಿರೂಪವಲ್ಲವೆ ಅದು? 'ಆಗದು' ಎನ್ನುವ ಹಕ್ಕಾದರೂ ಎಲ್ಲಿತ್ತು ನನಗೆ? ಒಂದವೇಳೆ ಹಕ್ಕಿನ ಸ್ಥಾಪನೆಯನ್ನು ಮಾಡಬಹುದಾದರೂ ಮನಸ್ಸು ಕೇಳುವುದೆ? 'ಆಗಲಿ' ಎಂದಿದ್ದೆ. ಪ್ರತಿದಿನ ಬರೆಯುವುದೇನನ್ನು? ಎಂಬ ವಿಚಾರ ಆಗ ಹೊಳೆದಿರಲಿಲ್ಲ. ಊರಿಗೆ ಬಂದು ಕೆಲವು ದಿವಸಗಳವರೆಗೆ ವಚನ ಪರಿಪಾಲನವನ್ನು ಅತಿ ಶ್ರದ್ಧೆಯಿಂದ ನಿರ್ವಹಿಸಿದೆ. ಇಷ್ಟರಲ್ಲಿಯೇ ವಿಮಲೆ ಸಂಪೂರ್ಣಾ

ರೋಗ್ಯವನ್ನು ಹೊಂದಿದಳು. ಮಕ್ಕಳ ಗಜ್ಜಿ, ಹುಣ್ಣು, ಶೀತ, ನೆಗಡಿಗಳೊಂದಿಗೆ ಪತ್ರದಲ್ಲಿ ತುಂಬ ಬೇಕಾದ ವಿಷಯಗಳ ಭಂಡವಳವೂ ಕಡಿಮೆಯಾಯಿತು. ದಿನಂಪ್ರತಿ ಬರೆಯುವುದನ್ನು ಬಿಟ್ಟು ಪೂರ್ವಪದ್ಧತಿಯಂತೆ ವಾರಕ್ಕೆ ಒಂದೋ ಎರಡೋ ಕಾಗದಗಳನ್ನಷ್ಟೇ ಬರೆದು ತೃಪ್ತನಾದೆ. ಪತ್ರಗಳಲ್ಲಿ ಬಟಾಟೆ, ನೀರುಳ್ಳಿ, ಮಲ್ಲಿಗೆ ಹೂ, ಮಾವಿನಹಣ್ಣುಗಳನ್ನು ತುಂಬಿಸಿ ಕಳುಹಿಸುವುದಾಗಿದ್ದರೆ ದಿನಂಪ್ರತಿ ಕಾಗದ ಬರೆಯಬಹುದಾಗಿತ್ತು. ಆದರೆ ಗಂಡ ಹೆಂಡಿರು ಪರಸ್ಪರವಾಗಿ ವಿನಿಮಯ ಮಾಡಿಕೊಳ್ಳುವ ಪತ್ರ ಲೇಖನಗಳಲ್ಲಿ ಇವುಗಳಿಗಿಂತ ರಸವತ್ತಾದ ಸುಗಂಧಮಯವಾದ ಸರಕುಗಳು ಇರಬೇಕಲ್ಲವೆ? ಬಟಾಟೆ ನೀರುಳ್ಳಿಗಳು ಕ್ಷೇಮ ಸಮಾಚಾರಗಳನ್ನು ತಿಳಿಸುವುವೆ? ಹೇಳಬೇಕಾದ ವಿಷಯಗಳಿಲ್ಲದಿದ್ದರೆ, ಅಂಗಡಿಯಿಂದ ಬೆಲೆಗೆ ಪಡೆದು ಕಳುಹಿಸಲಾಗುತ್ತದೆಯೆ? ನನ್ನ ವಿಮಲೆ, ನನ್ನ ವೇಣು ಪದ್ದುಗಳು ಕುಶಲರಾಗಿದ್ದಾರೆಂದು ವಾರಕ್ಕೆ ಒಮ್ಮೆ ಅಥವಾ ಎರಡುಬಾರಿ ಕೇಳಿ ತಿಳಿದರೆ ಸಾಕು. ಇಷ್ಟು ತಿಳಿಯಿತೆಂದರೆ, ಪ್ರಚಂಡ ಭೂಕಂಪವಾಗಿ ಮದ್ರಾಸು ನಗರವು ಇಡಿಯಾಗಿ ರಾಶಿಮಾಡಿದ ಹಪ್ಪಳದಂತೆ ಹುಡಿಹುಡಿಯಾದರೇನು? ಅದನ್ನು ತಿಳಿಯಬೇಕಾದ ಆವಶ್ಯಕ ನನಗೇನು? ಎಂಬ ನಿಸ್ಸಂಗಭಾವದಿಂದ ಒಂದೋ ಎರಡೋ ಪತ್ರಗಳನ್ನಷ್ಟೆ ಬರೆಯುತ್ತಿದ್ದೆ.

ಮದ್ರಾಸಿನಲ್ಲಿದ್ದಾಗ ಪ್ರತಿದಿನವೂ ಹೆಂಡತಿಯ ದರ್ಶನಕ್ಕಾಗಿ ಹೆರಿಗೆಯ ಆಸ್ಪತ್ರೆಗೆ ಹೋಗುತ್ತಿದ್ದೆನೆಂದು ಮೊದಲೇ ಹೇಳಿದ್ದೆನಲ್ಲವೆ? ಆಸ್ಪತ್ರೆಯಲ್ಲಿ ಮಿಸ್. ರಾಜಂ ಎಂಬವರ ಪರಿಚಯ ನನಗಾಯಿತು. ಇವರು ಆಸ್ಪತ್ರೆಯ ಪ್ರಧಾನ ಡಾಕ್ಟರರು. ಆಸ್ಪತ್ರೆಯ ರೋಗಿಗಳನ್ನು ಮಾತೃ ವಾತ್ಸಲ್ಯದಿಂದ ಕಾಣುತ್ತಿದ್ದರು. ಅಂಥ ಡಾಕ್ಟರರ ವಶದಲ್ಲಿ ಹೆಂಡತಿಯಿರುವಳೆಂಬುದರಿಂದ ಮನಸ್ಸೆಷ್ಟೋ ಹಗುರವಾಗಿತ್ತು. ಅಲ್ಲದೆ ಅವರಿಗೆ ಕನ್ನಡಭಾಷೆ ಹರುಕು ಮುರುಕಾಗಿ ಬರುತ್ತಿದ್ದುದರಿಂದ ಇಂಗ್ಲೀಷು ತಮಿಳುಗಳಲ್ಲಿ ಆಡಲರಿಯದ–ಇತರರಿಗೆ ಅರ್ಥವಾಗುವಂತೆ ಆಡಲರಿಯದ–ವಿಮಲೆಗೆ ಎಷ್ಟೋ ಸಹಾಯವಾಗುತ್ತಿದ್ದಿತೆಂದು ಬೇರೆ ಹೇಳಬೇಕಾಗಿಲ್ಲ.

ಮಿಸ್. ರಾಜಮ್ಮನ ಗುಣಗಳ ವಿಚಾರ ಹೆಚ್ಚೇನೂ ಹೇಳಬೇಕಾಗಿಲ್ಲ. ಗುಣವು ಗೊತ್ತಿರುವವರಿಗೇ ಗೊತ್ತು. ರೂಪದ ಸಮಾಚಾರ ಹಾಗಲ್ಲ. ತೆರೆದಿಟ್ಟ ಪುಸ್ತಕದಂತೆ ಅದನ್ನು ಯಾರೂ ಓದಬಹುದು. ನನ್ನ ಸೌಂದರ್ಯ ವಿಮರ್ಶಾದೃಷ್ಟಿಯಲ್ಲಿ–ರಾಜಮ್ಮ ಕುರೂಪೆಯೆನ್ನಲಾಗುವುದಿಲ್ಲ. ವಯಸ್ಸಿನ ಪ್ರಮಾಣವನ್ನು ಹೊರಗೆ ಬಿಡದ ಮೈಕಟ್ಟೆ ಅವಳ ಲಾವಣ್ಯದ ತಳಹದಿ; ಬಣ್ಣ ನಸುಕಪ್ಪಾಗಿದ್ದರೂ ಬಾಳೆಯದಿಂಡಿನಂತೆ ನಯವಾಗಿ ಗುಂಡು ಗುಂಡಾಗಿ ತುಂಬಿಕೊಂಡಿದ್ದ ಅವಯವಗಳು. ಹೆಚ್ಚಾಗಿ ಮನಸ್ಸನ್ನೂ ದೃಷ್ಟಿಯನ್ನೂ ಆಕರ್ಷಿಸುವುದೆಂದರೆ ಆಕೆಯ ತೀಕ್ಷ್ಣ–ಚಂಚಲವಾದ ನೋಟ. ಇದು ಯಾರ ದೃಷ್ಟಿಯನ್ನೇ ಆಗಲಿ ಒಮ್ಮೆ ಎಳೆದು ನಿಲ್ಲಿಸುವಷ್ಟು ಪ್ರಭಾವವುಳ್ಳುದು. ನಸುನೀಳವಾದ ಮುಖಮಂಡಲ. ನನ್ನ ಭಾವನೆಯಲ್ಲಿ ಶುದ್ಧ ವರ್ತುಲಾಕಾರದ ಮುಖಮಂಡಲವು ಶುದ್ಧ ಮೂಢತೆಯ ಮುದ್ದೆಯಾಗಿದೆ. ಆದುದರಿಂದ ಯಾವುದನ್ನು 'ಹಸಿನೀಟ' ಎಂಬ ರೂಢಭಾಷೆಯಲ್ಲಿ ಬಣ್ಣಿಸುತ್ತೇವೋ ಅಂತಹ ಮುಖವೇ ಸೊಗಸೆಂದು ನನ್ನ ಖಂಡಿತಾಭಿಪ್ರಾಯವಾಗಿದೆ. ಅಥವಾ ಅಭಿಪ್ರಾಯಗಳು ಬೇಕಾಗಿಲ್ಲ. ದೇವರುಕೊಟ್ಟ ರೂಪ. ಅದನ್ನು ಹೊಗಳಿ ತೆಗಳಿ ನಾವೇನು ಮಾಡಲಿದೆ? ಇಚ್ಛೆಯಿದ್ದರೆ ಮೆಚ್ಚುವುದು; ಇಲ್ಲವೆ ಮೆಚ್ಚದಿರುವುದು! ಒಂದು ವಿಷಯವನ್ನು ಸ್ಪಷ್ಟೋಕ್ತಿಯಲ್ಲಿ ಹೇಳಿಬಿಡಬಹುದು. ಈ ಮಿಸ್. ರಾಜಮ್ಮನವರು ಕರುಣೆಯಿಟ್ಟು ಪತ್ರವ್ಯವಹಾರ ಮಾಡಲುಪಕ್ರಮಿಸಿದರೆ, ಅದೊಂದು ಚಿಕ್ಕ ನಮೂನೆಯ ಭಾಗ್ಯ–ಎಂದು ಸೇಕಡಾ ಐವತ್ತು ಮಂದಿಯಾದರೂ ಭಾವಿಸಬಹುದು. ಅಂತೂ ನನಗೆ ಆಕೆಯೊಡನೆ ಪತ್ರವ್ಯವಹಾರ ಕೂಡುವುದು ಹೆಮ್ಮೆಯ ವಿಷಯವಾಯಿತು. ಇದಕ್ಕೆ ಅನುಕೂಲವಾಗಿ ಆಕೆ "ತಾವೇನೂ ಗಾಬರಿಪಡಲು ಕಾರಣವಿಲ್ಲ; ನನ್ನ ಸಹೋದರಿಯೆಂಬ ಭಾವದಿಂದ ತಮ್ಮ ಅರ್ಧಾಂಗಿಯನ್ನು ನೋಡಿಕೊಳ್ಳುತ್ತೇನೆ; ಏನಾದರೂ ತಿಳಿಸಬೇಕೆಂದಿದ್ದರೆ ಬರೆಯಿರಿ; ವಿಳಾಸ ಕೊಡುತ್ತೇನೆ" ಎಂದು ಚಿಕ್ಕ ಚೀಟೊಂದನ್ನು ಕೈಮೆತ್ತಿ ಕೊಟ್ಟಳು. ನನಗೆ ಬರೆಯುವುದು ಆಕೆಗೂ ಹೆಮ್ಮೆಯ ವಿಷಯವಾಗಿದ್ದಿರಬಹುದೆ? ಇದು ಸಂದೇಹಾಸ್ಪದ ವಿಷಯವೇ ಸರಿ. ಆಕೆ ವಿಳಾಸವನ್ನು ಕೊಟ್ಟಳು; ನಾನು ತೆಗೆದುಕೊಂಡೆ.

ಅತ್ತಿತ್ತ ಓಡುವ ಮನಸ್ಸನ್ನು ಇತ್ತಿತ್ತ ಎಳೆಯುವ ಬೆಡಗಿನ ಕ್ರಮದಿಂದ ಆಕೆ ನನ್ನೆಡೆಗೆ ಕೈಸೀಡಿ ಆ ಚೀಟನ್ನು ಕೊಟ್ಟಳು. ನಾನಾದರೂ ಅತ್ಯಂತ ಸಂಭಾವಿತ–ಸಭ್ಯ–ವಿನೀತ ಸ್ವಭಾವದಲ್ಲಿ ತಕ್ಕಮಟ್ಟಿನ ಚಿಕ್ಕ ನಿಟ್ಟುಸಿರೊಂದನ್ನು ಕರೆದು ಹಸ್ತಲಾಘವಕೊಟ್ಟು, ಹಸ್ತಲಾಘವಕ್ಕೆ ನ್ಯಾಯಪ್ರಕಾರವಾಗಿ ಎಷ್ಟು ಸಮಯಬೇಕೋ ಅಷ್ಟೆ ಸಮಯದೊಳಗೆ ಆ ಕೈಯನ್ನು ಬಿಟ್ಟು, ಮರ್ಯಾದೆಯನ್ನು ಪಾಲಿಸಿದೆ. ಒಂದೇ ಒಂದು ನೋಟವನ್ನು ಆಕೆಯ ಮುಖದ ಕಡೆಗೆ ಬೀರಿದೆ. ಹೌದು, ಒಂದೇ ಒಂದು ನಿಮಿಷ ಎವೆಯಿಕ್ಕದೆ ಆ ಪ್ರದೇಶವನ್ನು ನೋಡಿದೆ. ಎಲ್ಲ ಒಂದೇ ಒಂದು ನಿಮಿಷ! ಅವಳು ನಕ್ಕಳು; ನಾನೂ ನಕ್ಕೆ! ಅನಂತರ ಒಂದೊಂದು ಮಣ ಭಾರದ ಅಡಿಯನ್ನು ಹೇಗೋ ಎಳೆಯುತ್ತಾ ಆಸ್ಪತ್ರೆಯ ಸುತ್ತಲೂ ವಿಲಂಬಿತ ದೃಷ್ಟಿಯನ್ನು ಹರಡುತ್ತಾ ನನ್ನ ಮನೋಭಾವನೆಗಳೊಂದಿಗೆ ಉರುಡಾಡುತ್ತಾ ಹೊರಟೆ. ಅದೇಕೊ ತಿಳಿಯದು; ಆಸ್ಪತ್ರೆಯನ್ನು ಬಿಟ್ಟುಬರಲು ಕಾಲುಬಾರದು; ಕಾಲುಬಂದರೆ ಮನಸ್ಸುಬಾರದು. ಆಸ್ಪತ್ರೆಯ ಸುತ್ತು ಮುತ್ತಲಿನ ವಠಾರದಲ್ಲಿ ಏನೋ ಒಂದು ಅನಿರ್ವಚನೀಯ ಸುಗಂಧವು ಪಸರಿಸಿದ ಹಾಗೆ, ಮನೋಮೋಹಕವಾದ ಏನೋ ಒಂದು ಗುಣ ಆ ಭೂಭಾಗದಲ್ಲಿ ಇದ್ದಹಾಗೆ,ಅಲ್ಲಿಯ ಶಾಂತಿಯ ನಡುವೆ ವಾಯುತರಂಗಗಳಲ್ಲಿ ಏನೋ ಒಂದು ಬಗೆಯ ದಿವ್ಯಗಾನದ ಮಂಜುಲನಾದವು ಅಲೆ ಅಲೆಯಾಗಿ ಕಿವಿಗೆ ಹೊಡೆಯುತ್ತಿದ್ದಹಾಗೆ, ಭಾಸವಾಗುತ್ತಿತ್ತು. ಮೌನವು ಮುಖಕ್ಕೆ ಬೀಗಹಾಕಿತ್ತು. ನಾನು ಅಲ್ಲಿಂದ ಹೇಗೋ ಹೊರಟೆ.

ದೂರದಲ್ಲಿ ನಿಂತಿದ್ದ ವಿಮಲೆ ನನ್ನನ್ನೆ ದಿಟ್ಟಿಸಿ ನೋಡುತ್ತಿದ್ದಿರಬೇಕು!

* * * *

“ವಿಮಲೆ ಇನ್ನು ನಾಲ್ಕು ದಿವಸಗಳಲ್ಲಿ ಮಂಗಳೂರಿಗೆ ಹೊರಡುವಳು. ಹೊರಡುವಾಗ ತಂತಿ ಬಿಡಲಾದೀತು”–ಎಂದು ನನ್ನ ಮಾವನ ಪತ್ರ ಬಂದೇಬಂತು. ವಿಮಲೆ ಮಂಗಳೂರಿಗೆ ಬರುವುದು! ಆ ದಿನ ತಂತಿ ಬರುವುದು! ನಾನು ಅವಳನ್ನು ಸ್ವಾಗತೀಕರಿಸುವುದು! ಇಡೀ ಲೋಕವು ಕಣ್ಣುತೆರೆದು ನೋಡುತ್ತಿರುವಂತೆಯೇ ನಾನೇಕೆ ಅವಳನ್ನು

ಕೈಹಿಡಿದು ಕರೆದೊಯ್ಯಬಾರದು? ಎಷ್ಟು ದಿನದ ಸಲ್ಲಾಪ, ಎಷ್ಟು ದಿನದ ಪ್ರಣಯ ವಚನ, ಇನ್ನೆಷ್ಟು ಕಾಲದ ಪ್ರೇಮಕಲಹ ಬಾಕಿಬಿದ್ದಿತ್ತೋ ಇತರರಿಗೆ ಏನುಗೊತ್ತು! ಆ ದಿನ ನನ್ನನ್ನು ನಾನೇ ಅಭಿನಂದಿಸಿಕೊಂಡೆ. ಕೃತಜ್ಞತಾಸೂಚನೆಯ ಠರಾವೊಂದನ್ನು ಹೃದಯದ ಒಳಗೇ ಅಂಗೀಕರಿಸಿ ದೇವರ ಕಡೆಗೆ ಕಳುಹಿಸಿಕೊಟ್ಟೆ.

ಆದರೆ ಈ ಮಧ್ಯೆ—ಎಂದರೆ ವಿಮಲೆಯ ಆಗಮನ ವಾರ್ತೆಯನ್ನು ಕೇಳಿ, ಅವಳು ಮಂಗಳೂರಿಗೆ ಸಂದರ್ಶನ ಕೊಡುವುದರ ಮೊದಲು, ಅವಶ್ಯ ಕರ್ತವ್ಯಗಳೆರಡನ್ನು ಮಾಡಬೇಕಾಗಿದ್ದಿತು. ಮೃತ್ಯುವಿನೊಡನೆ ಖಾಡಾಖಾಡಿ ಸೆಣಸಾಡಿ ಜಯಿಸಿಬಂದ ಪ್ರೇಯಸಿಗೆ ಒಂದು ಪತ್ರ ಬರೆಯುವುದು. ಇಂತಹ ಯುದ್ಧವಾಗುತ್ತಿದ್ದಾಗ, ನಡುವೆ ಬಂದು "ತಡೆ! ತಡೆ!" ಎಂದು ಮೃತ್ಯುವನ್ನಾಚೆಗೆ, ನನ್ನವಳನ್ನೀಚೆಗೆ, ದೂಡಿ ಶಾಂತಿಸ್ಥಾಪನೆ ಮಾಡಿದ ರಾಜಮ್ಮನಿಗೊಂದು ಪತ್ರವನ್ನು ಲಿಖಿಸುವುದು. ಈ ಎರಡು ಕೆಲಸಗಳನ್ನು ಭಕ್ತಿಯಿಂದ ಮಾಡಿದೆ. ಪ್ರೇಯಸಿಯೂ ಹಿಂದಿನವಳೆ....ರಾಜಮ್ಮನೂ ಹಿಂದಿನವಳೇ....ಬರೆಯಬೇಕಾಗಿದ್ದುದೂ ಬರಿದುದೂ ಅವರಿಗೇ! ಎಂತಹ ಸಂತೋಷದ ಕೆಲಸ!

ವಿಮಲೆಗೆ ನಾನೇನು ಬರೆದೆನೆಂದು ಹೇಳುವುದು ಅವಶ್ಯ. ಹೇಳುವ ಮೊದಲೆ ಒಂದು ಸೂಚನೆಯನ್ನು ಕೊಡುವುದೂ ಅವಶ್ಯ. ನನ್ನಾಕೆ ಅತ್ತ ಶುದ್ಧ ಹಳ್ಳಿಯ ಹೆಂಗಸೂ (ಇಷ್ಟು ಚಿಕ್ಕ ಪ್ರಾಯದವಳನ್ನು ಹೆಂಗುಸೆನ್ನಲೆ? ಅಲ್ಲ—ಹುಡುಗಿ ಎಂದು ತಿದ್ದಿಕೊಳ್ಳಿ.) ಅಲ್ಲ. ಇತ್ತ ಹೊಸ ಪರಿಷ್ಕಾರದ ಶುದ್ಧವಸ್ತುವೂ ಅಲ್ಲ. ನಿಜಸ್ಥಿತಿ ಹೀಗಿದ್ದರೂ ಪರಿಷ್ಕಾರ ಹೊಂದಲು ಅವಳ ಪ್ರಯತ್ನ. ಈ ಪ್ರಯತ್ನಕ್ಕೆ ತಕ್ಕಂತೆ ವರ್ತಿಸುವ ಕ್ರಮ ನನಗೆ ತಿಳಿದೂ ಇತ್ತು. ಇಂಥ ಹುಡುಗಿಗೆ ಕಾಗದ ಬರೆಯುವಾಗ ಅಭಿಪ್ರಾಯಗಳನ್ನು ಆರಿಸಿಕೊಳ್ಳಬೇಕು. ನಿಘಂಟುಗಳನ್ನು ನೋಡಿ ಶಬ್ದಗಳನ್ನು ಹುಡುಕಬೇಕು. ಈ ವಿಷಯ ಹಲವರಿಗೆ ತಿಳಿದಿರಲಾರದು. ಭಾಷೆಯಲ್ಲಿ ಲಕ್ಷೋಪಲಕ್ಷ—ಸುಂದರವೆಂದು ನಾವು ಭಾವಿಸಬಹುದಾದ ಪದಗಳಿದ್ದರೂ ಇಂತಹ ಹುಡುಗಿಗೆ ಕೆಲವೇ ಪದಗಳಲ್ಲಿ ಪ್ರೀತಿ. ಅವು ಗಳನ್ನು ಕಲಿತು ಬರೆಯದಿದ್ದರೆ ಮಹಾಪಾಪವಾಗುತ್ತದೆ. ಬರಿಯ ಹೆಸ

ರನ್ನೆತ್ತಿ–ಇಂಥವಳಿಗೆ ಇಂಥವನ ಪತ್ರ–ಎಂದು ಬರೆದರೆ ವಕೀಲರು ಕೊಡುವ ದಾವೆ ನೋಟೀಸಿನ ಧಾಟಿಯಾಯಿತು. "ನನ್ನ ಸಹಧರ್ಮಿಣಿ!" ಎಂದು ಒಕ್ಕಣಿಸಿದರೆ, ವಕೀಲರು ನ್ಯಾಯಾಧೀಶರನ್ನು ಸಂಬೋಧಿಸುವ ಖಾವಂದಿರೇ–ಎನ್ನುವಂತಹ ರೂಢಿಯಾಯಿತು. ಇಂತಹ ನುಡಿಗಟ್ಟು ಗಳಲ್ಲಿ ಉಪಚಾರ ಹೆಚ್ಚು; ಹಾರ್ದಿಕತೆ ಕಡಿಮೆ. 'ಅರ್ಧಾಂಗಿ!' ಎಂದರೂ ಅಷ್ಟಷ್ಟೆ. ಇದು ಸ್ತ್ರೀಯರ ಇಡಿ ಹಕ್ಕಿನ ಕಾಲ; ಅರೆಹಕ್ಕಿನ ದಲ್ಲ. ವಾಮಾಂಗಿ–ಎಂದರೆ ಅಪಮಾನ. ಹೃದಯೇಶ್ವರಿ–ಎಂಬ ಪದ ಪ್ರಯೋಗ ವೆಂಕಟಾಚಾರ್ಯರ ಕಾದಂಬರಿಯ ಕಾಲದ್ದು. ಇಂದಿನ ಬೆಡಗುಗಾರ್ತಿ ಹೇಗೆ ಮೆಚ್ಚುವಳು? ಸ್ವಪ್ನಾಧಿರಾಜ್ಞಿ ಎಂಬ ಗಂಭೀರ ಸಂಸ್ಕೃತವನ್ನು ಪ್ರಯೋಗಿಸಿದರೆ, ಒಂದು ಅಪಾರ್ಥಕಲ್ಪನೆಗೆ ಎಡೆ ಕೊಟ್ಟಂತಾಗುತ್ತದೆ. ಗಂಡ ಯಾವಾಗಲೂ ಸ್ವಪ್ನದಲ್ಲಿ ಅಲೆದಾಡುವ ಪ್ರಾಣಿ ಎಂಬ ಭಾವನೆಯನ್ನು ಯಾವ ಗಂಡ ಯಾವ ಹೆಂಡತಿಯ ಮನ ಸ್ಸಿನಲ್ಲಿ ಉಂಟುಮಾಡಬಲ್ಲ? ಮುದ್ದು–ಚಿನ್ನ–ಬಂಗಾರ....(ಕಬ್ಬಿಣ, ಸೀಸ, ಹಿತ್ತಾಳಿ ಮೊದಲಾದ ಲೋಹಗಳ ಹೆಸರನ್ನು ವರ್ಜಿಸಿ) ಎಂದು ಸಂಬೋಧಿಸಿದರೆ, ಪ್ರೇಮವನ್ನು ಗಳಿಸುವ, ಗಳಿಸಿದುದನ್ನು ಉಳಿಸಿ ಕೊಳ್ಳುವ ಮೊದಲ ಹೆಜ್ಜೆಯನ್ನಿಟ್ಟ ಹಾಗಾಯಿತು. ದಿನಂಪ್ರತಿ ಬಂಗಾರ ಪುತ್ಥಳಿಗಳನ್ನು ಮಾತಿನಲ್ಲಿ ಖರ್ಚುಮಾಡಿದಷ್ಟೂ ಪ್ರೇಮಗೌರವ ಹೆಚ್ಚು ವುದು. ಸ್ವಲ್ಪಕಾಲದಲ್ಲಿ ಈ ಬಂಗಾರ ಪುತ್ಥಳಿಗಳ ಬಣ್ಣವೂ ಮಾಸಿ ಹೋಗುವುದು. ನನ್ನ ಮಾತು ನನ್ನಾಕೆಯ ಸಂಬಂಧದಲ್ಲಿಯೂ ಅದು ದು ಹೀಗೆಯೇ. ಕೊನೆಗೆ ಮುದ್ದು ಎಂಬ ಪದವನ್ನಾರಿಸಿದೆ. ಹೀಗೆ ಬರೆದೆ.

ಮುದ್ದು !

ಸೀಸಿಲ್ಲದ ಹಗಲಿಗೆ ಅದೆಷ್ಟು ಗಂಟೆ? ಹನ್ನೆರಡೆ? ಅಲ್ಲ; ನೂರ ಹನ್ನೆರಡು! ಮನೆಯೊಳಗೂ ಸುಖವಿಲ್ಲ; ಹೊರಗೂ ಇಲ್ಲ; ಮದ್ರಾಸಿ ನಿಂದ ಬಂದಂದು ನನ್ನ ಮನಸ್ಸು ನನ್ನ ವಶವಲ್ಲಿಲ್ಲ. ಉಗಿಬಂಡಿ ಮಂ ಗಳೂರಿನಿಂದ ಮದ್ರಾಸಿಗೆ ತಲುಪಬೇಕಾದರೆ ಇಪ್ಪತ್ತೆರಡು ಗಂಟೆ ಬೇಕು. ನನ್ನ ಹೃದಯವು ಗಂಟೆಗೆ ಇಪ್ಪತ್ತೆರಡು ಬಾರಿ ಮದ್ರಾಸಿಗೆ ಹೋಗುತ್ತಾ

ಬರುತ್ತಾ ಇದೆಯಲ್ಲ. ಇದಕ್ಕೇನು ಕಾರಣ? ನೀನಿರುವ ಆಸ್ಪತ್ರೆ, ವಾಸದ ಮನೆ, ಅದರ ಅಕ್ಕಪಕ್ಕ, ನೆರೆಕರೆ–ಇವೆಲ್ಲ ನನ್ನ ಮನಸ್ಸಿಗೆ ಯಾತ್ರಾಸ್ಥಳ ಗಳಾಗಿವೆಯಲ್ಲ; ಅದೇಕೆ?

ಬಂದ ಮೇಲೆ ಅದರ ಅವಸ್ಥೆಯನ್ನು ಏನೆನ್ನಬೇಕು? ಶೂನ್ಯವಾದ ಪ್ರಪಂಚದಲ್ಲಿ ಶೂನ್ಯವಾದ ಮನೆಯೊಳಗೆ ಇರಲಾರೆನೆಂದು ಪುನಃ ಮದ್ರಾಸಿಗೆ ಹೊರಡುತ್ತದೆ. ಮನಸ್ಸಿನ ಪ್ರಯಾಣಕ್ಕೆ ಗಾಡಿ ಬೇಕಾ ಗಿಲ್ಲ; ವೆಚ್ಚವಿಲ್ಲ; ಎಂದು ಪರಮಾತ್ಮ ವಿಧಿಸಿದುದು ಲೇಸಾಯಿತು. ಹಾಗಲ್ಲದಿರುತ್ತಿದ್ದರೆ ಒಂದೇ ಒಂದು ದಿನದ ಪ್ರಯಾಣದ ವೆಚ್ಚಕ್ಕೆ ಆಸ್ತಿ ಮನೆಗಳನ್ನು ಮಾರಬೇಕಾಗುತ್ತಿತ್ತು.

ಮುದ್ದು! ಇನ್ನು ಒಂದೆರಡು ದಿವಸಗಳಲ್ಲಿ ಬರುವೆಯಷ್ಟೆ. ಸದ್ಯಕ್ಕೆ ಹೆಚ್ಚೇನೂ ಬರೆಯುವುದಿಲ್ಲ. ಮನಸ್ಸಿಗೆ ಇನ್ನೂ ಹೆಚ್ಚಾದ ಪ್ರಯಾಣ ಸಂಕಟವನ್ನು ಕೊಡದೆ ಒಮ್ಮೆಗೆ ಬಂದುಬಿಡು. ದುಃಖ ಪ್ರವಾಹದಲ್ಲಿ ತೇಲಿಹೋಗುವ ಈ ಪ್ರಾಣಿಯನ್ನು ಮೇಲೆತ್ತು !

ಹುಡುಗ ಏನು ಮಾಡುತ್ತಾನೆ? ಹುಡುಗಿ 'ಅಪ್ಪ ಅಪ್ಪ' ಎನ್ನು ತ್ತಾಳೊ.... 'ರ'ಕಾರದ ಉಚ್ಚಾರಣೆ ಚೆನ್ನಾಗಿ ಬರುವುದೊ? ನಾನು ಕಳುಹಿಸಿದ ರತ್ನದ ಬಳೆ ಕೈಗೆ ಸರಿಯಾಗಿ ಹೊಂದುವುದೊ? ನಿನಗಾಗಿ ಒಂದೆರಡು ರೇಶ್ಮೆ ಕಣಗಳನ್ನು ತೆಗೆದಿಡಲೊ? ಒಬ್ಬಳೆ ಬರುವೆಯೊ? ಮತ್ತಾರಾದರೂ ಬರುವರೊ....ನಾನು ನಿನ್ನನ್ನು ಹೇಗೆ ಸ್ವಾಗತಿಸಬೇಕು? ಮಾವನಿಗೆ ಸಂಬಳ ಹೆಚ್ಚಿದೆಯೊ?

ಇಂತೀ

ಪ್ರೇಮಪಿಪಾಸಿತ—ಶ್ಯಾಮು !

ಪತ್ರದಲ್ಲಿ ತಪ್ಪೇನಿದೆ? ದಿನದ ಘಂಟೆಗಳು. . .ಘಂಟೆಗೆ ಇಪ್ಪತ್ತೆ ರಡು ಬಾರಿ ಪ್ರಯಾಣ....ಮೊದಲಾದ ಮಾತುಗಳನ್ನು ಕೇಳುವಾಗ ಇದೇನೋ ಭೂಗೋಳ ವಿಷಯದಲ್ಲಿ ಅಥವಾ ಲೆಕ್ಕದಲ್ಲಿ ಪ್ರಶ್ನೆ ಕೇಳು ತ್ತಾರೆ....ಎಂಬ ಭಾವನೆಯಾಗುವುದು. ಆದರೇನು? ಅವುಗಳೊಳಗೆ ಇರುವುದು ಪ್ರೇಮದ ತಿರುಳಲ್ಲವೆ? ಒಂದೆರಡು ವಾಕ್ಯಗಳಲ್ಲಿ ಭಾವಾ ವೇಶವನ್ನು ನೋಡಬಹುದು. ಕಾವ್ಯ ಸರಣಿಯನ್ನು ಕಾಣಬಹುದು.

ಕೊನೆಯ ಪಾದದಲ್ಲಿ ಆರು ಪ್ರಶ್ನಾರ್ಥಕ ಚಿಹ್ನೆಗಳು....ಅವಳ ವಿಷಯ ವಾಗಿ ಮಕ್ಕಳ ವಿಷಯವಾಗಿ....ಅವಳ ಅಪ್ಪನ ವಿಷಯವಾಗಿ....ನಾನೂ ಸಾಂಸಾರಿಕ ಪ್ರೇಮಬಂಧಗಳ ಸವಿಯನ್ನರಿತವನೆಂದು ತಿಳಿಸಲು ಬೇರೆ ಸಾಕ್ಷ್ಯವು ಬೇಕೆ? ಆದಿಯಲ್ಲಂತೂ ಮುದ್ದು ಮುದ್ದಾದ ನಮ್ಮ ಶಬ್ದವೇ! ನಮಗಾಗಿಯೇ ನಮ್ಮ ಅಚ್ಚಗನ್ನಡದ ಪುಣ್ಯಾತ್ಮರಾದ ಭಾಷಾ ಕರ್ತೃಗಳು ನಿರ್ಮಿಸಿದ ಮುದ್ದುಪದ! ಕೊನೆಯಲ್ಲಿ ಬರಿಯ ಶ್ಯಾಮು. ಶ್ಯಾಮರಾವ್, ಬಿ. ಎ. ಎಂದು ಬರೆದಿದ್ದರೆ, ಇದು ಕೆಲಸಕ್ಕಾಗಿ ಅರ್ಜಿ ಹಾಕುವ ಮರ್ಜಿ ಎಂಬ ಆಕ್ಷೇಪಕ್ಕೆ ಎಡೆಯಾಗುತ್ತಿತ್ತು. ಅಂತಹ ಯಾವ ಆರೋಪಣೆಗೂ ಎಡೆಯಿರಲಿಲ್ಲ ನನ್ನ ಪತ್ರದಲ್ಲಿ!

* * * *

ಆ ದಿನವೂ ಬಂತು; ತಂತಿಯೂ ಬಂತು—'ವಿಮಲೆ ಹೊರಟಳು!' ಅವಳೇಕೆ ಮದ್ರಾಸಿನಿಂದ ಹೊರಡಬಾರದು? ನಾನೇಕೆ ಸ್ವಾಗತ ಸಮಾರಂಭಗಳನ್ನು ಏರ್ಪಡಿಸುವ ಕರ್ತವ್ಯ ಸುಖವನ್ನು ಅನುಭವಿಸ ಬಾರದು? ನನ್ನ ಸಂತೋಷಕ್ಕೆ ಪಾರವೇ ಇರಲಿಲ್ಲ. ಬಂಡಿ ಬರುವು ದಕ್ಕೆ ಒಂದು ಗಂಟೆಗೆ ಮುಂಚಿತವಾಗಿಯೇ ನಿಲ್ದಾಣಕ್ಕೆ ಹೋಗಿ, ಪ್ಲೇಟ್ ಫಾರ್ಮಿನ ಉದ್ದಕ್ಕೂ ಅಗಲಕ್ಕೂ ಸುಳಿದಾಡಿದೆ. ಬಂಡಿ ಬರ ಲಾರದು. ವಿಮಲೆಯ ಆಗಮನ ದಿನದಲ್ಲಿಯೇ ಬಂಡಿ ತಡಮಾಡ ಬೇಕೆ? ಅಥವಾ ಗಡಿಯಾರವೆ ಒಳಸಂಚು ಮಾಡಿರಬಹುದೆ? ನನಗೆ ಸಹಜವಾಗಿ ಉರಿಸಿಟ್ಟು ಬಂತು. ಕಣ್ಣು ತೆಗೆಯದೆ ಗಡಿಯಾರವನ್ನೇ ನೋಡಿದೆ. ನೋಟದಿಂದ ನನ್ನ ಸಿಟ್ಟನ್ನೆಲ್ಲ ಅದರ ಮೇಲೆ ಕಾರಿದೆ. ನಿರ್ಜೀವವಾದ ಆ ಗಡಿಯಾರದ ಯಾವುದಾದರೊಂದು ಯಂತ್ರದೊಳಗೆ ಒಂದು ಸಾಸಿವೆ ಕಾಳಿನಷ್ಟು ಜೀವವಿರುತ್ತಿದ್ದರೆ, ಆ ಜೀವದೊಂದಿಗೆ ಕಣದಷ್ಟು ಪೌರುಷವಿರುತ್ತಿದ್ದರೆ, ಖಂಡಿತವಾಗಿಯೂ ಸಮಯ ತೋರಿ ಸುವ ಕೆಲಸವನ್ನು ಸದ್ಯಕ್ಕೆ ಮುಂದುವರಿಸಿಟ್ಟು ಮುಳ್ಳಿನ ಕೈಗಳಿಂದ ನನ್ನ ಎರಡೂ ಕೆನ್ನೆಗಳಿಗೆ ಬಲವಾಗಿ, ನಿರ್ದಯವಾಗಿ, ನಿರ್ದಾಕ್ಷಿಣ್ಯ ವಾಗಿ, ತಪರಾಕನ್ನು ಕೊಡುತ್ತಿತ್ತೇನೋ! ಅಂತಹ ದ್ವೇಷಭಾವ ಹೊ ಮ್ಮುತ್ತಿತ್ತು ನನ್ನ ಕಣ್ಣುಗಳಲ್ಲಿ. ಅದು ಹಾಗೊಂದನ್ನೂ ಮಾಡಲಿಲ್ಲ.

ನನ್ನ ಮೇಲೆ ಕನಿಕರವಿಟ್ಟು—ಬೇಗ ಬೇಗನೆ ಮುಳ್ಳುಗಳನ್ನು ಓಡಿಸಲೂ ಇಲ್ಲ. ನಾಲ್ಕು ಘಂಟೆ ಇಪ್ಪತ್ತೈದು ನಿಮಿಷಗಳಿಗೆ ಮುಂಚೆ ಬಂಡಿ ಬರಲೂ ಇಲ್ಲ. ನನ್ನದೇ ಆದ ಒಡವೆಯನ್ನು ನನ್ನ ಬಳಿಗೆ ತಲುಪಿಸುವ ವಿಷಯದಲ್ಲಿ ಉಗಿಬಂಡಿಗೂ ಇಷ್ಟು ಮತ್ಸರವಲ್ಲವೇ?

ಬಂಡಿ ನಿಲ್ದಾಣದಲ್ಲಿ ಸಿಂತಿತು. ನನ್ನ ವಸ್ತುವನ್ನು ಗುರುತಿಸುವುದು ಕಷ್ಟವಾಗಲಿಲ್ಲ. ವೇಣು-ಪದ್ದು-ಇಬ್ಬರೂ ಬಂಡಿ ಕಿಟಿಕಿಯ ಮೂಲಕ ಹೊರಗೆ ತಲೆಹಾಕಿ, ನನ್ನೆಡೆಗೆ ಕೈತೋರಿಸಿ 'ಅಪ್ಪ ಅಪ್ಪ!' ಎಂದು ಜಯಕಾರ ಮಾಡುತ್ತಲೇ ಇದ್ದರು. ಹೆಂಗುಸರ ಗಾಡಿಯಲ್ಲಿ ಕುಳಿತಿದ್ದ ಇತರ ಮಹಿಳೆಯರು ಹೊರಡುವ ಮೊದಲೆ ಅದರ ಬಳಿಯಲ್ಲಿ ಹಾಜರಿಕೊಟ್ಟೆ. ಪದ್ದು ಕೈಗೆ ಹಾರಿದಳು. ವೇಣು ಕೊರಳು ಹಿಡಿದು ನೇತಾಡಿ ಡೊಂಬರಾಟದ ದೇಖಾವೆಯನ್ನು ತೋರಿಸಿದ. ಇಬ್ಬರನ್ನೂ ಇಳಿಸಿದೆ. ಹೆಂಗುಸರು ಒಬ್ಬೊಬ್ಬರಾಗಿಯೇ ಇಳಿಯತೊಡಗಿದರು. ನಾಲ್ಕೈದು ನಿಮಿಷ 'ಹರಿ, ರಾಮ, ಗೋವಿಂದ!' ಎಂದು ನಾನು ಅಚಲನಾಗಿ ನಿಂತಲ್ಲಿಯೆ ನಿಲ್ಲಬೇಕಾಯಿತು 'ಎಲ್ಲರೂ ಹೊರಟು ಹೋದರೂ ಅವಳು ಅಗೋಚರ. "ತಾಯಿಯೆಲ್ಲಿ?" ಎಂದು ಮಕ್ಕಳನ್ನು ಕೇಳಿದೆ. ಅಷ್ಟರಲ್ಲಿ ಅಲ್ಲಿಯೆ ಹಲಗೆಯ ಮೇಲೆ ಮಲಗಿದ್ದಾಕೆ ಮೆಲ್ಲಗೆ ಎದ್ದು ಕುಳಿತು ಆಕಳಿಸಿದಳು. ಒಳಗೆ ನುಗ್ಗಿದೆ ನಾನು. ನನ್ನಾಕೆಯ ಮುಖ ಬಾಡಿತ್ತು. ಸಹಜ; ಒಂದು ಹಗಲು-ಒಂದು ರಾತ್ರಿ 'ಫರಂಗಿ ಮಣೆ' ಯಲ್ಲಿ ಕುಳಿತಳಲ್ಲವೆ? ಮುಖದಲ್ಲಿ ಸರಸಹಾಸವನ್ನು ಹೊಮ್ಮಿಸುತ್ತಾ "ಬಹಳ ಜನ ಇದ್ದರೆಂದು ತೋರುತ್ತದೆ" ಎಂದು ಮಾತಿಗೆ ಪೀಠಿಕೆ ಹಾಕಿದೆ. "ಹೂಂ...." ಎಂದಳಾಕೆ. "ಮಕ್ಕಳು ಇಳಿದಿವೆ; ನೀನೂ ಇಳಿ" ಎಂದುದಕ್ಕೂ "ಹೂಂ...." ಅಲ್ಲದೆ ಇನ್ನೊಂದು ಮಾತಿಲ್ಲ. 'ಶರೀರಕ್ಕೆ ಸುಖವೇ ಮುದ್ದೂ...." ಎಂದು ಪ್ರೇಮಾರ್ದ್ರ ಧ್ವನಿಯಲ್ಲಿ ಪ್ರಶ್ನಿಸಿದೆ. ಹಿಂದಿನದೆ ಹೂಂಕಾರ....ಮಾತಿನಲ್ಲಿಮಿತವ್ಯಯ. ಯಾವುದನ್ನು ನೋಡಬೇಕೆಂದು ತಿಂಗಳುಗಟ್ಟಳೆ ನನ್ನ ಹೃದಯವು ಹಂಬಲಿಸುತ್ತಿತ್ತೊ ಅದು ಕಾಣೆ. ಅವಳು ನನ್ನವಳಾದರೆ ಅವಳ ಮುಖವೂ ನನ್ನದೆ; ಮುಖದಲ್ಲಿ ಅರಳುವ ನಗುವೂ ನನ್ನದೇ ಆಗಬೇಕಿತ್ತಲ್ಲವೆ? ಆಗಲಿಲ್ಲ. ಹೌದು;

ಆಯಾಸವಾಗಿರಬೇಕು. ಪ್ರಯಾಣದ ಕ್ಲೇಶ—ಎಂದು ನನ್ನನ್ನು ನಾನೆ ಸಮಾಧಾನಪಡಿಸಲು ಆಗ ಸಮರ್ಪಕ ಕಾರಣಗಳಿದ್ದುವು.

"ದೇಹಕ್ಕೆ ಸುಖವೇ" ಎಂದು ಮತ್ತೊಮ್ಮೆ ಕೇಳಿದಾಗ ಆಕೆ ತಾನು ತಂದಿದ್ದ ಸಾಮಾನು ಗಂಟು ಮೂಟೆಗಳ ಪಟ್ಟಿಯನ್ನು ಕೊಟ್ಟಳು. "ಹಾಸಿಗೆ ಕಟ್ಟೊಂದು; ನಾಲ್ಕು ಪೆಟ್ಟಿಗೆಗಳು. ಎರಡು ಹಣ್ಣಿನ ಬುಟ್ಟಿ. ಒಂದು ಗ್ರೆಮೊಫೋನ್ ಪೆಟ್ಟಿಗೆ; ಎರಡು ಜೋಡುಗಳು. ತಿರುಗಣಿ ತಂಬಿಗೆ ಒಂದು. ಮಕ್ಕಳ ಬೂಟ್ಸ್ ನಾಲ್ಕು" ಸಾಮಾನುಗಳ ದೇಹಕ್ಕಾದರೂ ಸುಖವೆಂಬುದನ್ನು ತಿಳಿದ ಹಾಗಾಯಿತು. ಮತ್ತೆ ಯಾವ ಶಬ್ದಗಳೂ ಹೊರಡಲಿಲ್ಲ. ನಾನಾಗ ಹೊರಡಿಸುವುದಕ್ಕೆ ಯತ್ನಿಸಲೂ ಇಲ್ಲ. ಸಾಮಾನುಗಳ ಸಂರಕ್ಷಣೆಯ ವಿಷಯದಲ್ಲಿ ನನ್ನನ್ನಾಕೆ ನಂಬುತ್ತಿದ್ದ ಳೆಂಬುದರಲ್ಲಿ ಸಂದೇಹವೇ ಇಲ್ಲ. ಹೊರೆ ಸಾಗಿಸುವ ಕೆಲಸ ನನ್ನ ಪತಿಧರ್ಮಕ್ಕೆ ಸೇರಿದುದೆಂದು ಅವಳಿಗೆ ಖಂಡಿತ ಗೊತ್ತು. ನಾನು ಧರ್ಮವನ್ನುಲ್ಲಂಘಿಸಲಾರೆನೆಂದೂ ಗೊತ್ತು. ನನ್ನ ಪಾಲಿನ ಕೆಲಸವನ್ನು ನಾನೇನೊ ಅತಿ ಶ್ರದ್ಧೆಯಿಂದ ಮಾಡಿದೆ. ಅವಳು ತನ್ನ ಕರ್ತವ್ಯವನ್ನು ಮಾಡಲಿಲ್ಲ; ಒಂದು ನಗುವನ್ನೂ ಬೀರಲಿಲ್ಲ. ಹೂಂಕಾರದ ಹೊರತು ಬೇರಾವ ಮಾತುಗಳನ್ನಾಡುವುದಕ್ಕೂ ಆಕೆಯ ವಾಗಿಂದ್ರಿಯ ಅಸಮರ್ಥವಾದಂತೆ ತೋರುತ್ತಿತ್ತು.

ಹೊರಗೆ ಬಂದಾಗ ಅಲ್ಲೊಂದು ಟಾಕ್ಸಿಯು ನಮ್ಮನ್ನು ಕಾದು ನಿಂತಿತ್ತು. ಅದರ ಬುಡದಲ್ಲಿಯೇ ವಿಮಲೆಯ ಪ್ರತಿಮೆ! ಟಾಕ್ಸಿಯಲ್ಲಿ ಹೋಗುವುದೇ ಸಂದರ್ಭೋಚಿತವೆಂಬುದನ್ನು ಮೂಕ ಭಾಷೆಯಲ್ಲಿ ತಿಳಿಸುವ ಕ್ರಮವದು, ಎಂದು ಗೊತ್ತಾಗಿ ಕೂಡಲೆ ಬಾಡಿಗೆಯನ್ನು ನಿಶ್ಚಯಿಸಿದೆ. ಸಾಮಾನುಗಳೆಲ್ಲ ಒಳಗೆ ಬಿದ್ದುವು. ವಿಮಲೆ ಹಿಂಬದಿಯ ಸೀಟಿನಲ್ಲಿ ಕುಳಿತಳು. ಮಕ್ಕಳನ್ನು ಡ್ರೈವರನ ಬಳಿ ಕುಳ್ಳಿರಿಸಿ, ಅವಳ ಪಕ್ಕದಲ್ಲಿ ಒತ್ತಾಗಿ ಕುಳಿತುಕೊಳ್ಳಬೇಕೆಂಬ ನ್ಯಾಯಸಮ್ಮತವಾದ ಆಸೆ ನನ್ನದು. ಆದರೆ ದುರ್ಭಾಗ್ಯ ಬೆನ್ನುಬಿಟ್ಟರಲ್ಲವೆ ಆಸೆಯ ಪೂರೈಕೆ? ಆ ದಿನ ನನ್ನಾಕೆಗೆ ಮಕ್ಕಳ ಕುರಿತು ಎಂದಿಗಿಂತಲೂ ಹೆಚ್ಚಾದ ಜಾಗರೂಕತೆಯಿತ್ತು. "ವೇಣು! ಪದ್ದು! ನೀವಿಬ್ಬರೂ ಹಿಂದೆ ಕುಳಿತುಕೊಳ್ಳಿ.

ಮುಂದೆ ಕುಳಿತು ಮಂಗಚೇಷ್ಟೆ ಮಾಡಿ ಮೋಟರಿನಿಂದ ಕೆಳಗೆ ಲಾಗ ಹಾಕಬೇಕಾಗಿಲ್ಲ" ಎಂದು ಎರಡೂ ಮಕ್ಕಳನ್ನು ತನ್ನ ಬಳಿಯಲ್ಲಿಯೆ ಇರುಕಿಸಿಕೊಂಡು, ಉಳಿದ ಅಲ್ಪ ಸ್ಥಲದಲ್ಲಿ ತನ್ನ ಕೈಪೆಟ್ಟಿಗೆಯನ್ನು ಭದ್ರವಾಗಿರಿಸಿ, ಎಡಪಾರ್ಶ್ವದಲ್ಲಿ-ಎಂದರೆ ನನ್ನಿಂದ ದೂರವಾಗಿ ಆ ಕಡೆಗೆ ಮುಖ ಮಾಡಿ ನಾನಿರುವ ಭೂಭಾಗವು ಈ ಪ್ರಪಂಚದಲ್ಲಿ ಇಲ್ಲವೇ ಇಲ್ಲವೆಂಬಂತಹ ಅಲಕ್ಷ್ಯಭಾವದಿಂದ, ಅತ್ತ ನೋಡುತ್ತಿದ್ದಳು. ನನಗೆ ಅವಳ ಪಕ್ಕದಲ್ಲಿ ಖಾಲಿ ಜಾಗ (ವೇಕೆನ್ಸಿ) ಇರಲಿಲ್ಲ ಎಂಬುದು ಸ್ಪಷ್ಟ. ಡ್ರೈವರನಾದರೂ ಎಡಪಕ್ಕದಲ್ಲಿ ಸ್ಥಳಕೊಟ್ಟ.

ಬೇಗನೆ ಮನೆಯಲ್ಲಿ ತಲಪಿದೆವೆನ್ನಿ. ಚಂದ್ರದರ್ಶನಕ್ಕಾಗಿ ತವಕಿಸುವ ಚಕೋರನಂತೆ ನನ್ನ ಮನಸ್ಸು ಆಕೆಯ ಮುಖಮಂಡಲ ಪ್ರಸನ್ನತೆಯನ್ನು ನೋಡಲು ಕುತೂಹಲಿಸುತ್ತಿತ್ತು. ಈ ಹಳೆಯ ಉಪಮೆಯನ್ನು ಇಲ್ಲಿಯೇ ನಿಲ್ಲಿಸಿಬಿಡೋಣ. ಚಂದ್ರ ಚಕೋರಗಳಿಗೆ, ದಂಪತಿಗಳಾದ ನಮ್ಮೊಳಗೆ ಇದ್ದಷ್ಟು ಮನಃಕಷಾಯವಿರಲು ಕಾರಣವಿಲ್ಲ. ಮನೆಗೆ ಮುಟ್ಟಿದ ಮೇಲೆ ಒಂದು ನಿಮಿಷ ಬಿಡುವಿರಲಿಲ್ಲ. ಸಾಮಾನುಗಳನ್ನು ಆಯಾ ಸ್ಥಳದಲ್ಲಿಡುವುದು; ಮಕ್ಕಳ ಸಲಿಗೆ ತಂಟೆಗಳನ್ನು ಸಹಿಸುವುದು; ಲಲ್ಲೈಸುವುದು; ಮುದ್ದಿಡುವುದು-ಇದರಲ್ಲಿಯೇ ಹೋಯಿತು ಎಲ್ಲ ಸಮಯ. ಅವಳ ತುಟಿಗಳೆಡೆಯಿಂದ ಮಾತು ಹೊರಡುವುದೇ? ಎಂಬುದನ್ನು ಪರೀಕ್ಷಿಸುವುದಕ್ಕೆ ಅವಕಾಶವಿರಲಿಲ್ಲ. ಮೂಕತೆಗೆ ಕಾರಣವೇನೆಂದು ತಿಳಿಯಲೂ ಇಲ್ಲ. "ಮೂಕಂಕರೋತಿ ವಾಚಾಲಂ" ಎಂದ ಹಾಗಿತ್ತು ಅವಳ ಸ್ಥಿತಿ. ಕಾರಣವನ್ನು ಹೇಳಬೇಕು ಆ ಪರಮಾನಂದ ಮಾಧವನು ನನ್ನಂತಹ ಹುಲು ಮನುಷ್ಯರಿಗೇನು ಗೊತ್ತು? ಕಾರಣ ತಿಳಿಯದೆ ನನಗೆ ಸಮಾಧಾನವಿಲ್ಲ. ಎರಡುಮೂರು ಬಾರಿ ವಿಫಲ ಪ್ರಯತ್ನನಾದ ಬಳಿಕ ಮತ್ತೂ ಆಗ್ರಹ ಮಾಡಲು ಧೈರ್ಯವಿಲ್ಲ. ಕೊನೆಗೆ ಸ್ನಾನಕ್ಕಾಗಿ ಹೋಗುತ್ತಿದ್ದ ದೇವಿಯ ಹಿಂದೆಯೇ ಹೋಗಿ "ಮದ್ರಾಸಿನ ಸಮಾಚಾರವೇನು?" ಎಂದು ಕೇಳಿಯೇ ಬಿಟ್ಟೆ. "ಒಂದು ಚೂರು ಸೋಪಿಲ್ಲ....ಒಂದನೆಯ ನಂಬ್ರದ ಗೋದ್ರಿಜನ್ನು ಉಪಯೋಗಿಸಿ ಅಭ್ಯಾಸ...." ಇದರಲ್ಲಿ ಸೋಪನ್ನು ಯಾರು

ಯಾವಾಗ ತರಬೇಕೆಂದಿಲ್ಲ. ನಾಟಕದ ಆಕಾಶ ಭಾಷಿತದಂತೆ ಯಾರ ನ್ನೋ ಉದ್ದೇಶಿಸಿ ಆಡಿದಂತಿತ್ತು ವಾಕ್ಯದ ಸರಣಿ....ನನ್ನ ಕಡೆಗೆ ಮುಖ ತಿರುಗಿಸುವಷ್ಟು ಕೃಪೆಮಾಡದೆ ಗೋಡೆಯನ್ನು ನೋಡಿ ಆಡಿದಳು. ವಾಕ್ಯವು ಕೂಡ ಅಪೂರ್ಣವಾಗಿತ್ತು. ಅಸಂಪೂರ್ಣ ವಾಕ್ಯದ ಸಂಪೂ ರ್ಣಾರ್ಥವನ್ನು ಮಾಡಿಕೊಳ್ಳಲಾರದ ಹೆಡ್ಡ ನಾನಲ್ಲ; ಎಂದು ತಿಳಿಯದ ಹೆಡ್ಡಳು ಅವಳೂ ಅಲ್ಲ; ಆದುದರಿಂದ ಈ ಆಶೆ ಮೂಕ ನಾಟಕ ತೊಡ ಕಿಲ್ಲದೆ ನಡೆಯಿತು. ಕೂಡಲೆ ನೆನೆದೆ ಅಂಗಳಕ್ಕೆ. "ಎಕ್ಸ್‌ಪ್ರೆಸ್" ಗಾಡಿಯ ವೇಗದಿಂದ ಅಂಗಡಿಗೆ ಓಡಿದೆ. "ರಾಮನಾಜ್ಞೆಯ ಹನುಮ ನಾಂತು ನಿಜಶಿರದೆ" ಎಂಬ ಬಾಲ್ಯದಲ್ಲಿ ಓದಿ ಇನ್ನೂ ಮರೆಯದ ಪದ್ಯ ಕಿವಿಯಲ್ಲಿಯೇ ಕೇಳಿಸುವಂತಿತ್ತು. ಆ ದಿನ ಬೆಳಗ್ಗೆ ಎದ್ದೊಡನೆ ಯಾವ ಕರಿಬೆಕ್ಕಿನ ಮುಖ ನೋಡಿದ್ದೇನೆ—ಅಲ್ಲದಿದ್ದರೆ ಇಷ್ಟೆಲ್ಲ ವಿಘ್ನಗಳೆ.... ಆಕೆ ಮದ್ರಾಸಿನಿಂದ ಗೋದ್ರೆಜ್ ಸೋಪಿನ ವಾರ್ತೆಯೊಂದನ್ನೆ ತರ ಬೇಕೆ?

ಸೋಪು ಬಂತು; ಬಂದಾಗ ವಿಮಲೆ ಅಡಿಗೆ ಕೋಣೆಯೊಳಗೆ. ಸೌಟನ್ನು ಎಂದೂ ಹಿಡಿಯದ ಕೈ ಇಂದು ಪಾಕಶಾಸ್ತ್ರದ ಮೇಲೆ ಅನು ಗ್ರಹ ಮಾಡಿತ್ತು—ನನ್ನ ಮೇಲೆ ಹಟದಿಂದ ಎಂಬಂತೆ ಒಗ್ಗರಣೆಗೆ ತೊಡ ಗಿತ್ತು; ನಿರುದ್ಯೋಗವಾಗಿದ್ದರೆ ನನ್ನೊಡನೆ ಮಾತಾಡಬೇಕಾಗುತ್ತದೆ ಎಂಬ ಕಾರಣದಿಂದಲೆ ಆಕೆ ಒಂದಲ್ಲವಾದರೆ ಇನ್ನೊಂದು ಕೆಲಸಕ್ಕೆ ಕೈಹಾಕುತ್ತಿದ್ದಳೆಂಬುದು ಖಂಡಿತ. ಈ ರಾತ್ರಿ ಉಪವಾಸ ಬಿದ್ದಿದ್ದರೂ ನನಗೆ ವ್ಯಸನವಾಗುತ್ತಿರಲಿಲ್ಲ....ಆಕೆಯ ಮುಖದಲ್ಲಿ ಒಂದು ನಗು ಮೂಡುತ್ತಿದ್ದರೆ!

ನನ್ನ ಉಪಾಯಗಳೆಲ್ಲ ಮುಗಿದುವು. ಬತ್ತಳಿಕೆಯಲ್ಲಿದ್ದ ಬಾಣ ಗಳೆಲ್ಲ ಖರ್ಚಾದುವು. ಜಯಪ್ರಾಪ್ತಿಯ ಲಕ್ಷಣಗಳಿಲ್ಲ. ಯುದ್ಧ ಪರಿಸಮಾಪ್ತಿ ಹೊಂದುವ ಚಿಹ್ನೆಯೂ ಇಲ್ಲ. ಮಾಡುವುದೇನು? ಆದಂ ತಾಗಲಿ ಎಂದು ನಾನೂ ಮೌನವ್ರತಧಾರಿಯಾದೆ. ಮೌನವನ್ನು ಅಭ್ಯಾ ಸಿಸಬೇಕಾಯಿತು. ಮನಸ್ಸನ್ನು ನಿಗ್ರಹಿಸಬೇಕಾಯಿತು. ಕಣ್ಣಿನ ಓಟ ವನ್ನು ತಡೆಯಬೇಕಾಯಿತು. 'ಸಾಕು'—'ಬೇಕು' ಎಂಬ ಎರಡೇ ಪದ

ಗಳಿಂದ ಊಟವನ್ನು ಕೊನೆಗೊಳಿಸಬೇಕಾಯಿತು. ನಿರ್ಲಕ್ಷ್ಯಭಾವದ ಮುದ್ರೆಯನ್ನು ಮುಖಕ್ಕೆ ಹೊಡೆಯಬೇಕಾಯಿತು. ಇಷ್ಟೆಲ್ಲ ಮಾಡಿ ಮಕ್ಕಳನ್ನು ಜೊತೆಯಲ್ಲಿಯೇ ಕರೆದುಕೊಂಡು ಆ ರಾತ್ರಿ ನನ್ನ ಕೋಣೆ ಸೇರಿದೆ.

ಸ್ವಲ್ಪ ಸಮಯಾನಂತರ ಆ ಮರಿಗಳು ಅಲ್ಲೆ ಇದ್ದ ಹಾಸಿಗೆ ಯಲ್ಲಿ ಬಿದ್ದು ಗೊರಕೆ ಹೊಡೆಯುವುದಕ್ಕೆ ತೊಡಗಿದುವು. ಮೇಜಿನ ಮೇಲೆ ದೀಪವುರಿಯುತ್ತಿತ್ತು. "ವಿಮಲೆ ಇಲ್ಲದಿದ್ದರೇನು? ನಾನಿರು ವೆನು ನಿನ್ನ ಸಹಾಯಕ್ಕೆ!" ಎಂದು ಅಭಯ ಕೊಡುವಂತೆ ನನ್ನಡೆಗೆ ಅದರ ನಾಲಗೆ ಹಾಯುವಂತೆ ತೋರುತ್ತಿತ್ತು. ಸಾಲದುದಕ್ಕೆ ಮೇಜಿನ ಮೇಲೊಂದು ಪುಸ್ತಕವೂ ಇತ್ತು. ಅದನ್ನು ಕೈಯಲ್ಲಿ ಹಿಡಿದೆ. "ಅಹಿಂ ಸಾಯುದ್ಧಾರಂಭವಾಗುತ್ತಿದೆ. ಇನ್ನು ಮುಂದೆ ಸರ್ವಥಾ ಮಾತನಾಡ ಲಾರೆ"—ಎಂದು ಡಂಗುರ ಹೊಡೆವಂತೆ ನಿಟ್ಟುಸಿರನ್ನು ಕರೆದೆ. ಪುಟಗಳ ಮೇಲೆ ಪುಟಗಳನ್ನು ಮಗುಚಿದೆ. ಸುತ್ತಲೂ ಶಾಂತಿ; ಸುತ್ತ ಲೂ ಸಮಾಧಾನ. ಗೋಡೆಯ ಗಂಟೆ ಹೊಡೆಯುತ್ತಲೇ ಇತ್ತು. ಮಕ್ಕಳ ಕನವರಿಕೆಯ ಕೂಗು ನಡುನಡುವೆ ಕೇಳುತ್ತಲೇ ಇತ್ತು. ದೂರ ದಲ್ಲಿ ನಾಯಿಗಳು ಮೇಳಕೂಡಿ ಬೊಗಳುತ್ತಲೇ ಇದ್ದುವು. ವಿಮಲೆ ಜೀವಂತಳಾಗಿರುವಳೋ ಇಲ್ಲವೊ ನಾನರಿಯೆ. ಮದ್ರಾಸಿನಿಂದ ಬಂದ ವಳನ್ನು ಮಂಗಳೂರಲ್ಲಿ ಇಳಿಸಿದೆ; ಮನೆಗೆ ತಲಪಿಸಿದೆ. ಮತ್ತೆಲ್ಲಿ ತಲೆಗರೆದಳೋ ನಾನರಿಯೆನೆಂಬಂತಹ ಅನವಧಾನತೆ. ಕಾದಂಬರೀ ಗ್ರಂಥವಾಯಿತು; ನಾನಾಯಿತು!

ಅಷ್ಟರಲ್ಲಿ ಬಾಗಿಲ ಬಳಿಯಲ್ಲಿ ಸದ್ದಾಯಿತು.

ನನಗೆ ಕಾದಂಬರಿಯೋದುವ ಶ್ರದ್ಧೆಯೂ ಹೆಚ್ಚಿತು. ಬಾಗಿಲ ಕಡೆಗೆ ನೇರಾಗಿ ಬೆನ್ನು ತಿರುಗಿಸಿ ತದೇಕಮಾನಸನಾಗಿ ಓದತೊಡಗಿದೆ.

ಆಗ ಒಂದು ದೀರ್ಘಶ್ವಾಸ ಕೇಳಿಸಿತು.

ಮೇಜಿನ ಮೇಲೆ ಎರಡು ಮುಂಗೈಗಳನ್ನೂ ಊರಿ ಓದುಗಾರಿಕೆ ಯಲ್ಲಿ ಬಾಹ್ಯ ಪ್ರಪಂಚವನ್ನು ಮರೆತು ಬಿಡುತ್ತೇನೆ ಎಂದು ಸಂಕಲ್ಪಸಿದೆ.

ಐದು ನಿಮಿಷ ಶಾಂತಿ. ಮನೆಯಲ್ಲಿ ಜೀವನದ ಸುಳಿವಿಲ್ಲ-ಎನ್ನು ವಂತಹ ನಿಶ್ಶಬ್ದತೆ!

ಕಾದಂಬರಿಯ ಕೊನೆಯ ಪುಟಕ್ಕೆ ಬಂದೆ. ಮಲಗಬೇಕೆಂಬ ಯೋಚನೆ ಬಂತು. ದೀಪವನ್ನು ಚಿಕ್ಕದು ಮಾಡುತ್ತಿದೆ.

'ಹೂಂ........' ಎಂದು ಹೂಂಕಾರ ......ಭೂತವಲ್ಲ........ಪ್ರೇತವಲ್ಲ........ರೈಲ್ವೆ ಸ್ಟೇಷನಿನಲ್ಲಿ ಕೇಳಿಸಿದ ಹೂಂಕಾರವೇ ಅದು. ಕಣ್ಣನ್ನೊರಸಿಕೊಂಡು ಹಾಸಿಗೆಗೆ ಉರುಳಬೇಕೆಂದಿದ್ದೆ.

ದೂರದ ಹೂಂಕಾರ ಹತ್ತಿರಕ್ಕೆ ಬಂತು; ಕುರ್ಚಿಯ ಹಿಂದೆಯೇ ಕೇಳಿಸಿತು.

ನನ್ನನ್ನು ಇದು ವರೆಗೆ ನೋಯಿಸಿ ಪೀಡಿಸಿದ ಹೂಂಕಾರಕ್ಕೆ ಸದಾ ಹೀಗೆಯೇ ಆಗ ಬೇಕೆಂಬ ನಿಷ್ಕರುಣೆಯಿಂದ ದೃಷ್ಟಿಯನ್ನತ್ತ ಸುಳಿಸದೆ ಧೈರ್ಯದಿಂದ ಹಾಸಿಗೆ ಹಿಡಿಯುತ್ತಿದ್ದೆ.

ಆಗ 'ಹೂಂಕಾರ'ಕ್ಕೆ ಕೈಯ್ಯೂ ಇದ್ದಂತೆ ತೋರಿತು. ಅದು ನನ್ನ ಕೈಹಿಡಿದು ಕೊಂಡಿತು.

ಕೈಯ್ಯನ್ನು ಕೊಡಹಿ ಎಳೆದು ಬಿಡೋಣವೆ? ಸರ್ವಥಾ ನ್ಯಾಯವಲ್ಲ. ತಂದೆ, ತಾಯಿ, ಅತ್ತೆ, ಮಾವ ಅಗ್ನಿ ಸಾಕ್ಷಿಯಾಗಿ ಕೂಡಿಸಿದ ಕೈಗಳನ್ನು ಅಗಲಿಸುವುದೆಂದರೇನು? ಹೀಗಿದ್ದರೂ ನನಗೆ ಅವಳ ವಿಷಯದಲ್ಲಿ ಅಲಕ್ಷ್ಯವಿದೆಯೆಂಬುದನ್ನು ತೋರಿಸುವುದಕ್ಕಾಗಿ ನನ್ನದಾಗಿದ್ದ ಕೈಯನ್ನು ಸ್ವಲ್ಪ ಈಚೆಗೆ ಎಳೆದೆ.

ಕೊನೆಗೆ ಗದ್ಗದ ಕಂಠದಿಂದ "ನನ್ನಲ್ಲಿ ಮಾತಾಡ ಬಾರದೇ?" ಎಂದು ಅಂಗಲಾಚಿ ಬೇಡಿದುದು ಮಾತ್ರವಲ್ಲ ಗೊಳ್ಳೆಂದು ಅಳುವುದಕ್ಕೆ ಪ್ರಾರಂಭಿಸಿದಳು.

ಮಾತಾಡದೆ ಇದ್ದಾತ ನಾನಲ್ಲ. ಸಕಲ ಲೋಕಗಳಿಗೂ ಈ ವಿಷಯ ತಿಳಿದೇ ಇದೆ ಆದರೂ ಆಕೆಯ "ಮಾತಾಡ ಬಾರದೇನೆ........" ಎಂಬ ಹಾಡು.

ನಾನು ಮೂಕ ಪ್ರಾಣಿಯಂತಾದೆ.

"ನನ್ನಲ್ಲಿ ಸಿಟ್ಟೆ?" ಎಂದು ಕೇಳಿದಳು.

ಅನ್ಯಾಯ! ಕೇವಲ ಅನ್ಯಾಯ....ಸಿಟ್ಟನ್ನು ಮರೆತಿದ್ದು ಹೋಟೆಯ ಎತ್ತಿನಂತೆ ನೊಗಹೊತ್ತು ಹೆಗಲನ್ನು ಸವೆಯಿಸಿಕೊಂಡಿಪ್ಪ ನನಗೆ ಮಾತ್ರ

ನ ಮುಷ್ಕರ ಕ್ರಮವನ್ನು ಕಲಿಸಿದುದಾದರೂ ಅವಳೆ....ಅವಳ ಪಾಠವನ್ನೆ ನಾನು ಕಲಿತರೂ ಅಪರಾಧ ನನ್ನದು! ಆಗ ನಾಲಗೆಯನ್ನು ಕಚ್ಚಿ ತಿಂದ ವಳು ಅವಳು; ಈಗ ಹೀಗೇಕೆ? ಎಂದು ಕೇಳುವವಳೂ ಅವಳೆ........ ಅರ್ಥಾತ್........ಸ್ತ್ರೀಯರು ತಪ್ಪು ಮಾಡಲಾರರು........ಅಪರಾಧ ಮಾಡುವ ದುರ್ಬುದ್ಧಿ ಪುರುಷರಿಗೆ!

ಅವಳು ಗಹಗಹ........ಎಂದು ಬಿಕ್ಕಿ ಮಾತ್ರವಲ್ಲ....ಊರೆಲ್ಲ ದುಃಖವನ್ನು ಚೆಲ್ಲಿ, ರೋದಿಸುವುದಕ್ಕೆ ತೊಡಗಿದಳು. ಅದೂ ಒಂದು ಗಂಡಾಂತರವೆಂದು ನನಗೆನಿಸಿತು. ಇವಳ ರೋದನ ತಾರಸ್ಥಾಯಿಗೆ ಏರಿದರೆ, ಏನೆಲ್ಲ ಅವಸ್ಥೆಯೋ! ಬೀದಿಯಲ್ಲಿ ಹೋಗುತ್ತಿರಬಹುದಾದ ಪಿಶಾಚಗಳು ಕೂಡ ಈ ಮನೆಯ ಸಂಗತಿಯೇನೆಂದು ಇಣಿಕಿ ನೋಡಿ ದರೆ? ಮನವು ತತ್ತರಿಸಿತು. "ಕುಳಿತುಕೊ" ಎಂದು ಕುರ್ಚಿಯನ್ನು ತೋರಿಸಿದೆ.

"ಸಿಟ್ಟಿಲ್ಲದಿದ್ದರೆ ಕುಳಿತು ಕೊಳ್ಳುತ್ತೇನೆ........" ಎಂದವಳ ಉತ್ತರ ಬಂತು. ನನ್ನ ಪಕ್ಕದಲ್ಲಿ ಕುಳಿತು ಕೊಳ್ಳಲು ಇಷ್ಟಪಡದೆ ನನ್ನನ್ನು ರೇಗಿ ಸಿದವಳು ಅವಳೆ ಎಂದು ತಿಳಿಯುವಷ್ಟು ವಿವೇಕವನ್ನಾದರೂ ದೇವರು ಅವಳಿಗೆ ಕೊಡಬಾರದಾಗಿತ್ತೆ? ಪರಿಸ್ಥಿತಿ ಈ ಹದಕ್ಕೆ ಬಂದ ಮೇಲೆ ದೇವರಲ್ಲಿ ಕೇಳುವುದಕ್ಕೂ ಇಲ್ಲ; ಪಡೆಯುವುದಕ್ಕೂ ಇಲ್ಲ. ನಮ್ಮ ಲೆಕ್ಕಾಚಾರಗಳನ್ನು ನಾವೆ ಒಪ್ಪಿಸಿ ಸರಿ ಹೊಂದಿಸಬೇಕಾಯಿತು. ಈ ತಿಳಿವಳಿಕೆ ನನ್ನಲ್ಲಿ ಮಾತ್ರವಲ್ಲ; ಅವಳಲ್ಲಿಯೂ ಆಗಿರಬೇಕು!

ಇನ್ನು ಹೇಳುವುದಕ್ಕೇನಿದೆ? ಕಾದಂಬರೀ ಗ್ರಂಥ ಮೇಜಿನ ಮೇಲೆ ಯೆ. ವೈರಾಗ್ಯ ಬುದ್ಧಿ ಆಕಾಶದಲ್ಲಿಯೆ. ನಿದ್ರೆ ಕಣ್ಣಿನಿಂದೆದ್ದು ಮೂಗಿನ ಮೇಲೇರಿ ಕುಳಿತಂತಿದೆ. ವಿಮಲೆ ನನ್ನ ಮುಂಗಡೆಯಲ್ಲೆ; ನಾನು ಅವಳ ಸನ್ನಿಧಿಯಲ್ಲಿಯೆ. ಎಷ್ಟೆಂದರೂ ನನ್ನವಳು. ಹಟಮಾರಿಯಾದರೂ ನನ್ನವಳು. ಹಟವನ್ನು ಬಿಟ್ಟು ಅವಳನ್ನು ಮಾತ್ರ ಸ್ವೀಕರಿಸುವೆನೆಂದರೆ ಆಗುವುದೇ? ದುರುದುಂಬಿಯಾದರೂ ವಿಮಲೆ ನನ್ನವಳು. ಒಮ್ಮೊಮ್ಮೆ ಸಿಟ್ಟು ಯಾರಿಗೂ ಬರುತ್ತದೆ, ಬರಲೇ ಬೇಕು. ಬಾರದಿದ್ದರೆ ಜೀವನ ದಲ್ಲಿ ವೈವಿಧ್ಯವುಂಟೇ? ಮೂರು ನಾಲ್ಕು ತಿಂಗಳು ಅಗಲಿದ್ದಳು.

ಅಯ್ಯೋ! ಮೃತ್ಯುರಾಜ್ಯದ ಸೀಮೆಯ ವರೆಗೆ ಪಯಣ ಮಾಡಿ ಹಿಂದಿರು ಗಿದ್ದಳು. ನನ್ನ ಪುಣ್ಯದಲ್ಲಿನ್ನೂ ಬಾಕಿಯಿದ್ದುದರಿಂದ ಅಲ್ಲಿಂದಲೆ ಹಿಂತಿರುಗಿದಳು. ಹೀಗಾಗದಿರುತ್ತಿದ್ದರೆ? ಎಂದು ಭಾವಿಸುವಾಗ ಆಕೆಯ ಸಿಟ್ಟಿನಲ್ಲಿ ಮಹಾಪರಾಧವೇನೂ ಇಲ್ಲವೆಂದು ತೋರಿತು; ಅಲ್ಲ ಸಿಟ್ಟು ಮಾಡುವ ಹಕ್ಕು ಅವಳಿಗೆ ಇದೆ—ಎಂದು ಖಚಿತವಾಯಿತು. ಆಗ ತಪ್ಪೆಲ್ಲ ನನ್ನದೇ ಆಗಿ ಕಣ್ಣೀರು ಸುರಿಸುವ ಕೆಲಸವೂ ನನಗೆ ಬಂತು!

ಮತ್ತೆ ಹೆಚ್ಚಿನ ಉಪಚಾರ ಕ್ರಿಯೆಗಳು ನಡೆಯಬೇಕಾಗಿರಲಿಲ್ಲ. ನಾವು ಅಪೇಕ್ಷಿಸಲೂ ಇಲ್ಲ. ಒಂದೆರಡೇ ಮಾತುಗಳಲ್ಲಿ ಮದ್ರಾಸಿನ ಬಂಧುಗಳ ಕ್ಷೇಮ ಸಮಾಚಾರವನ್ನು (ಈ ಬಾರಿ ಗೋಡ್ರಿಜ್ ಸೋಪಿನ ಸುದ್ದಿಯೇ ಇರಲಿಲ್ಲ.) ಕೇಳಿ ಆಯಿತು; ಅವಳು ಹೇಳಿಯೂ ಆಯಿತು. ಅವಳಿಗೂ ಧೈರ್ಯ ಬಂತು; ನನಗೂ ಬಂತು. ಮಾತು ಕತೆ ನಡೆಯಿತು.

"ನಾನು ಮದ್ರಾಸಿಗೆ ಹೋದಂದಿನಿಂದ ನನ್ನನ್ನು ಮರೆತಿದ್ದಿರಲ್ಲವೇ?"

"ಅಯ್ಯೋ ನಿನ್ನನ್ನು ಮರೆಯುವುದೇ? ಮರೆಯಬೇಕೆಂದರೆ ಸಾಧ್ಯವೇ?"

"ನನಗೆ ಹಾಗೆಯೇ ತೋರುತ್ತದೆ"

"ವಾರಕ್ಕೆ ಮೂರು ಪತ್ರ ಬರೆಯುವ ಗಡಿಬಿಡಿಯಲ್ಲಿ ನಿನ್ನನ್ನು ಮರೆಯುವುದಕ್ಕೆ ಅವಕಾಶವಿತ್ತೆ?"

"ನಾಲ್ಕಾರು ಒಣ ಮಾತುಗಳನ್ನು ಪತ್ರಗಳಲ್ಲಿ ತುಂಬಿಸಿದಿರಿ; ಹೃದಯ ಅಲ್ಲಿರಲಿಲ್ಲ"

"ನನಗಿರುವ ಹೃದಯ ಒಂದೇ; ಅದನ್ನು ಮದ್ರಾಸಿಗೇ ಕಳುಹಿಸಿದ್ದೆ"

"ಮದ್ರಾಸಿಗೆ........ಇರಬಹುದು; ಆದರೆ ನನ್ನ ಬಳಿಗಲ್ಲ"

"ಅಯ್ಯೋ ಮುದ್ದು! ನನ್ನನ್ನು ಜೀವ ಜೀವ ಕೊಲ್ಲಬೇಕೆ? ಕೊನೆಯ ಪತ್ರದಲ್ಲಿ ನನಗಿರುವ ಒಂದೇ ಒಂದು ಹೃದಯದ ಅವಶಿಷ್ಟಾಂಶಗಳನ್ನು ಒಂದೇ ಗಂಟಿನಿಂದ ಪಾರ್ಸೆಲ್ ಮಾಡಿ ಕಳುಹಿಸಿರಲಿಲ್ಲವೆ? ನಿನಗದು ದೊರೆಯಲಿಲ್ಲವೇ?"

“ಇದು ಸುಳ್ಳು!”

ಏನವಸ್ಥೆಯಿದು! ಸುಳ್ಳು ಹೇಳುವವನು ನಾನು; ಬೈಸಿಕೊಳ್ಳು ವವನು ನಾನು; ಸಿಟ್ಟು ಮಾಡಬಾರದವನೂ ನಾನು!”

“ನಾನು ಖಂಡಿತವಾಗಿ ಹೇಳುತ್ತೇನೆ. ಮಳೆಗಾಲದ ಬಿಸಿಲನ್ನು ನಂಬಬಾರದು; ಗಂಡನ ನಗುವನ್ನು ನಂಬಬಾರದು.”

ಎಂಥ ರಮ್ಯೋಪಮೆ! ವಿಮಲೆಯ ಸ್ವಭಾವದಲ್ಲಿ ಸ್ವಲ್ಪ ಹಟ ಮಾರಿತನವಿದೆಯೆಂಬುದನ್ನು ಲೋಕವೇ ಒಪ್ಪಿಕೊಳ್ಳಬೇಕು. ಆದರೂ ನಾನವಳನ್ನು ಹಾರ್ದಿಕವಾಗಿ ಪ್ರೀತಿಸುವುದಕ್ಕೆ ಕಾರಣ-ಅವಳಲ್ಲಿರುವ ಕವಿತಾಶಕ್ತಿ....ಇತರ ಸಂದರ್ಭಗಳಲ್ಲಿ ಅಲ್ಲದಿದ್ದರೂ ನನ್ನ ಮೇಲೆಯ ಅಭಿಯೋಗವನ್ನು ಹೂಡುವಾಗ ಆಕೆಯ ಶೈಲಿ ಕಾವ್ಯಮಯವಾಗು ತ್ತಿತ್ತು. ಒಳ್ಳೊಳ್ಳೆಯ ಅಲಂಕಾರಗಳು ಸದಾ ಚಿಮ್ಮಿ ಬರುತ್ತಿದ್ದುವು. ನನಗೆ ಸ್ವಲ್ಪವಾದರೂ ಲೇಖನ ಸಾಮರ್ಥ್ಯವಿರುತ್ತಿದ್ದರೆ, ಆಕೆಯ ಸರಸಾಲಂಕಾರ ವಾಗ್ಜಾಲಗಳನ್ನು ಸೇರಿಸಿ ನನ್ನ ಸಂಪಾದಕತ್ವದಲ್ಲಿ ಒಂದು ಕಾವ್ಯಮಾಲೆಯನ್ನೆ ರಚಿಸುತ್ತಿದ್ದೆ.

“ಪ್ರಮಾಣ ಮಾಡುತ್ತೇನೆ ಮುದ್ದು; ನೀನು ತಪ್ಪಾಗಿ ತಿಳಿದಿರುವೆ” ಎಂದು ನಿವೇದನ ಮಾಡುತ್ತಿದ್ದ ನನ್ನ ಮಾತುಗಳನ್ನಾಕೆ ಕಿವಿಯಲ್ಲಿ ಹಾಕಿಕೊಳ್ಳಲೇ ಇಲ್ಲ ಮಡಿಲಲ್ಲೆ ಸುತ್ತಿಕೊಂಡಿದ್ದ ಪತ್ರವೊಂದನ್ನು ತೆಗೆದು, ನನ್ನ ಕಣ್ಣಮುಂದೆಯೇ ಮೇಜಿನ ಮೇಲೆ ಒಗೆದಳು. ತನಗೆ ಜಯಪ್ರಾಪ್ತಿಯಾದ ಹೆಮ್ಮೆಯಿಂದ ನನ್ನ ಮುಖವನ್ನೆ ನೋಡಿ ಸಡಗರಿಸಿ ದಳು.

ಆಶ್ಚರ್ಯದಿಂದ ಪತ್ರವನ್ನೋದಿದೆ. ಮೈಯಿಂದ ಧಾರೆಧಾರೆಯಾಗಿ ಬೆವರು ಸುರಿಯಿತು. ನನ್ನ ಕಣ್ಣು ಒಂದೊಂದೇ ಪದವನ್ನು ದಾಟಿ ದಾಟಿ ಮುನ್ನಡೆದಂತೆ ಆಕೆ ಹೆಚ್ಚು ಹೆಚ್ಚಾಗಿ ಬಿಕ್ಕಿ ಬಿಕ್ಕಿ ಅಳುವುದಕ್ಕೆ ಪ್ರಾರಂ ಭಿಸಿದಳು. ಖಂಡಿತವಾಗಿ ನನ್ನ ಅಪರಾಧ ತುಬ್ಬಾಯಿತು; ತನ್ನ ಅಳು ವಿಗೆ ಸಹಜ ಕಾರಣವಿದೆ; ಎಂಬ ಮನೋನಿರ್ಧಾರದಿಂದ ಬಿಕ್ಕುತ್ತಿದ್ದ ಅಳುವನ್ನು ರಾಗಾಲಾಪಯುಕ್ತವಾಗಿ ವಿಸ್ತರಿಸಿದಳು. ಆದರೆ ಪತ್ರವ ನ್ನೋದಿ ಮುಗಿಸಿದಾಗ ನನ್ನ ಹೃದಯದಲ್ಲಾದ ಪರಿಣಾಮವನ್ನು

ಏನೆಂದು ಬಣ್ಣಿಸಲಿ? ನನ್ನ ಮುಗ್ಧಪ್ರೇಮ ಸಾಕ್ಷಿಯಾದ ಆ ಪತ್ರವ ನ್ನೋದುವಾಗ ಮನಸ್ಸೆ ಅರಳಿತು. ಮುಖದಲ್ಲಿ ನಗುಮೂಡಿತು. ಓದುವ ಪ್ರಾರಂಭದಲ್ಲಿ ಮೈಯನ್ನು ಒದ್ದೆ ಮಾಡಿದ್ದ ಬೆವರು ಈಗ ತನ್ನಿಂದ ತಾನೆ ಆರಿ ಮಾಯವಾಯಿತು. ಏನೋ ಪ್ರಣಯ ಕಲಹಕ್ಕೆ ತೊಡಗಿದ್ದಾಳೆ; ಯುದ್ಧಪೂರ್ವದಲ್ಲಿ ಮುಂಗಾವಲಕದನ(Patrol activities)ಆಗು ವುದುಂಟು. ಅದಕ್ಕೀಗ ಉದ್ಯೋಗಿಸಿದ್ದಾಳೆ; ಎಂಬುದು ಖಚಿತವಾ ಯಿತು. ಮದ್ರಾಸಿನಿಂದ ಹೊಸ ಪ್ರೇಮಕಲಹವನ್ನೂ ತಂದಿದ್ದಾಳೆ ನನ್ನಾಕೆ ಎಂದು ಗಹಗಹಿಸಿ ನಕ್ಕೆ....

ನಾನೇನೋ ನಕ್ಕೆ . . ಅವಳೊ? ಗಾಯಗೊಂಡ ಚಿರತೆಯಂತೆ ಚೀರುವುದಕ್ಕೆ ಆರಂಭಿಸಿದಳು. ಏನುಮಾಡಬೇಕೆಂದು ತಿಳಿಯದೆ, ಇದೂ ಒಂದು ರೋಗವಾಗಿರಬಹುದೆಂಬ ಭೀತಿಯಿಂದ ಡಾಕ್ಟರರನ್ನು ಕರೆಯೋಣ ಎಂದು ಯೋಚಿಸುತ್ತಿದ್ದೆ.

ಅಷ್ಟರಲ್ಲಿ ಇನ್ನೊಂದು ವಜ್ರಾಯುಧ ನನ್ನ ಮೇಲೆ. ಈ ವಜ್ರಾ ಯುಧ ಖಾಲಿ ಲಕೋಟೆಯ ಮೂಲಕ ಬೀಳುವುದಾಯಿತು. ಮೇಜಿನ ಮೇಲೆ ಒಗೆದಳು ಅದನ್ನು! "ಓದಿರಿ ಇದನ್ನು! ನಾಚಿಕೆಯಿಲ್ಲದವರು" ಎಂದು ಗುಡುಗುಡಿಸಿದಳು.

ಲಕ್ಕೋಟೆ! ಅದರ ಮೇಲೆ ನನ್ನ ಹಸ್ತಾಕ್ಷರ! ರಾಜಮ್ಮನ ವಿಳಾಸ ಏನದ್ಭುತ; ಏನು ಮಾಯೆ! ಪ್ರಮಾದ ಮೋಸ!

ನನಗೆ ನಖಶಿಖಾಂತವಾಗಿ ಆಶ್ಚರ್ಯ! ರೋಮರಂಧ್ರಗಳಲ್ಲಿ ಆಶ್ಚರ್ಯ! ದೇಹದ ಪ್ರತಿಯೊಂದು ಅಣುವೂ ಆಶ್ಚರ್ಯಮಯವಾದ ಅಣು! ವಿಮಲೆಗೆ ಬರೆದ ಪತ್ರ ರಾಜಮ್ಮನ ಹೆಸರಿನ ಲಕ್ಕೋಟೆಗೆ ಹೇಗೆ ಬಿತ್ತು?

ನನ್ನ ಚೇಷ್ಟೆ ಭಯಂಕರ ರೂಪವನ್ನು ಹೊಂದಿತಲ್ಲ? ನನ್ನ ದಾಂ ಪತ್ಯ ಪ್ರಣಯ ಪ್ರಳಯವಾಯಿತಲ್ಲ? ಶ್ರೀಮತಿ ರಾಜಮ್ಮನೆಂದರೆ ಸಂಭಾವಿತ ಸ್ತ್ರೀರತ್ನ; ಹೆಂಡತಿಯ ಜೀವವುಳಿಸಿದವಳು. ಅವಳಿಂದ ಬೀಳ್ಕೊಳ್ಳುವಾಗ ನನ್ನ ಧ್ವನಿ ಮುಖಗಳಲ್ಲಿ ಒಂದಿಷ್ಟು ವಿಕಾರವಿತ್ತೊ ಏನೋ....ವಿಮಲೆ ನೋಡಿದ್ದಿರಬಹುದೊ ಏನೊ....ಏನಿದ್ದರೂ ಹೀಗಾ ಗುವುದಕ್ಕೆ ಕಾರಣವೇ ತೋರಲಿಲ್ಲ.

ನಾನು ಕುಳಿತ ಕುರ್ಚಿ ಬೆವರಿನಿಂದ ಒದ್ದೆಯಾಗಿತ್ತು. ದೊಡ್ಡದೊಂದು ದೀರ್ಘ ಶ್ವಾಸ. ಮುಖದಲ್ಲಿ ಸಪ್ಪೆಯಾದ ಮೌನ. ನಾನು ಅಪರಾಧಿಯಲ್ಲ ಎಂದು ಅಂತರಾತ್ಮಕ್ಕೆ ಗೊತ್ತಿದೆ. ಆದರೆ ಬಹಿರಾತ್ಮವಾದ ಈ ವಿಮಲೆ ಹೇಗೆ ಒಪ್ಪಿಕೊಂಡಾಳು?

"ನನ್ನಂತಹ ಗಂಡ ನಿನ್ನಂತಹ ಪ್ರೇಮಮಯಿಯಾದ ಪತ್ನಿಗೆ ಬೇರಾವ ಧಾಟಿಯಲ್ಲಿ ಪತ್ರ ಬರೆಯಬಹುದಿತ್ತು ಮುದ್ದು! ನಿನಗೆ ಬರೆದ ಪತ್ರ ಕೈತಪ್ಪಿನಿಂದ ಅವಳ ಲಕ್ಕೋಟೆಗೇಕೆ ಜಿದ್ದಿರಬಾರದು ಹೃದಯೇಶ್ವರಿ?'' ಎಂದು ವಿನಯಪೂರ್ವಕವಾಗಿ ಪ್ರಶ್ನಿಸಿದೆ.

"ಗಂಡುಸರನ್ನು ನಂಬುವವರು ಹುಚ್ಚರೇ ಸರಿ!"

ಹುಚ್ಚರ ಪ್ರಪಂಚಕ್ಕೆ ಈಗ ಇಳಿದಂತಾಯಿತು. ಆಕೆಯ ಪ್ರಶ್ನೆ ಹೃದಯಕಂದರದಲ್ಲಿ ಪದೇ ಪದೇ ಧ್ವನಿಸಿತು; ಪ್ರತಿಧ್ವನಿಸಿತು. ಉತ್ತರ ಕೊಡುವುದಾದರೂ ಹೇಗೆ? ಕೊಟ್ಟರೆ ನಂಬುವ ಜನಯಾರು? ನನಗೆ ಸಕಾರಣವಾಗಿ ತೋರುವುದೆಲ್ಲ ಅವಳಿಗೆ ಅಬದ್ಧ. ಅಪರಾಧಿಯಲ್ಲದಿದ್ದರೂ ಹೌದೆಂದು ಒಪ್ಪಿಕೊಂಡು ಕ್ಷಮೆ ಬೇಡೋಣವೆ? ಸಂಗತಿ ಚಿಕ್ಕದಾಗಿರಲಿಲ್ಲ. ಕ್ಷಮೆ ಬೇಡಿದೆನೆನ್ನೋಣ. ಅವಳು ಕೊಟ್ಟಳೆನ್ನೋಣ. ಇನ್ನು ಮುಂದೆ ತಾನು ನೋಡಿ ಸೆನ್ಸರ್ ಮಾಡದೆ ನಾನು ಯಾರಿಗೂ ಪತ್ರ ಬರೆಯಬಾರದೆಂದು ವಿಧಿಸಿದರೆ ಮತ್ತೂ ಕಷ್ಟವಲ್ಲವೆ? ಆದುದರಿಂದ ಯಾವುವಾದರೂ ಕಾರಣಗಳನ್ನು ಹೇಗಾದರೂ ಕೊಟ್ಟು ನಾನು ಸರ್ವಥಾ ಮಾಡಿರದ ಅಪರಾಧವನ್ನು ಮಾಡಲಿಲ್ಲ ಎಂದು ರುಜುಪಡಿಸುವುದೇ ಕರ್ತವ್ಯವೆಂದು ತೋರಿತು. "ನೋಡು ಮುದ್ದು! ಈ ಪತ್ರದಲ್ಲಿ ಸೀರೆಗಳ ಬಳೆಗಳ ಪ್ರಸ್ತಾವವಿದೆ ಇದು ರಾಜಮ್ಮನಿಗೆ ಬರೆದ ಪತ್ರವಾಗಿದ್ದರೆ ಸೀರೆ ಬಳೆಗಳ ಅವಶ್ಯತೆಯಿತ್ತೆ?" ಎಂದು ನನ್ನ ಪ್ರಶ್ನೆ. "ಏಕೆ ಇರಬಾರದು?" ಎಂದು ಅವಳ ಚುಟುಕಿನ ಉತ್ತರ. ಪ್ರಮಾಣ ಕೊಡುವ ಭಾರವಿನ್ನೂ ನನ್ನ ಮೇಲೆ. ನಿರುಪಾಯನಾಗಿ ಕೊನೆಗೆ 'ನೀನು ಹೇಳಿದ ಮಾತೇ ಸತ್ಯವೆಂದೂ, ನನಗೂ ರಾಜಮ್ಮನಿಗೂ ಗುಪ್ತ ಪತ್ರವ್ಯವಹಾರ ನಡೆದಿದೆಯೆಂದೂ, ತರ್ಕಕ್ಕಾಗಿ-ಬರಿಯ ತರ್ಕಕ್ಕಾಗಿ ಮಾತ್ರ-ಒಪ್ಪಿಕೊಂಡರೂ, ತನಗೆ ಬರೆದ ಗುಪ್ತಪತ್ರವನ್ನು ನಿನಗೇಕೆ ತೋರಿಸಬೇಕು?"

ಎಂದು ನನ್ನ ಆರ್ಗ್ಯುಮೆಂಟು; ಅಥವಾ ವಾದ. "ರಾಜಮ್ಮನಿಗೆ ಕನ್ನಡ ಬರುತ್ತದೆಯೆ? ಯಾರದೋ ಪತ್ರವೆಂದೆಣಿಸಿ ಓದುವುದಕ್ಕಾಗಿ ನನ್ನ ಕೈಗೆ ಕೊಟ್ಟಳು; ಸಿಕ್ಕಿಬಿದ್ದಳು; ಸಿಕ್ಕಿಬಿದ್ದುದು ತಿಳಿದ ಮೇಲೆ ಹಳಸಿದ ಮೇಲೋಗರಕ್ಕೆ ಹೊಸ ಒಗ್ಗರಣೆ ಕೊಟ್ಟಂತೆ ನನ್ನ ಕೈಗೆ ಬರಬೇಕಾಗಿದ್ದ ಪತ್ರವೆಂದದನ್ನು ನನ್ನ ಕೈಯಲ್ಲಿಯೇ ಬಿಟ್ಟಳು" ಎಂದು ನನ್ನಾಕೆಯು ಪ್ರತಿವಾದ. ಈ ವಿಮಲೆ ವಕೀಲಳಾಗಿದ್ದರೆ ಏನೆಲ್ಲ ಮಾಡಿಬಿಡುತ್ತಿದ್ದಳೋ ಎಂಬ ವಿಸ್ಮಯದೊಡನೆ ನನ್ನ ಅಸಹಾಯತೆಯೂ ಪ್ರಕಟವಾಯಿತು. ಕೊನೆಗೆ ಆವೇಗ ರಭಸದಲ್ಲಿ, ಈ ಪ್ರಶ್ನೆಯಿಂದ ಅವಳ ಬಾಯಿ ಮುಚ್ಚಿಹೋಗುವುದೆಂಬ ದೃಢವಿಶ್ವಾಸದಿಂದ ಮೇಜಿಗೊಂದು ಏಟು ಕೊಡುತ್ತಾ "ಕನ್ನಡ ಬಾರದವಳಿಗೆ ಕನ್ನಡದಲ್ಲಿಯೇ ಪ್ರೇಮಪತ್ರ ಬರೆಯುವಷ್ಟು ಮಜಡನೆ ನಾನು?" ಎಂದು ನೆಟ್ಟಗೆ ಕುಳಿತು ಆಕೆಯ ಮುಖವನ್ನೆ ನೋಡುತ್ತಿದ್ದೆ

ಹೀಗೆ ಅರ್ಧ ಘಂಟೆಯ 'ಹೇರಿಂಗ್' ಆದ ಮೇಲೆ ಸತ್ಯವೆಂದಾಕೆಗೆ ತೋರಿತೊ ಏನೊ ಯಾರು ಬಲ್ಲರು? ಕೆಲ ನಿಮಿಷ ಮೌನವಾಗಿದ್ದಳು. ರಾಜಮ್ಮನಿಗೆ ಕನ್ನಡ ಬರುವುದಿಲ್ಲ; ಅವಳಿಗೆ ಕನ್ನಡದಲ್ಲಿ ಪತ್ರ ಬರೆಯುವುದುಂಟೆ? ಎಂಬ ಪ್ರಶ್ನೆಯನ್ನೆ ಮನಸ್ಸಿನೊಳಗೆ ತೊಳಸಿ ಕೊನೆಗೆ ಹೇಗಿದ್ದರೂ ತಪ್ಪು ನನ್ನದೆ, ತನ್ನದಲ್ಲ-ಎಂಬ ನಿಶ್ಚಯದಿಂದ "ಇನ್ನು ಮುಂದೆ ಹೀಗಾಗಬಾರದು" ಎಂದು ಕ್ಷಮಾನ್ವಿತ ವಾಣಿಯಲ್ಲಿ ನಿಷೇಧಿಸಿದಳು. ಅಂತೂ ತಪ್ಪುಮಾಡುವುದಕ್ಕಾಗಿ ಲೋಕದಲ್ಲಿ ಹುಟ್ಟಿದ ನಾನು ಅವಳ ಈ ಮಾತಿನಿಂದ ಸ್ವಲ್ಪ ಸಮಾಧಾನವನ್ನು ತಂದುಕೊಳ್ಳಬೇಕಾಯಿತು.

ಅಷ್ಟರಲ್ಲಿ ನಾನು ಓದುತ್ತಿದ್ದ ಕಾದಂಬರೀ ಗ್ರಂಥದ ಹಾಳೆಗಳೆಡೆಯಿಂದ ಲಕ್ಕೋಟೆಯೊಂದು ನನ್ನನ್ನೆ ನೋಡುತ್ತಿದ್ದಂತೆ ಭಾಸವಾಯಿತು. ಅವಸರದಿಂದ ಹೊರಗೆಳೆದೆ; ವಿಮಲೆಯ ವಿಳಾಸ. ಒಳಗೆ ರಾಜಮ್ಮನಿಗೆ ಬರೆದ ಪತ್ರ. ಒಗಟು ಬಿಚ್ಚಿತು "ಮಹಾರಾಯಾ! ನಾವಿಬ್ಬರೂ ಹೀಗೆ ಜಗಳಾಡುತ್ತಿದ್ದಾಗ ಸುಮ್ಮನೆ ನೋಡಿಕೊಂಡು ಹೀಗೆ ಕುಳಿತಿದ್ದೆಯಲ್ಲ!" ಎಂದು ಮನಸ್ಸಿನೊಳಗೇ ಪತ್ರವನ್ನು ಸಂಬೋ

ಧಿಸುತ್ತಾ ಅದನ್ನಾಕೆಯ ಕೈಯಲ್ಲಿಟ್ಟೆ. ನಾನು ಆ ದಿನ ಆ ಪತ್ರವನು ಟಪ್ಪಾಲಿಗೆ ಹಾಕದಿದ್ದುದರಿಂದ ನನ್ನ ಮಾನವುಳಿಯುವಂತಾಯಿತು.

ವಿಮಲೆ ಓದಿದಳು. ಶುದ್ಧ ಡೊಳ್ಳುಹೊಟ್ಟೆಯ ಗಣಪನಂತಿರುವ ದುಂಡಗಿನ ಇಂಗ್ಲೀಷು ಅಕ್ಷರಗಳೆ ನನ್ನಾಕೆಯ ದೃಷ್ಟಿರಾಗವನ್ನು ಪಡೆಯುವುದು ದುರ್ಲಭ. ಇಂಗ್ಲೀಷಿನಲ್ಲಿ ಇರುವುದೆಲ್ಲ ನೋಡಿ....ಎಂಬುದು ಅವಳು ಹೊರಡಿಸಿದ ಸಿದ್ಧಾಂತ. ಹೀಗಿರುತ್ತ ಅಕ್ಷರಗಳ ಒಡಲಲ್ಲಿ ಏನು ಭಾವನೆ ಅಡಗಿದ್ದರೂ ಅವಳು ಗುರುತಿಸಲಾರಳು; ಒಂದು ವೇಳೆ ಗುರುತಿಸಿದರೂ ಸಂದೇಹಾಸ್ಪದ ವಾಕ್ಯಗಳು ಅಲ್ಲಿರಲಿಲ್ಲ ಎಂಬ ಧೈರ್ಯ ನನಗೆ. ಓದುವುದಕ್ಕೆ ತೊಡಗುವ ಮುಂಚೆಯೇ "ಎಂತಹ ಕೊಳಕು ಅಕ್ಷರ....ನಿಮ್ಮ ಉಪಾಧ್ಯಾಯರು 'ಕೋಪಿ' (Copy) ಬರೆಯಿಸುವ ಕ್ರಮವಿರಲಿಲ್ಲವೆ?" ಎಂದು ನಕ್ಕಳು. ನನ್ನ ಭಾಗ್ಯ....ಆ ಮೇಲೆ ಪತ್ರವನ್ನು ಕಣ್ಣಮುಂದೆ ಹಿಡಿದು ಕೂಲಂಕಷವಾಗಿ ಓದಿದವಳಂತೆ ಮುಖಭಂಗಿಯಲ್ಲಿ ಪ್ರಕಟಿಸುತ್ತಾ ಇದ್ದಳು. ಮೌನಮುದ್ರಿತ ಮುಖದಲ್ಲಿ ಈಷನ್ಮುಕುಲಿತವಾದ ಮಂದಹಾಸದ ರೇಖೆ! ಆಕೆ ಪಂಕ್ತಿಗಳ ಲೆಕ್ಕವನ್ನು ತೆಗೆದಿರಬಹುದು. ನಾಲ್ಕಾರು ಅಕ್ಷರಗಳ ಮೇಲೆ ತನ್ನ ಕ್ರೂರ ದೃಷ್ಟಿಯನ್ನು ಬೀರಿರಬಹುದು. ತಾನು ಓದಿದೆನೆಂದು ನನಗೆ ಖಚಿತವಾಗಬೇಕಲ್ಲವೆ? ಅಷ್ಟು ಸಮಯ ಕಣ್ಣನ್ನು ಅತ್ತಿತ್ತ ಅಕ್ಷರಗಳ ಮೇಲೆ ಓಡಾಡಿಸಿದ್ದಿರಬಹುದೆಂಬುದನ್ನು ನಾನೂ ಬಲ್ಲೆ. "ನಿಮ್ಮ ಸುಟ್ಟ ಅಕ್ಷರ; ಇದನ್ನೋದಿ ಕಣ್ಣು ಹಾಳುಮಾಡಿಕೊಳ್ಳುವುದೇಕೆ?" ಎಂದು ತಿರಸ್ಕಾರದಿಂದ ನಕ್ಕಳು. ತಿರಸ್ಕಾರವಾದರೇನು? ನಕ್ಕಳಲ್ಲವೇ?

ನಾನು ಆ ದಿನ ಧನ್ಯನಾದೆ!

"ಇನ್ನು ಮುಂದೆ ಅಜಾಗ್ರತೆ ಮಾಡಬಾರದು. ಬರೆದ ಕಾಗದಗಳನ್ನು ಜಾಗ್ರತೆಯಿಂದ ಓದಿನೋಡಿ, ಸರಿಯಾದ ವಿಳಾಸವುಳ್ಳ ಲಕ್ಕೋಟೆಗೇ ತಳ್ಳಬೇಕು. ನಿಮಗೆ ರಾಜಮ್ಮನ ಪರಿಚಯವಾಗಿ ಎಷ್ಟು ಕಾಲವಾಯಿತು? ಒಳ್ಳೆಯ ಹೆಂಗುಸು! ತಾಯಿಯಂತೆ ನನ್ನನ್ನು ಪ್ರೀತಿಸುತ್ತಿದ್ದಳು! ಪರಸ್ತ್ರೀಗೆ ಶೇಕ್‌ಹೇಂಡ್ ಕೊಡಲು ಸಂಕೋಚವಿಲ್ಲವೆ? ರಾತ್ರಿ ಹೆಚ್ಚಾಯಿತು ...ಹನ್ನೊಂದು ಘಂಟೆ ಹೊಡೆಯಿತು....ರಾಜಮ್ಮನಿಗೆ ವಯಸ್ಸೆಷ್ಟಾಗಬಹುದು?"

ಹೀಗೆ ನೂರಾರು ಪ್ರಶ್ನೆಗಳನ್ನು ಏಕಕಾಲದಲ್ಲಿ ಕೇಳಿದಳು.

ನನ್ನಲ್ಲಿ ಸಂಪೂರ್ಣ ತೃಪ್ತಿಯುಂಟಾಗಿ ಆಕೆಯ ಮುಖ ಶುದ್ಧ ಮಂಡಲವಾಗಬೇಕಾದರೆ, ನಾನು ಉತ್ತರಿಸಬೇಕಾಗಿದ್ದ ಪ್ರಶ್ನೆಗಳು ಇನ್ನೂ ಇದ್ದುವೆಂಬುದು ಸ್ಪಷ್ಟವಾಯಿತು. ಸರಕಾರಿ ಪರೀಕ್ಷೆಗಳಲ್ಲಿ ಘಂಟೆಗೆ ಹದಿನೈದು ಪ್ರಶ್ನೆಗಳನ್ನು ಉತ್ತರಿಸಿದ ನಾನು ಇದಕ್ಕೆ ಹೆದರುವುದುಂಟೇ?

ಅನುಕ್ರಮವಾಗಿ ನನ್ನ ಉತ್ತರ ಹೀಗಿತ್ತು: ಇನ್ನು ಮುಂದೆ ಜಾಗ್ರತೆಯಾಗಿರುತ್ತೇನೆ. ಒಬ್ಬರ ಪತ್ರವನ್ನು ಇನ್ನೊಬ್ಬರ ಲಕೋಟೆಗೆ ಸೇರಿಸುವುದಿಲ್ಲ. ನಿನಗಾದಾಗಲೇ ನನಗೂ ರಾಜಮ್ಮನ ಪರಿಚಯವಾಯಿತು. ಸಂದೇಹವೇನು? ತಾಜಾ ಹೆಂಗುಸು. ಗಂಡುಸರ ಮಧ್ಯದಲ್ಲಿ ಕುಳಿತು ಸಿನಿಮ ನೋಡುವುದಕ್ಕೆ ಸ್ತ್ರೀಯರು ಲಜ್ಜಿಸುವರೇ? ಹಸ್ತಲಾಘವ ಕೊಡುವುದು ಆಂಗ್ಲ ಸಮಾಜಪದ್ಧತಿ. ರಾತ್ರಿ ಹೆಚ್ಚಾದುದು ನಿಜ; ಒಂದು ಗಂಟೆ ಗೋಡ್ರಿಜ್ ಸೋಪಿನ ಹುಡುಕಾಟಕ್ಕಾಯಿತು ಹನ್ನೊಂದು ಘಂಟೆ ಹೊಡೆದುದು ನನ್ನ ಕಿವಿಗೂ ಕೇಳಿಸಿದೆ. ರಾಜಮ್ಮನ ವಯಸ್ಸನ್ನು ತಿಳಿಯುವುದಕ್ಕೆ ನನ್ನ ಕೈಗೆ ಜಾತಕ ಬರಲಿಲ್ಲ.

ನನ್ನಾಕೆಯ ಸ್ವಭಾವ ಎಷ್ಟೆಂದರೂ ಧಾರಾಳ. ಆದುದರಿಂದಲೆ ಕಣ್ಣೀರಿನ ವೆಚ್ಚದಲ್ಲಿಯೂ ಧಾರಾಳ ಸ್ವಭಾವ. ಆಕೆಯ ಪ್ರೀತಿಯ ಕಣ್ಣೀರು ನನ್ನ ಮೈಯನ್ನು ಒದ್ದೆಮಾಡಿತು.

"ನನ್ನನ್ನು ಕ್ಷಮಿಸುವಿರಾ? ವ್ಯರ್ಥವಾಗಿ ಆರೋಪಣೆ ಹೂಡಿದೆ" ಎಂದು ಮತ್ತೊಮ್ಮೆ ಅಳುವ ರಾಗವನ್ನು ಆಲಾಪಿಸಿದಳು.

ನನ್ನ ಕಂಠವೂ ನಡುಗಿತು. "ತಪ್ಪು ನಿನ್ನದಲ್ಲ ಮುದ್ದು.... ನನ್ನದೆ" ಎಂದೆ.

ಕೊನೆಯ ವರೆಗೂ ನಮ್ಮಿಬ್ಬರಲ್ಲಿ ಅಪರಾಧಿಗಳಾರೆಂಬ ಪತ್ತೆಯೇ ಆಗದೆ ಕಣ್ಣಿಗೆ ನಿದ್ದೆಹತ್ತಿತು.

—೧೯೩೪.

ಸಂದೇಹ

ಸೀತಾರಾಮನು ಬಂದಂದಿನಿಂದ ವಿನಾಯಕ ರಾಯನ ಮನೆಯಲ್ಲಿ ಇದುವರೆಗೆ ಇದ್ದ ಸುಖಶಾಂತಿಗಳ ಸಮ್ಮೇಳದಲ್ಲಿ ಏನೋ ಒಂದು ಅಪಸ್ವರ. ಹನ್ನೆರಡು ವರ್ಷದ ತಬ್ಬಲಿ ಹುಡುಗನಾಗಿ ಆತ ಬಂದಿದ್ದ. ಅವನಿಗೆ ಇಂದು ವರ್ಷ ಹದಿನೆಂಟು. ಕಿತ್ತುನೆಟ್ಟ ಅಗೆ ಹುಟ್ಟಿದಲ್ಲಿ ಬೆಳೆದುದಕ್ಕಿಂತ ಹೆಚ್ಚು ಹಸನಾಗಿ ಬೆಳೆಯುತ್ತದೆ. ಹನ್ನೆರಡು ವರ್ಷಗಳಾದರೂ ಎಂಟು ವರ್ಷದ ಬೆಳವಣಿಗೆಯಿಲ್ಲದ ಎಲುಬು ಚರ್ಮಗಳ ಗೂಡು, ಆರು ವರ್ಷಗಳೊಳಗೆ ಭವ್ಯಶರೀರವಾಗಿ, ವಿಕಾಸ ಹೊಂದುವ ಯೌವನದ ಸಂಪೂರ್ಣ ವೈಭವವನ್ನು ಪಡೆದಿದೆ; ವಯಸ್ಸಿಗಿಂತ ಅಧಿಕವಾದ ಪುಷ್ಟಿಯನ್ನು ಪಡೆದಿದೆ. ಹಿಂದಿನಂತೆಯೆ ಬೀದಿಯ ನಾಯಿಯ ಹಾಗೆ ಬಡಕಲಾಗಿರುತ್ತಿದ್ದರೆ, ಹೇಳಿದ ಕೆಲಸಗಳನ್ನಷ್ಟೆ ಮಾಡಿ, 'ಕುಳಿತುಕೊ' ಎಂದಾಗ ಮಾತ್ರ ಹಂತಿ ಹಿಡಿದು ಬರುವವನಾಗಿದ್ದರೆ, ಸೀತಾರಾಮನ ನಡತೆ ಆಕ್ಷೇಪಕ್ಕೆ ಎಡೆಕೊಡುತ್ತಿರಲಿಲ್ಲ. ಈಗ ಸೀತಾರಾಮ ಮನೆಯೊಳಗೆ ಯುವರಾಜ ಪಟ್ಟವನ್ನೇರಿದಂತಿದೆ. ಮೊದಮೊದಲು, ವಿನಾಯಕನು ಇಲ್ಲದಾಗ ಮಾತ್ರ-ಈಗ ಒಮ್ಮೊಮ್ಮೆ ವಿನಾಯಕನು ಪ್ರತ್ಯಕ್ಷ ನಿಂತಿರುವಾಗಲೂ, ತನ್ನ ಅಧಿಕಾರವನ್ನು ಪ್ರದರ್ಶಿಸುತ್ತಿದ್ದಾನೆ. ದಿನ ದಿನಕ್ಕೆ-ಅಲ್ಲ ನಿಮಿಷ ನಿಮಿಷಕ್ಕೆ ಮನೆಯೊಳಗೆ ಇರತಕ್ಕ ತನ್ನ ಒಡೆತನ ಸಡಿಲಾಗುತ್ತಾ ಬರುತ್ತಿದೆ; ಇದಕ್ಕೆ ಸುಶೀಲೆ ಕೊಟ್ಟ ಸಲಿಗೆಯೇ ಕಾರಣ—ಎಂದು ವಿನಾಯಕರಾಯ ಸಿದ್ಧಾಂತ ಹೂಡಿದ್ದಾನೆ.

ಸೀತಾರಾಮ ಬಂದುದೊ? ಅದು ಸಂದಿಗ್ಧ ಸಂದರ್ಭಗಳಲ್ಲಿ. "ನೆರೆಹಾವಳಿಯಲ್ಲಿ ಬಂಧುಬಳಗವನ್ನು ಕಳೆದುಕೊಂಡ ಅನಾಥ ಶಿಶು ನಾನು; ಧರ್ಮಕೊಡಿ ತಾಯಿ" ಎಂದು ಬೇಡುತ್ತಾ ಬಂದನಂತೆ. ಹೆಂಗುಸರ ಎದೆ ಕರಗುವುದಕ್ಕೆ ಕಷ್ಟವೇನೂ ಇಲ್ಲ. ಸುಶೀಲಮ್ಮ ಮರುಕಗೊಂಡಳಂತೆ. ಎರಡು ದಿನ ಇಲ್ಲಿಯೇ ಉಳಿದು ಹೋಗು—ಎಂದಳಂತೆ. ಎರಡು ದಿನ ಉಳಿದುದಾಯಿತು. ಸೀತಾರಾಮ ಮನೆಬಿಟ್ಟು ಹೋಗ

ಬೇಕಾಗಿದ್ದ ಮೂರನೆಯ ದಿನ ಬರಲೇ ಇಲ್ಲ. ಆತ ಬಂದು ಆರು ವರ್ಷಗಳಾಗಿದ್ದರೂ ಆ ದಿನ ಬರಲಿಲ್ಲ. ಬರುವ ಹಾಗೆಯೂ ತೋರ ಲಿಲ್ಲ. ಇದುವರೆಗೆ ಏಕೆ ಹೀಗಾಯಿತು? ಎಂದು ವಿನಾಯಕ ಕೇಳಿ ದ್ದನೇ? ಅದೂ ಇಲ್ಲ. ಇಂದು ಹದಿನೆಂಟು ವರ್ಷ. ಆ ಸುಂದರ ಮೂರ್ತಿಯನ್ನು ನೋಡುವಾಗ ತಾನು ಮಾಡಿದ್ದ ತಪ್ಪೇನೆಂದು ವಿನಾ ಯಕನಿಗೆ ತಿಳಿದು ಬಂತು. ಆರು ವರ್ಷಗಳ ಹಿಂದೆ ನೆರೆಹಾವಳಿಯಾ ಗಿತ್ತು. ಆದರೆ ಆಗ ಈ ಸೀತಾರಾಮ ನಿರ್ಗತಿಕನಾದನೆಂಬುದಕ್ಕೆ ಆಧಾರವೇನು? ಆತ ತಾನಾಗಿ ಮನೆಬಾಗಿಲ ಮುಂದೆ ಭಿಕ್ಷೆ ಬೇಡಿದ ನೆಂಬುದಕ್ಕೆ ಸಾಕ್ಷಿಯೇನು? ಸುಶೀಲೆ ಹೇಳಿದ್ದಳು, ಆತ ನಂಬಿದ್ದ. ಹುಡುಗನಿಗೆ ಬರಿಯ ಬಾಲಭಾವವಿದ್ದಾಗ ಆಕೆಯ ಹೇಳಿಕೆಯಿಂದಲೂ ತನ್ನ ನಂಬಿಕೆಯಿಂದಲೂ ಅಪಾಯವೇನೂ ಬರುವಂತಿರಲಿಲ್ಲ. ಆದರೆ ಈಗ? ಕಣ್ಣು ಕುಕ್ಕುವ ರೂಪಲಾವಣ್ಯವುಳ್ಳ ಈ ತರುಣನನ್ನು ಮನೆ ಯೊಳಗೆ ಸೇರಿಸಿಕೊಂಡ ಪರಿಸ್ಥಿತಿಯನ್ನು ಈಗ ಬರಿಯ ಸುಶೀಲೆಯ ಮಾತುಗಳ ಆಧಾರದಿಂದ ಸತ್ಯವೆಂದು ಒಪ್ಪಿಕೊಳ್ಳುವವನಿಗೆ ಎಂಟೆದೆ ಬೇಡವೆ? ಆತ ಮನೆಯಿಂದ ಕದಲುವ ಚಿಹ್ನೆಗಳೂ ಇಲ್ಲ. ಇದಕ್ಕೇನು ಕಾರಣ? ಸರಿಯಾದ ಕಾರಣ—ಸಂಭಾವಿತರು ಕೇಳಿ ಲಜ್ಜೆಪಡಲಾರದ ಕಾರಣ, ಇರಬಹುದೆ?

ಮನೆಯೊಳಗೆ ನಾಲ್ಕೆ ಮಂದಿಗಳು. ಸೀತಾರಾಮನ ಆಗಮನದ ವರೆಗೆ ವಿನಾಯಕ, ಸುಶೀಲೆ, ಅಡಿಗೆಯ ಆಳು. ಆತ ಬಂದ ಮೇಲೆ ಅವನೂ ಸೇರಿ ನಾಲ್ಕು ಮಂದಿ. ಇವರಲ್ಲಿ ಇಬ್ಬರು, ಸೀತಾರಾಮ— ಸುಶೀಲೆಯರು, ಒಂದಾಗಿ ಯಾವ ಗುಟ್ಟಿನ ವ್ಯವಹಾರಗಳನ್ನೂ ಮಾಡ ಬಹುದಲ್ಲ? ಅಡಿಗೆಯವನಿಗೆ ದುಡ್ಡಿನ ಪರಿಚಯ. ಮನೆಯೊಡತಿಯ ಕಣ್ಣಮುಂದೆ ಹಗಲಿರುಳು ಸುಳಿದಾಡಬೇಕಾದವನು ಆಕೆಯ ವಿರೋಧ ವಾಗಿ ಚಾಡಿಹೇಳುವನೆ? ವಿನಾಯಕನಿಗಂತೂ ಮನೆಯೊಳಗೆ ಇರುವ ಅವಕಾಶವಿಲ್ಲ; ಇನ್ನೊಂದು ಮನೆಯಿದೆ. ಅಲ್ಲಿ ಕಾಲಕ್ಷೇಪ ಮಾಡ ಬೇಕಾಗುತ್ತದೆ. ತಾನಿಲ್ಲದ ವೇಳೆಯಲ್ಲಿ ಏನೆಲ್ಲ ಆದೀತು ಹೋದೀತೆಂ ಬುದನ್ನು ಊಹಿಸುವುದು ಹೇಗೆ?

ವಿನಾಯಕನಿಗಿದ್ದ ಇನ್ನೊಂದು ಕಷ್ಟ–ಸುಶೀಲೆಯ ವಿಧೇಯತೆ. ಗಂಡನೆಂದರೆ ಪರದೈವವೆಂದಾಕೆ ಭಾವಿಸುತ್ತಾಳೆ. ಆದುದರಿಂದಲೆ ಗಂಡ ದಾರಿ ತಪ್ಪಿ ಹೋದ ಸಂದರ್ಭದಲ್ಲಿಯೂ ಕಠಿನೋಕ್ತಿಗಳನ್ನಾಡದೆ, ಕಣ್ಣೀರು ನಯನುಡಿಗಳಿಂದ ಅವನ ಮನಸ್ಸನ್ನು ಹಿಂತಿರುಗಿಸುವುದಕ್ಕೆ ಪ್ರಯತ್ನಿಸಿದ್ದಳು. ಪ್ರಯೋಜನವಾಗಲಿಲ್ಲ. ಕೊನೆಗೆ ಸಹಿಸಿದಳು. ಮೌನದಲ್ಲಿ ಸಹಿಸಿದಳು. ಗಂಡನ ಶರೀರದಲ್ಲಿ ಏನಾದರೊಂದು ವೈಕಲ್ಯ ವಿರುತ್ತಿದ್ದರೆ ಅದನ್ನು ಹೇಗೆ ಸಹಿಸುತ್ತಿದ್ದಳೊ ಹಾಗೆ ಆತನ ಮನಸ್ಸಿನ ವೈಕಲ್ಯವನ್ನು ಸೈರಿಸಿದಳು. ಆಕೆಯ ಈ ವಿವಿಕ್ತ ಭಾವವು ವಿನಾಯಕ ನಿಗೆ ಮತ್ತೆ ಮತ್ತೆ ಅನುಕೂಲವೆ ಆಯಿತು. ಈ ಉಪಕಾರಕ್ಕೆ ಲಂಚ ಕೊಡುವಂತೆ, ವಿನಾಯಕ ಹೆಂಡತಿಯನ್ನೂ ಅಕೆಯ ಏಕಾಂತವಾಸದ ಕೊರಗನ್ನೂ, ಅದನ್ನು ನಿವಾರಿಸುವುದಕ್ಕಾಗಿ ಆಕೆ ಏರ್ಪಡಿಸಿಕೊಳ್ಳ ಬಹುದಾದ ಚಿಕ್ಕದೊಡ್ಡ ಮನೋರಂಜನಗಳನ್ನೂ ಗಮನಿಸದೆ ಎಲ್ಲ ಸ್ವಾಭಾವಿಕವಾಗಿದೆ—ಇರಬೇಕಾದಂತೆ ಇದೆ—ಎಂಬ ಭಾವದಿಂದ ಮೌನಿಯಾಗಿಯೆ ಇದ್ದ. ಇನ್ನು ಆ ಮೌನಕ್ಕೆ ಅವಧಿಯೆಷ್ಟು?

ವಿನಾಯಕನಿಗೆ ಉಭಯಸಂಕಟ. ಸೀತಾರಾಮ ಪ್ರಾಯ ಬಂದ ಹುಡುಗ. ಪರ ಸ್ತ್ರೀಯರೊಂದಿಗೆ ನಿರ್ಬಂಧವಿಲ್ಲದೆ ನಡೆಯುವ ಪ್ರಾಯ ಕಳೆದುಹೋಗಿದೆ. ಕಳೆದುಹೋಗಿದೆ—ಎಂಬುದನ್ನು ಸೀತಾರಾಮ ತಿಳಿದುಕೊಂಡಂತಿಲ್ಲ. ಸುಶೀಲೆ ಒಪ್ಪಿದಂತೆ ಇಲ್ಲ. ನೆರೆಹಾವಳಿಯಿಂದ ತಪ್ಪಿಸಿಕೊಂಡು ಬಂದಾತನನ್ನು ಯಾವ ಹಾವಳಿಯಿಂದ ಹೊರ ದೂಡ ಬಹುದು? ಸುಶೀಲೆಗೆ ತಿಳಿಸಲೆ? ಆಕೆಯು ಕಣ್ಣೀರಿನ ಪ್ರವಾಹದಲ್ಲಿ ಮನೆಯೇ ತೇಲಿಹೋಗಬಹುದು. ಸೀತಾರಾಮನಲ್ಲಿ ಹೇಳುವುದಾದರೂ ಏನು? ಹುಡುಗ ಸಭ್ಯನಾಗಿದ್ದಾನೆ. ಮನೆಗೆ ಉಪಕಾರಿಯಾಗಿಯೂ ಇದ್ದಾನೆ. ರಕ್ತಸಂಬಂಧಿಯಾಗಿರುತ್ತಿದ್ದರೆ ಆತನ ಚರ್ಯೆಯಲ್ಲಿ ಎಂತಹ ದೋಷದರ್ಶಿಗಳಿಗೂ ಆಕ್ಷೇಪ ಕಾಣಿಸುತ್ತಿರಲಿಲ್ಲ. ವಿನಾಯಕನಾದರೂ ಯಾವ ಅಪ್ಪಣೆಕೊಟ್ಟು ಸೀತಾರಾಮನ ನಡೆಗೆ ತಡೆಹಾಕಬಹುದು? "ಹೆಂಡತಿಯೊಡನೆ ಇಂತಹ ಮಾತುಗಳನ್ನೆ ಆಡು; ದೂರ ನಿಂತು ಮಾತಾಡು. ಮನೆಯೊಳಗೆ ಪ್ರವೇಶಿಸಬಹುದಾದ ಕೋಣೆಗಳಿವು.

ನೀನು ಕಾಲಿಡಬಾರದ ಕೋಣೆಗಳಿವು." ಎಂದು ಮೊದಲಾಗಿ ಹೊಸ ಕಾನೂನುಗಳನ್ನು ಹೂಡಿ ಮನೆಯನ್ನಾಳುವುದೆ? ಇದರಿಂದ ತನ್ನ ಹೇಡಿತನವೇ ವ್ಯಕ್ತವಾಗುವುದು. ಹೃದಯಗಳು ಇಷ್ಟು ಸಮೀಪದಲ್ಲಿರುವಾಗ ಸಮ್ಮಾನ್ನು ದೂರಕ್ಕೆಳೆದು ಏನುಮಾಡುವೆ ಹುಚ್ಚ? ಎಂದು ಈ ವ್ಯಕ್ತಿಗಳು ಮನಸ್ಸಿನೊಳಗೆ ಪ್ರಶ್ನಿಸಿ ತನ್ನ ಅಲ್ಪತೆಯನ್ನು ಕಂಡು ನಗಬಹುದಲ್ಲವೆ? ಏನಾದರೊಂದು ಅಪರಾಧವನ್ನು ಆರೋಪಿಸಿ ಹೊರಗೆ ದಬ್ಬಿಬಿಡೋಣ ಎಂದರೆ, ಅದೂ ಸಿಕ್ಕುವ ಹಾಗಿಲ್ಲ. ತನಗೆ ಒಂದಿಷ್ಟು ತಲೆ ನೋವಾದರೆ, ಆಸ್ಪತ್ರೆಯ ದಾದಿಯ ಹಾಗೆ ತನ್ನ ಶುಶ್ರೂಷೆ ಮಾಡುತ್ತಾನೆ. ಸೀತಾರಾಮನ ಒಳ್ಳೆಯ ಗುಣವೇ ವಿನಾಯಕನ ಶತ್ರುವಾಗಿ ಪರಿಣಮಿಸಿತು. ನಿರ್ಗತಿಕನಾಗಿ ಬಂದ ಈ ಹುಡುಗನಲ್ಲಿ—ಅಶಿಕ್ಷಿತನಾಗಿ ಬಂದ ಈ ಪೋರನಲ್ಲಿ—ಏನಾದರೊಂದು ದೋಷವಿರಬಾರದಿತ್ತೆ? ಆತ ಮನಸ್ಸಿನಲ್ಲಿಯೇ ವ್ಯಸನಪಟ್ಟ.

ಇನ್ನು ಹೆಂಡತಿಯ ಕಡೆಗೆ ಅಭಿಯೋಗ ಮಾಡೋಣ—ಎಂದರೆ ಅವಳಲ್ಲಿರುವುದು ಪ್ರಾಯದ ದೋಷ ಮಾತ್ರ. ವಯಸ್ಸು ಮೂವತ್ತೈದು. ಈ ವಯಸ್ಸಿನಲ್ಲಿ ಪರಲೋಕದ ಕಡೆಗೆ ಮುಖ ತಿರುಗುವುದಿಲ್ಲ. ಲೋಕದ ಮುಂದೆ ಹಸಿಹಸಿಯಾಗಿ ಕಾಣುವ ಆಮಿಷಗಳನ್ನು ಕಚ್ಚಿ ತಿನ್ನಬೇಕೆಂದು ತವಕಪಡುವ ಪ್ರಾಯವದು. ಇತರ ವಿಷಯಗಳಲ್ಲಿ, ಎದ್ದು ಕಾಣುವಂತಹ ತಪ್ಪುಗಳೇನೂ ಇರಲಿಲ್ಲ. ಸೀತಾರಾಮನನ್ನು ಮಗ ಎಂದು ಸಂಬೋಧಿಸುತ್ತಾಳೆ. ಸಲಿಗೆಯಿಂದ ವ್ಯವಹರಿಸುತ್ತಾಳೆ. ಇದರಲ್ಲಿ ಸಂದೇಹಕ್ಕೆ ಎಡೆಯೇನೂ ಇಲ್ಲ; ಅಪರಾಧಕ್ಕೆ ಕಾರಣವೇನೂ ಇಲ್ಲ; ಎಂಬಂತೆ ಸ್ವಚ್ಛ ಮನಸ್ಸಿನಿಂದ ವ್ಯವಹರಿಸುತ್ತಾಳೆ. ತನ್ನ ವ್ಯವಹಾರವನ್ನು ಮುಚ್ಚಿಡುವುದಕ್ಕೂ ಪ್ರಯತ್ನಿಸುವುದಿಲ್ಲ. ಇದು ಕಪಟವಾಗಿರಬಹುದೆ? ಯಥಾರ್ಥವಾಗಿರಬಹುದೆ? ಒಂದು ಇನ್ನೊಂದರ ವೇಷವನ್ನು ತೊಟ್ಟು ವಿನಾಯಕನನ್ನು ಭ್ರಾಂತಿಗೊಳಿಸಿದುವೆ?

ಕೊನೆಗೆ—ಈಗ ಅನುಮಾನವನ್ನು ಮಾತ್ರ ಇಟ್ಟುಕೊಂಡರೆ ಸಾಕು—ಎಂದು ವಿನಾಯಕ ತೀರ್ಮಾನಿಸಿದ

* * * *

ವಿನಾಯಕ ಇನ್ನಷ್ಟು ಸೂಕ್ಷ್ಮವಾಗಿ ಮನೆಯೊಳಗಿನ ವಿದ್ಯಮಾ
ಗಳನ್ನು ಪರಿಕಿಸತೊಡಗಿದ. ಕೆಲ ಸಂಗತಿಗಳು, ಹೊಸ ಸಂಗತಿಗಳು
ತಿಳಿದುಬಂದುವು. ಹೊಸ ಶೋಧಗಳಾದುವು

ಸುಶೀಲೆ—ಸೀತಾರಾಮರು ನಗರ ಸಂಚಾರಕ್ಕೆ ಹೋಗುತ್ತಾರೆ
ಇಬ್ಬರಾಗಿ. ಹಗಲು ಹೊತ್ತು ಇಸ್ಪೀಟು ಆಡುವುದಿದೆ. ಮಳೆಗಾಲದ
ದಿನಗಳಲ್ಲಿ ಚೆನ್ನೆ ಆಡುವುದುಂಟು. ಸರಸವಾಗಿ ನಗುತ್ತಾ ಮುಖ
ಮುಖ ನೋಡಿಕೊಂಡು, ಕೈಗೆ ಕೈತಗಲಿಸಿಕೊಂಡು ಎಷ್ಟೋ ಗಂಟೆ ಆಟ
ದಲ್ಲಿ ಕಳೆಯುತ್ತಾರೆ. ಬೆಳಗ್ಗೆ ಎಲ್ಲರೂ ಏಳುವ ಮುಂಚೆ ಸೀತಾರಾಮ
ನನ್ನು ತನ್ನ ಹೆಂಡತಿಯೇ ಎಬ್ಬಿಸುತ್ತಾಳೆ. ತನ್ನ ಕೈಯಿಂದಲೆ ಕಾಫಿ
ಕೊಡುತ್ತಾಳೆ. ಅವನ ಒಣ ಬಟ್ಟೆಯನ್ನು ತಾನೇ ತೆಗೆದಿಡುತ್ತಾಳೆ. ಅವ
ನಿಗೆ ತಾನೇ ಬಡಿಸುತ್ತಾಳೆ. ತಲೆನೋವೆಂದು ಮಲಗಿದರೆ ತಾನೇ ಸ್ವಹಸ್ತ
ದಿಂದ ಹಣೆಗೆ ಲೇಪಹಚ್ಚುತ್ತಾಳೆ. ಈ ಮನೆಯ ಧನಿ ಯಾರು?
ತಾನೇ ಸೀತಾರಾಮನೆ? ಎನ್ನುವ ರೀತಿಯಿಂದ ಆತ ಪಾರುಪತ್ಯ
ಗಳನ್ನು ನಡೆಸುತ್ತಿದ್ದಾನೆ. ತನಗೆ ದೊರೆಯುವುದೆಂದರೆ ಎರಡು ಹೊತ್ತಿನ
ಫಲಾಹಾರ; ಊಟ; ಒಣ ಉಪಚಾರದ ಮಾತುಗಳು....ಜೀವನದ
ಪಕ್ವಫಲ ರಸವೆಂದು ಯಾವುದನ್ನು ಮನೆಯೊಳಗಿದ್ದು ಅನುಭವಿಸ
ಬಹುದೋ ಅದೆಲ್ಲ ಸೀತಾರಾಮನಿಗೆ....ತನಗೆ ಅದರ ಸಿಪ್ಪೆ ಮಾತ್ರ....
ಒಣಸಿಪ್ಪೆ....

ಸೀತಾರಾಮ–ಸುಶೀಲೆಯರ ವಿನೋದದ ಆಟಗಳನ್ನು ಕಂಡ
ಒಂದು ದಿನ ವಿನಾಯಕ ಒಗಟನ್ನು ಬಿಚ್ಚಬೇಕೆಂದು ದೃಢ ಪ್ರತಿಜ್ಞೆಮಾ
ಡಿದ. ಹಾಗೆ ಬಿಚ್ಚದಿರುವುದು ಪೌರುಷಕ್ಕೆ ಕುಂದಾಗಿ ತೋರಿತು. ಅಭಿ
ಮಾನಕ್ಕೆ ಭಂಗವಾಗಿ ತೋರಿತು. ತಾನು ಮೊಸೆ ಹೊತ್ತವನೆಂದು ಹೇಳಿ
ಕೊಳ್ಳುವ ಅಗ್ಗಳಿಕೆಗೆ ಅಪಮಾನವೆಂದು ತೋರಿತು. ಆ ರಾತ್ರಿ ಎಂದಿ
ಗಿಂತಲೂ ಬೇಗನೆ ಶಯ್ಯಾಗೃಹವನ್ನು ಪ್ರವೇಶಿಸಿದ. ಅರ್ಧ ಘಂಟೆಯ
ಅನಂತರ ಸುಶೀಲೆ ಬಂದು, ದೇವರು ತನಗೆ ಈ ಪ್ರಪಂಚದಲ್ಲಿ ಕರುಣಿ
ಸಿದ್ದ ಪತಿಪಾರ್ಶ್ವದ ಅಲ್ಪ ಸ್ಥಳವನ್ನು ಹುಡುಕಿದಳು. ದೈವವು ಇಷ್ಟಾ
ದರೂ ಅನುಗ್ರಹಿಸಿದೆ. ಪತಿಯ ನಡತೆ ದೂಷಿತವಾಗಿದ್ದರೂ ತನಗವನ

ಪಕ್ಕದಲ್ಲಿ ಒಂದು ಸ್ಥಾನವನ್ನು ನೇಮಿಸಿಕೊಟ್ಟಿದೆ-ಎಂಬ ಒಂದು ಬಗೆಯ ತೃಪ್ತಿಯಿತ್ತು ಅವಳ ಹೃದಯಲ್ಲಿ.

ಒಂದು ಗಳಿಗೆಯ ವರೆಗೆ ಸುಮ್ಮನೆ ಮಲಗಿದಳು. ಸಹಜ ಸ್ಥಿತಿಯಲ್ಲಿ ಈ ಮುಂಚೆ ಮೌನಭಂಗವಾಗಬೇಕಾಗಿತ್ತು. ಅರ್ಧ ಘಂಟೆಯಾದರೂ ಗೃಹಕೃತ್ಯ ವಿಚಾರದಲ್ಲಿ-ಸರಸಸಲ್ಲಾಪದಲ್ಲಿ ಕಳೆಯಬೇಕು. ಇಂದು ಒಂದಕ್ಕೊಂದು ಅಂಟಿಕೊಂಡಿದ್ದ ತುಟಿ ತೆರೆಯುವ ಹಾಗಿಲ್ಲ. ಗಂಡ ನಿದ್ದೆ ಹೋಗಿರಬಹುದೆ? ರಾತ್ರಿ ಹನ್ನೆರಡು ಘಂಟೆ ಹೊಡೆಯದೆ ನಿದ್ರೆಯಲ್ಲಿ ಮುಳುಗುವ ಮನಸ್ಸಲ್ಲವದು. ತನಗೆ ನಿದ್ರೆ ಬರಲಿಲ್ಲ; ಎಂಬುದನ್ನಾತ ಸುಶೀಲೆಗೆ ತಿಳಿಸುತ್ತಾನೆ. ಉಸ್ಸ್ ಎಂದು ಹಾಸಿಗೆಯಲ್ಲಿ ಹೊರಳುತ್ತಾನೆ. ನಿದ್ರೆಗೂ ಅವನಿಗೂ ಜಗಳವಾಗುತ್ತಿದೆ ಎಂಬುದು ಸ್ಪಷ್ಟ. ಮಾತಾಡುವುದಿಲ್ಲವಲ್ಲ; ತನ್ನಲ್ಲಿಯೂ ಜಗಳವೆ? ಎಂದು ಸುಶೀಲೆ ಅನುಮಾನ ಪಟ್ಟಳು. ಇತ್ತ ಹತ್ತೆಂಟು ದಿನಗಳಲ್ಲಿ ಗಂಡ ಹೆಂಡಿರೊಳಗೆ ನಡೆದಿರಬಹುದಾದ ಮಾತುಕತೆಗಳನ್ನು ಸ್ಮರಿಸಿಕೊಂಡಳು. ಒಂದರಲ್ಲಿಯೂ ವೈರಸ್ಯದ ಚಿಹ್ನೆಯಿಲ್ಲ; ಕೋಪದ ಜಾಡಿಲ್ಲ; ಈಗಿನದು ಕೋಪದ ಸ್ಥಿತಿ ಎನ್ನುವುದಕ್ಕೆ ಧೈರ್ಯವಿಲ್ಲ. ಇಷ್ಟು ಕಾಲದ ದಾಂಪತ್ಯ ಜೀವನದಲ್ಲಿ ಗಂಡನ ಕೋಪದ ಸ್ವರೂಪವೇನೆಂಬುದನ್ನು ಕಂಡಿಲ್ಲವಾದುದರಿಂದ ಏನು ಯೋಚಿಸುವುದಕ್ಕೂ ಅವಕಾಶವಿರಲಿಲ್ಲ: ಧೈರ್ಯವಿರಲಿಲ್ಲ ನೋಡೋಣ; ಪತಿಯು ಮೌನವನ್ನು ಭೇದಿಸುವುದಕ್ಕಾಗುವುದೇ? ಎಂದು ಕಂಕಣ ಝುಂಕಾರಮಾಡಿದಳು; ಕೆಮ್ಮಿದಳು; ಫಲವಿಲ್ಲ. ಕೊನೆಗೆ ನಳಿತೋಳುಗಳನ್ನು ಆತನ ಶರೀರದ ಮೇಲೆ ಪ್ರಸಾರಿಸಿದಳು. ಗಂಡನ ಮನಸ್ಸು ತನ್ನ ಕಡೆಗೆ ಎಚ್ಚತ್ತ ಹಾಗೆ ತೋರಲಿಲ್ಲ; ಶರೀರ ಹೊರಳುತ್ತಿದೆ. ಆದರೂ ಮಾತಾಡುವಂತಿಲ್ಲ.

ಇದು ಖಂಡಿತವಾಗಿಯೂ ಸಿಟ್ಟಿನ ಸನ್ನಾಹ; ಏನು ಬೇಕಾದರೂ ಆಗಲಿ; ಪ್ರಳಯ ಬಂದರೂ ಸರಿಯೆ; ಗಂಡನ ಬಳಿಯಲ್ಲಿ ತಾನೇ! ಎಂದು ದಿಟ್ಟತನದಿಂದ ಮುಖದ ಮೇಲೆ ಕೈಯಿಟ್ಟಳು. ಆತ ಉಸ್ಸೆಂದು ಹೊರಳಿ ಬಲ ಮಗ್ಗುಲಲ್ಲಿ ಮಲಗಿಕೊಂಡ. ಇದು ವರೆಗೆ ಎಡ ಮಗ್ಗುಲಲ್ಲಿದ್ದ ಸಿಟ್ಟು ಈಗ ಬಲ ಮಗ್ಗುಲಿಗೆ ತೊನೆಯಿತೆಂದಿಷ್ಟೆ ಆಕೆ ಭಾವಿಸಬೇಕಾಯಿತು.

ಆತ ಹೊರಳಿದಾಗ ಜಾರಿದ ಕೈ ತಲೆದಿಂಬನ್ನು ಆತುಕೊಂಡಿತು. ಏನಿದು? ದಿಂಬು ಒದ್ದೆಯಾಗಿದೆ. ಕಿಟಿಕಿಯಿಂದ ಇಣಿಕಿ ನೋಡುವ ಚಂದ್ರನ ಬೆಳಕಿನಲ್ಲಿ ಆತನ ಮುಖವನ್ನು ಪರಿಕಿಸಿದಳು. ಕಣ್ಣೀರು ತುಳುಕುತ್ತಿದ್ದಂತೆ ಭಾಸವಾಯಿತು. ಕಣ್ಣೀರು ವಿಚಿತ್ರವಾದ ಅತಿಥಿ ಯಿದು; ಇದು ವರೆಗೆ ಬಂದಿರದ ಆಗಂತುಕ. ಆಕೆಯ ನಾಡಿಯು ಮಿಡಿ ತವೆ ನಿಂತಂತಾಯಿತು

"ಇದೇನು?" ಎಂದಾಕೆ ಗದ್ಗದ ಕಂಠದಲ್ಲಿ ಪ್ರಶ್ನಿಸಿದಳು. ವಿನಾ ಯಕ ಇನ್ನೊಮ್ಮೆ ಮಗ್ಗುಲಿನಿಂದ ಮಗ್ಗುಲಿಗೆ ಹೊರಳಾಡಿದ; ಇದೇ ಆಕೆಯ ಪ್ರಶ್ನೆಗೆ ಉತ್ತರವಾಗಿತ್ತು.

"ಕ್ರೋಧವೇ?" ಎಂದಾಕೆ ಮತ್ತೂ ಕೇಳಿದಳು ಕಣ್ಣೀರು ತುಂಬಿ ದಳು. ನನ್ನ ಸಿಟ್ಟಿನಿಂದ ಯಾರಿಗೇನಾಗುತ್ತದೆ? ಎಂದು ವಿನಾಯಕನ ವ್ಯಂಗ್ಯೋಕ್ತಿ.

ಇನ್ನು ಸಂದೇಹಕ್ಕೆ ಎಡೆಯಿಲ್ಲ; ತಾನೇನೋ ತಪ್ಪಿಬಿದ್ದಿರಬೇಕು. ಗಂಡನಿಗೆ ಮೆಚ್ಚದ ಯಾವುದೋ ಒಂದು ತನ್ನಿಂದ ಆಗಿರಬೇಕು. ಎಂಬು ದು ಖಚಿತವಾಯಿತು. ಸುಶೀಲೆಯದು ಬಿಚ್ಚು ಮನಸ್ಸು. ಹೇಗಿದ್ದರೂ ಮಾತಿಗೆ ಮೊದಲಾಯಿತಲ್ಲವೆ? ಇದೂ ಇಲ್ಲದಿರುತ್ತಿದ್ದರೆ ತನ್ನ ದೋಷ ಹಣ್ಣಿನೊಳಗಿನ ಕ್ರಿಮಿಯಂತೆ ತನ್ನಲ್ಲಿಯೇ ಹುದುಗಿಕೊಳ್ಳುತ್ತಿತ್ತು. ಈಗ ಗಂಡನ ಬಾಯಿಯಿಂದ ಹೊರಬೀಳುವುದಲ್ಲವೆ? ಇದೇ ಸಂತೋಷ ವೆಂದು "ನನ್ನಲ್ಲಿ ಯಾವ ತಪ್ಪಿದ್ದರೂ ಹೇಳಬೇಕು; ಕ್ಷಮಿಸಬೇಕು" ಎಂದು ಕೈಮುಗಿದು ಅತ್ತಳು.

"ಯಾರಲ್ಲಿ ಈ ಆಟ? ನಾನೇನು ಕುರುಡನೇ?"

"ಹಾಗೆ ಯಾರೆಂದರು?"

"ನಾನು ಕುರುಡನಲ್ಲವೆಂದು ನೀನು ಭಾವಿಸಿದ್ದರೆ ಮನೆಯೊಳಗೆ ಹೀಗೆಲ್ಲ ನಡೆಯುತ್ತಿರಲಿಲ್ಲ?"

"ಹೇಗೆ?" ಎಂದು ಸುಶೀಲೆ ಧೈರ್ಯದಿಂದ ಕೇಳಿದಳು.

"ತಕ್ಕೆಂದರೆ ಇದೆ; ತಪ್ಪುಮಾಡಿ ಪರಿಶುದ್ಧತೆಯ ಭಾವಭಂಗಿ ಯನ್ನು ಪ್ರಕಟಿಸುವುದು."

"ಆ ತಪ್ಪೇನೆಂಬುದನ್ನು ಸ್ಪಷ್ಟವಾಗಿ ತಿಳಿಸಬಹುದಲ್ಲವೆ?"

"ತಿಳಿಸಬೇಕು; ಈ ಲಜ್ಜೆಯ ಮಾತು ನನ್ನ ನಾಲಗೆಯಿಂದ ಹೊರಡಬೇಕು; ನೀನು ಕಿವಿಯಿಂದ ಕೇಳಬೇಕು; ಅಲ್ಲವೇ?"

"ಲಜ್ಜೆಗೇಡು ಯಾವುದೆಂದು ತಿಳಿಯಲೇಬೇಕು"

"ಆ ವ್ಯಕ್ತಿ ಯಾರು?"

"ಯಾವ ವ್ಯಕ್ತಿ?"

"ನಿನ್ನ ಬೆನ್ನ ಹಿಂದೆ ಸುಳಿಯುವ ವ್ಯಕ್ತಿ."

"ಈ ವಿಷಯದಲ್ಲಿ ಸಂದೇಹವೆ?" ಎಂದಾಕೆ ಹಣೆ ಹಣೆ ಹೊಡೆದುಕೊಂಡಳು.

"ಸಂದೇಹವಿಲ್ಲ; ನಿಶ್ಚಯ. ನೀನು ಮಗನೆಂದು ಸಂಬೋಧಿಸುವ ಕಾರಣದಿಂದ ಅಪರಾಧ ನಿವಾರಣೆಯಾಗುವುದಿಲ್ಲ!"

ಸುಶೀಲೆಯ ತಲೆಯ ಮೇಲೆ ಸಿಡಿಲೆರಗಿದಂತಾಯಿತು. ಈ ಕುರಿತು ಸಂದೇಹವೆದ್ದರೆ ಅದನ್ನು ತೊಡೆಯುವುದು ಕಷ್ಟ. ಸಾವು ಬದುಕುಗಳ ಪ್ರಶ್ನೆಯಿದು ಬರಿಯ ಸಾವಿಗಾಕೆ ಹೆದರುತ್ತಿರಲಿಲ್ಲ. ಕುಲಟೆಯೆನ್ನಿಸಿಕೊಂಡು ಸಾಯುವುದಕ್ಕೆ ಒಲ್ಲಳು ತನ್ನ ಸ್ತ್ರೀತ್ವವನ್ನು ಧಿಕ್ಕರಿಸಿ ಆಡಿದ ಮಾತುಗಳಿಂದ ಆಕೆಗೊಮ್ಮೆ ಅಭಿಮಾನವೇರಿತು. ಇಂದಲ್ಲ ನಾಳೆ ಸಾಯಲೇ ಬೇಕಲ್ಲವೆ? ಹೆಣ್ತನದ ಅಭಿಮಾನವನ್ನು ಸುಟ್ಟು ಮಸಿಮಾಡಲೇಕೆ? ಆಕೆ ಧೈರ್ಯದಿಂದ "ಅವನೊಬ್ಬ ಅನಾಥ ಬಾಲಕ" ಎಂದು ಉತ್ತರ ಕೊಟ್ಟಳು.

"ನಮ್ಮ ಮನೆ ಅನಾಥಾಲಯವೆಂದು ಯಾರು ಹೇಳಿದರು?"

"ಆತನೇನೋ ಚಿಂದಿಯುಟ್ಟು ಬಾಗಿಲ ಮುಂದೆ ನಿಂತು ಭಿಕ್ಷೆ ಬೇಡಿದಾಗ ನನ್ನ ಎದೆ ಕರಗಿತು."

"ಲೋಕದಲ್ಲಿ ಅಲೆದಾಡುವ ನೂರಾರು ಬಿಕಾರಿಗಳಿದ್ದಾರೆ; ಅವರನ್ನು ಕಂಡಾಗ ದ್ರವಿಸದ ಎದೆ ಇವನನ್ನು ಕಂಡಾಗ ದ್ರವಿಸಿತಲ್ಲವೇ?"

"ಏಕೆ ದ್ರವಿಸಬಾರದು?"

"ಈ ವಿಷಯದಲ್ಲಿ ನನ್ನ ನಿನ್ನ ಅಭಿಪ್ರಾಯ ಒಂದೇ ಸುಶೀಲೆ.... ಏಕೆ ದ್ರವಿಸಬಾರದು? ಇವನನ್ನು ಕಂಡು ಮನಸ್ಸೇಕೆ ಮೆಚ್ಚಬಾರದು....

ಬಹುದು....ಖಂಡಿತವಾಗಿ" ಎನ್ನುತ್ತಾ ವಿನಾಯಕ ವಿಕಟವಾಗಿ ನಕ್ಕ.

ಸುಶೀಲೆ ಆಗಲೆ ಎದೆಯೊಡೆದು ಸಾಯಬೇಕಾಗಿತ್ತು. ಆದರೆ ಆಕೆಯ ಜೀವಕ್ಕೂ ಈ ಪ್ರಪಂಚಕ್ಕೂ ಏನೋ ಲೆಕ್ಕಾಚಾರ ಇನ್ನೂ ಬಾಕಿಯಿದ್ದಂತೆ ತೋರಿತು

"ನಾಳೆಯೇ ಆತನನ್ನು ಕಳುಹಿಸಿ ಬಿಡುತ್ತೇನೆ"

"ಏನೆಂದು?"

"ಕಾರಣ ಕೊಡದೆ"

"ಅಕಾರಣವಾಗಿ ಮನೆಯಲ್ಲಿಟ್ಟುಕೊಂಡಂತೆ ಅಕಾರಣವಾಗಿ ಹೊರಗೆ ದಬ್ಬಿಬಿಡುವೆಯಾ?"

"ಹೌದು;"

"ಇದರಲ್ಲಿ ಪುರುಷಾರ್ಥವೇನು? ಇದರಲ್ಲಿ ನಿನ್ನ ಸೌಜನ್ಯ ಹೇಗೆ ಪ್ರಕಟವಾಗುವುದು? ಕದ್ದ ಒಡವೆ ಸಿಕ್ಕಿದ ಮೇಲೆ ಕಳ್ಳ ಕಳವನ್ನು ಒಪ್ಪಿಕೊಂಡಂತಾಯಿತಲ್ಲವೆ?"

"ಕಳವೂ ಇಲ್ಲ; ಕದ್ದೊಡವೆಯೂ ಇಲ್ಲ; ಎಂಬುದನ್ನು ನಿನ್ನ ಕಣ್ಣಿನ ಮುಂದೆ ತೋರಿಸಿ ಕೊಡುತ್ತೇನೆ."

"ನನ್ನ ಕಣ್ಣುಗಳ ಮುಂದೆಯೊ? ಈ ಕಣ್ಣುಗಳು ಕುರುಡು ಕಣ್ಣುಗಳಲ್ಲವೆ? ಇಷ್ಟು ವರ್ಷ ಪರೆ ಅಡಸಿತಲ್ಲವೆ? ಬೇಡ....ಆತನನ್ನು ಹೊರ ಕಳುಹಿಸುವ ವಿಚಾರ ಬೇಡ....ಮನೆಯೊಳಗಿನ ಹೊಲಸನ್ನು ನಡುಬೀದಿಗೆ ಎಸೆಯುವುದು ಬೇಕಾಗಿಲ್ಲ....ನೀನಿನ್ನು ಕಳುಹಿಸು.... ಕಳುಹಿಸದಿರು ...ಬರುವ ಬಿರುದು ಬಂದೆ ಹೋಯಿತು"

"ಯಾವ ಬಿರುದು!"

"ಅದನ್ನೂ ಈ ಬಾಯಿಯಿಂದ ಆಡಬೇಕೆ ಸುಶೀಲೆ....ಈಗ ಜನ ಅನುಮಾನಪಟ್ಟಿರಬಹುದು. ಅಥವಾ ದೂರದಿಂದ ನೋಡಿ ಜುಗುಪ್ಸೆಯಿಂದ ಮುಖವನ್ನತ್ತ ಸರಿಸಿರಬಹುದು. ಇದು ವರೆಗೆ ನಿನ್ನ ದತ್ತಪುತ್ರನಾಗಿದ್ದವನನ್ನು ಆಕಸ್ಮಿಕವಾಗಿ ಹೊರ ಕಳುಹಿಸಿದರೆ, ಸಂದೇಹಪಟ್ಟವರೂ ಕನಿಕರಪಟ್ಟವರೂ ಒಂದಾಗಿ ತಂತಮ್ಮ ಅನುಮಾನಗಳನ್ನು ಸತ್ಯನೆಂದು ಒಪ್ಪುವಂತಾಗುವುದಲ್ಲವೆ?"

"ಜನರಾಡುವ ಮಾತಿಗೆ ಮೂರು ಕಾಸಿನ ಬೆಲೆಕೊಡಲಾರೆ; ನಿಮ್ಮ ಹೃದಯವು ಸಂದೇಹದ ಸಂಕಟದಿಂದ ಹೊರಗಾಗದಿದ್ದರೆ ನಾನು ಬದುಕಿ ಫಲವೇನು?"

"ಬದುಕಿಗೆ ಬದುಕೇ ಫಲ; ಬೇರೆ ಫಲವಿಲ್ಲ; ನಾಯಿಯೂ ಬದುಕುತ್ತದೆ; ಯೋಗಿಯೂ ಬದುಕುತ್ತಾನೆ... ಉಣ್ಣಿ ಹಸುವಿನ ಮೈಯನ್ನು ಅಂಟಿಕೊಳ್ಳುವಂತೆ ಜೀವವು ಬದುಕಿಗೆ ಅಂಟಿಕೊಳ್ಳುತ್ತದೆ ಸುಶೀಲಾ" ಎಂದು ಕಣ್ಣಿನಿಂದ ಕೆಂಡಗಳನ್ನು ಕಾರುತ್ತಾ ವಿನಾಯಕ ವಾಗ್ಧಾಟಿಯನ್ನು ಹೆಚ್ಚಿಸಿದ.

"ಮೂರು ದಿನ ಅವಕಾಶ ಕೊಡಬೇಕು." ಎಂದಳು ಸುಶೀಲೆ....

"ದಿನ ಮೂರಲ್ಲ. ನಿನ್ನ ಮತ್ತು ನಿನ್ನ ಮಗನ ಮುಂದೆ ಸುಖ ಸಮೃದ್ಧವಾದ ಇಡೀ ಬಾಳು ಇದೆ"

"ಬಾಳಿಗೆ ಬೆಂಕಿಹಾಕಿತು. ಮೂರು ದಿನಗಳಲ್ಲಿ ಸಂದೇಹ ಪರಿಹಾರವಾಗುವುದು. ಮತ್ತೆ ಬದುಕಿದುದೇ ಹೆಚ್ಚಾಯಿತೆಂದು ಲೋಕಯಾತ್ರೆಯನ್ನು ನಿಲ್ಲಿಸಿಬಿಡುತ್ತೇನೆ"

"ಮೂರು ದಿನಗಳ ಅನಂತರ ಬರುವ ಶುಭವಾರ್ತೆ ಇಂದೇ ಏಕೆ ಬರಬಾರದು? ಮುಹೂರ್ತ ನೋಡಬೇಕಾಗಿರುವುದೇ?"

"ನೋಡ ಬೇಕಾಗಿದೆ!"

"ಪಲಾಯನ ಮಾಡುವುದಕ್ಕೆ?"

ಸುಶೀಲೆಗೆ ಈ ಮಾತು ಅಸಹ್ಯವಾಯಿತು ಅವಳ ಕಣ್ಣಿನಿಂದ, ಮುಖದಿಂದ, ಉಸಿರಿನಿಂದ, ಅಂಗಭಂಗಿಗಳಿಂದ, ಇಂತಹ ಜ್ವಾಲೆ ಹೊರಡಬಹುದೆಂದು ವಿನಾಯಕನೂ ಇದು ವರೆಗೆ ಭಾವಿಸಿರಲಿಲ್ಲ. ಧೈರ್ಯದಿಂದ "ಇಂತಹ ಹೇಯ ವಾಕ್ಯಗಳನ್ನಾಡುವಾಗ ಜಾಗ್ರತೆ ಇರಲಿ!" ಎಂದಳು.

ಜಾಗ್ರತೆ ಎಂಬ ಮಾತಿಗೆ ಅರ್ಥವೇ ಇಲ್ಲ. ಅಬಲೆಯಾದ ಸುಶೀಲೆಗೆ ಜಾಗ್ರತೆಕೊಡುವ ಅಧಿಕಾರವೆಲ್ಲಿ? ವಿನಾಯಕನು ಈ ಜಾಗ್ರತೆಯನ್ನು ಕೇಳಬೇಕೆಂಬ ಶಾಸನವೆಲ್ಲಿ? ತನ್ನ ಅಭಿಮಾನಕ್ಕೆ ವಧೆಯಾದ ಉದ್ವೇಗದಿಂದ ಏನೋ ಆಡಿದಳು ಸುಶೀಲೆ....ಮಾತಿನಲ್ಲಿ

ಹೊರಡಬಹುದಾದ ಅಭಿಪ್ರಾಯ ಜಾಗ್ರತೆ ಎಂಬ ಪದದಲ್ಲಿ ಹೊರಟಿತು. ಮಾತಿನಿಂದ ಹೊಮ್ಮಲಾರದುದು ನಡುಗುವ ಶರೀರದಲ್ಲಿ, ಸಿಡಿಯುವ ನೋಟಗಳಲ್ಲಿ ಸೂಸಿತು. ಇದು ವರೆಗಿನ ವಿನಯವೇಷ ಹೋಗಿ ಆಕೆ ಈಗ ಉದ್ಧತ ಮೂರ್ತಿಯಾಗಿದ್ದಾಳೆ.

ಅಪರಾಧವ ತುಬ್ಬಾಯಿತು. ಬೇರೆ ಸಾಕ್ಷ್ಯಬೇಕಾಗಿರಲಿಲ್ಲ. ವಿನಾಯಕರಾಯನು ಮಿಂಚಿನ ವೇಗದಿಂದ ಹಾರಿ ಸುಶೀಲೆಗೆ ಬಲವಾಗಿ ಒದೆದ. ಒದೆದು ಕೋಣೆಯಿಂದ ಹೊರಗೆ ಹಾರಿ ಹೋದ.

ಸುಶೀಲೆಯ ಶರೀರವೂ ಹೆಣ್ತನದ ಹೆಮ್ಮೆಯೂ ನೆಲದ ಮೇಲೆ ಬಿದ್ದು ಹೊರಳಾಡುತ್ತಿದ್ದುವು.

* * *

ಮರುದಿನ ಮುಂಜಾನೆ ಎದ್ದು ಸೀತಾರಾಮ ಅಮ್ಮನ ನಾಮಸ್ಮರಣೆ ಮಾಡಿದ. ಅಮ್ಮನಿಗದು ಕೇಳಿಸಲಿಲ್ಲ. ಅಡಿಗೆ ಮನೆಗೆ ನುಗ್ಗಿ ಭಟ್ಟನನ್ನು ವಿಚಾರಿಸಲಾಗಿ, "ಅವರು ಏಳಲಿಲ್ಲ ಎಂದು ತೋರುತ್ತದೆ" ಎಂದ. ಮಲಗುವ ಕೋಣೆಯಲ್ಲಿ ಯಾರೂ ಇರಲಿಲ್ಲ. ಹೃಷ್ಟಪುಷ್ಟ ಶರೀರ ಹೃದಯಸ್ತಂಭನದಿಂದ ಪಕ್ಕನೆ ನಿರ್ಜೀವವಾಗುವಂತೆ ನಿನ್ನೆ ಜೀವಕಳೆಯಿಂದ ತುಂಬಿ ತುಳುಕುತ್ತಿದ್ದ ಕೋಣೆ ಇಂದು ಶೂನ್ಯವಾಗಿದೆ. ಸೀತಾರಾಮ ಪ್ರತಿಯೊಂದು ಕೋಣೆಯ ಮೂಲೆ ಮುಡುಗಳನ್ನು ಹುಡುಕಿದ. 'ಅಮ್ಮ! ಎಂಬ ಕೂಗಿಗೆ ಉತ್ತರವಿಲ್ಲ. ತಾನು ಅಮ್ಮನೆಂಬ ಶಬ್ದವನ್ನುಚ್ಚರಿಸುವುದು ದೇವರಿಗೆ ಸಮ್ಮತವಾಗಿಲ್ಲವೆಂದು ತೋರುತ್ತದೆ—ಎಂದು ಕಣ್ಣಿನಲ್ಲಿ ನೀರು ತುಂಬಿಸಿದ.

ಯಜಮಾನಿ ಕಾಣೆ ಎಂಬ ಸಮಾಚಾರ ಅಡಿಗೆಯವನಿಗೆ ತಿಳಿಯಿತು. "ಸೀತಾರಾಮ! ನಮ್ಮ ಒಡೆಯರು ಸದಾಡೇರೆ ಹೊಡೆಯುವ ಮನೆಗೆ ಹೋಗಿಬರುತ್ತೇನೆ. ಅದು ವರೆಗೆ ನಿಂತಿರು" ಎಂದು ಹೇಳಿ ಅರ್ಧ ಗಂಟೆಯೊಳಗೆ ವಿನಾಯಕರಾಯನ ಸಮೇತ ಬಂದುದಾಯಿತು. "ಯಜಮಾನಿ ಕಾಣೆ" ಎನ್ನುವ ಭಟ್ಟನ ಮಾತನ್ನು ಕೇಳಿದಾಗ ವಿನಾಯಕನಿಗೆ ಅಪಾರ್ಥವಾಗಿದ್ದಿರಬೇಕು; ಅವಳೊಂದಿಗೆ ಸೀತಾರಾಮನೂ ಮಾಯವಾಗಿದ್ದಿರಬೇಕು; ಹೇಳುವುದಕ್ಕೀತ ಹೇಸುತ್ತಾನೆ ಎಂದು ಭಾವಿಸಿದ್ದಿರಬೇಕು. ಆದುದರಿಂದ ಸೀತಾರಾಮನನ್ನು ಕಂಡು ಸ್ವಲ್ಪ ವಿಸ್ಮಯವಾಯಿತು.

ಇವರು ಪರಸ್ಪರವಾಗಿ ಏನೂ ಹೇಳಲಿಲ್ಲ. ಮನೆ ಹಿತ್ತಿಲುಗಳನ್ನು ಮತ್ತೊಮ್ಮೆ ಹುಡುಕಿದುದಾಯಿತು. ಸೀತಾರಾಮನ ಅಳುಮೊಗವನ್ನು ಕಂಡಾಗ ವಿನಾಯಕನ ಹೃದಯದಲ್ಲಿ ಏನಾಯಿತೋ ಹೇಳಬರುವುದಿಲ್ಲ. ಆದರೂ ಅದರಲ್ಲಿ ಕಪಟ ವ್ಯಸನದ ಛಾಯೆ ಗೋಚರಿಸಲಿಲ್ಲ. ಹತ್ತು ಬಾರಿ ಆತನ ಮುಖವನ್ನು ಬಿರುನೋಟದಿಂದ ನೋಡಿದ. ಹೃದಯಕ್ಕೆ ಇಕ್ಕುಳಹಾಕುವಂತೆ ನೋಡಿದ; ಹೆಕ್ಕುವುದಕ್ಕೇನೂ ದೊರೆಯಲಿಲ್ಲ. ಅವನ ಮುಖವು ಅವಿಕೃತವಾಗಿಯೇ ಇತ್ತು.

ಆಗ ಅಡಿಗೆಯವನು "ದಾರಂದದ ಮೇಲೆ ಈ ಪತ್ರವಿತ್ತು"–ಎಂದು ಸುಶೀಲೆಯ ಕೈಬರಹದ ಕಾಗದವನ್ನಿತ್ತ. ವಿನಾಯಕರಾಯನ ಮುಖ ಕತ್ತಲಿಸಿತು. ಓದುತ್ತಿದ್ದಂತೆ ಕಣ್ಣು ಊದಿತು; ಕಣ್ಣೀರು ತೊಟ್ಟಿಕ್ಕುತ್ತಾ ಪತ್ರದ ಅಕ್ಷರಗಳನ್ನು ಒರಸಿರಬಹುದು.

ನನ್ನ ಇಹಲೋಕದ ಸ್ವಾಮಿ!

ನಮ್ಮ ದಾಂಪತ್ಯ ಜೀವನಕ್ಕೆ ಇಂದಿಗೆ ಇಪ್ಪತ್ತು ವರ್ಷಗಳಾದುವು. ಸೀತಾರಾಮನು ಮನೆಯೊಳಗೆ ಕಾಲಿಡುವ ವರೆಗೆ ನಮ್ಮಿಬ್ಬರ ಜೀವನಗಳು ಒಂದೆ ತೊಟ್ಟಿನ ಎರಡು ಮೊಗ್ಗೆಗಳಂತೆ ಕಂಪು ಬೀರುತ್ತಿದ್ದುವೆಂದು ಖಂಡಿತವಾಗಿ ಹೇಳಬಲ್ಲೆ.

ನಿನ್ನೆ ರಾತ್ರಿ ನಾನೂ ಸೀತಾರಾಮನೂ ಒಟ್ಟಿಗೆ ಪಲಾಯನ ಮಾಡಬಹುದೆಂಬ ಸೂಚನೆ ಕೊಟ್ಟಿರಿ. ಅವನ ವಯಸ್ಸು ಹದಿನೆಂಟು ಮಾತ್ರ; ನನ್ನದು ಮೂವತ್ತೈದು. ಈ ವಯಸ್ಸಿನಲ್ಲಿ ಹೆಂಗುಸರ ಕೆನ್ನೆ ಅಡಸಿ ಹೋಗುತ್ತದೆ. ನಮ್ಮ ದೇಶದ ಹೆಮ್ಮಕ್ಕಳು ಮೂವತ್ತೈದರಲ್ಲಿ ಮುದುಕಿಯರೆನಿಸಿಕೊಳ್ಳಲು ಅರ್ಹರಾಗುತ್ತಾರೆ. ಮುದುಕಿಯ ಹಜ್ಜೆ ಮಸಣಕ್ಕೆ. ಪಾಪ! ಆ ಹಸುಗೂಸು ಇನ್ನೂ ಜೀವನದ ಸೋಜಿಗವೇನೆಂಬುದನ್ನು ಕಂಡಿಲ್ಲ. ನಾನೂ ಅವನೂ ಒಟ್ಟಿಗೆ ಪಲಾಯನ ಮಾಡಿದರೆ ಎಷ್ಟು ದೂರ ಎಲ್ಲಿಯ ವರೆಗೆ ಹೋಗಬಹುದು?

ನಿಮಗೆ ಸಂದೇಹ ಬರಬೇಕಾದುದು ನಿಜ. ಸಂದೇಹವಿಲ್ಲದಿರುತ್ತಿದ್ದರೆ ನೀವು ಲೋಕಾತೀತ ವ್ಯಕ್ತಿಗಳಾಗುತ್ತಿದ್ದಿರಿ. ಹದಿನೆಂಟು ವರ್ಷದ ಹುಡುಗ ಮೂವತ್ತೈದು ವರ್ಷದ ಮಾನಿನಿಯೊಂದಿಗೆ ಕೂಡಿ ಬಾಳಿರುವುದೆಂದರೇನು? ಅನ್ಯಾಯವಲ್ಲವೆ? ಹನ್ನೆರಡು ವರ್ಷವಾದ ಮೇಲೆ ಮಗನನ್ನೆ ಪರಪುರುಷನೆಂದು ಭಾವಿಸಬೇಕು. ಇದೇ ನಾವು ಕಲಿತ ಪಾಠ.

ಕಲಿತಿದ್ದರೂ ಮರೆತೆ. ಪ್ರಾಪಂಚಿಕ ಸುಖವಾಸನೆಗಳು ಮುಟ್ಟದ ಪ್ರಾಯ ಇದಲ್ಲ; ಹೀಗಿರುತ್ತಾ ನಾನೇಕೆ ಸೀತಾರಾಮನಲ್ಲಿ ಸಲಿಗೆಯಿಂದ ವರ್ತಿಸ ಬೇಕಾಗಿದ್ದಿತು? ನಿಮ್ಮ ತರ್ಕ ಸರಿ; ನನ್ನದು ತಪ್ಪು. ಲೋಕದ ಮನೋ ವೃತ್ತಿಯನ್ನು ಚೆನ್ನಾಗಿ ತಿಳಿದವರು ನೀವು; ತಿಳಿಯದವಳು ನಾನು.

ಹುಡುಗನು ಯಾರೆಂದು ನಾನು ಹೇಳಿರಲಿಲ್ಲ. ಒಂದೆರಡು ಬಾರಿ ನೀವು ಪ್ರಶ್ನಿಸಿದ್ದಾಗ ನಾನು ಮೇಲಿಂದ ಮೇಲೆ ಏನೋ ಹೇಳಿದೆ. ನಿಮಗೆ ನಂಬಿಕೆಯಾದಂತೆ ತೋರಿತು. ನಾನು ಅಂದೇ ತಿಳಿಸಬೇಕಾಗಿತ್ತು; 'ಮಗ' ಎಂಬ ಮಾತಿನಿಂದ ಆಗಬೇಕಾದ ಅರ್ಥವೆಲ್ಲ ಆದೀತೆಂದು ಭಾವಿಸಿ ಅಪ ರಾಧ ಮಾಡಿದೆ. ಆ ಎರಡಕ್ಷರಗಳಲ್ಲಿ ಏನೂ ಇಲ್ಲ. ಅನ್ಯರ ಕರುಳನ್ನು ಆ ಅಕ್ಷರಗಳಲ್ಲಿ ಸಂಬೋಧಿಸುವಾಗ ಅದಕ್ಕೆ ಕಪಟದ ಛಾಯೆ ಬೀಳು ತ್ತದೆ; ಅದರಲ್ಲಿಯೂ ಹದಿನೆಂಟು ವಯಸ್ಸಿನವನನ್ನು ಮಗನೆಂದು ಕರೆವ ಹಕ್ಕು ಈ ಬಡ ಹೆಣ್ಣಿಗೆ ಹೇಗೆ ದೊರೆಯಬೇಕು? ಇಪ್ಪ ವರ್ಷಗಳ ಹಿಂದೆ ನನ್ನ ಕರುಳಿನಲ್ಲಿಯೇ ಅರಳಿದ ಆ ಮುದ್ದು ಕಂದನು ಇಂದು ನಮ್ಮ ಕಣ್ಣಮುಂದೆ ಇರುತ್ತಿದ್ದರೆ, ಆತನನ್ನು ನಾನು ಮಗನೆಂದು ಸಂಬೋ ಧಿಸಿದ್ದರೆ ನೀವೂ ಆಕ್ಷೇಪಿಸುತ್ತಿರಲಿಲ್ಲ; ಲೋಕವೂ ಆಕ್ಷೇಪಿಸುತ್ತಿರಲಿಲ್ಲ.

ಹಾಗಾದರೆ ಈ ಹೊಸ ಮಗನಾರೆಂದು ಹೇಳಬೇಡವೆ? ಇವನು ನನ್ನಂತೆಯೆ ಹೆಣ್ಣಾದ ನನ್ನಕ್ಕನ ಮಗ....ಆದರೆ ನನ್ನಂತೆ ಇಷ್ಟಾದರೂ ದೈವಾನುಕೂಲವಿಲ್ಲದವಳು. ತನ್ನ ಹೊಟ್ಟೆಯಲ್ಲಿ ಹುಟ್ಟಿದಾತನನ್ನು ಎದೆಗಪ್ಪಿಕೊಂಡು ಇವನು ತನ್ನ ಸರ್ವಸ್ವವೆಂದು, ತನ್ನ ಪ್ರಾಣ ತಂತು ವೆಂದು, ಲೋಕದ ಮುಂದೆ ತೋರಿಸಿ ಹೆಮ್ಮೆಪಡುವ ಸ್ಥಿತಿಯಲ್ಲಿ ಅವಳು ಇರಲಿಲ್ಲ. ಹೀಗೇಕೆ ಆಗಬೇಕಾಗಿದ್ದಿತೆಂಬುದನ್ನು ನನ್ನಲ್ಲಿ ಕೇಳ ಬೇಡಿ. ಶಾಸ್ತ್ರಗಳನ್ನು ಕೇಳಿ; ಸಂಪ್ರದಾಯವನ್ನು ಕೇಳಿ; ಹೀಗಾಗುವ ಪರಿಸ್ಥಿತಿ ಏತರಿಂದ ಬರುತ್ತದೆ ಎಂಬುದನ್ನು ಆಚಾರ ನಿಷ್ಠರಿಂದ ತಿಳಿದು ಕೊಳ್ಳಿ. ಈ ದೋಷದ ಬುಡವನ್ನು ಹುಡುಕಿ ಇದು ದೋಷವಾದರೆ, ಹೀಗಾಗುವುದು ಅಸಂಭಾವ್ಯವೆ? ನೋಡಿ; ವಿಚಾರಿಸಿರಿ; ನಾವೇನೂ ಕಲ್ಲುಗಳಲ್ಲ; ನಮ್ಮ ಆತ್ಮವು ಮರದ ಕೊರಡು ಅಲ್ಲ. ಇದು ಸಮಾಜ ನಿಯಮ ಎಂದು ತೆಪ್ಪಗೆ ಕುಳಿತಿರುವುದು ಸುಲಭ. ನಿಯಮವನ್ನು ಮಾಡಿದವರಾರು? ಮನುಷ್ಯರಿಗಾಗಿ ನಿಯಮವೆ? ನಿಯಮಕ್ಕಾಗಿ ಮನುಷ್ಯರೆ? ಎಂದು ವಿಚಾರಿಸಿ ಸಿದ್ಧಾಂತಕ್ಕೆ ಬಂದು, ಧೈರ್ಯದಿಂದ

ಹೆಜ್ಜೆಯಿಡುವುದು ಅಷ್ಟೇನೂ ಸುಲಭವಲ್ಲ. ಈ ದುಸ್ಕರ ಕಾರ್ಯ ವನ್ನು ಮಾಡಲಾರದಿದ್ದ ಬಡ ಹೆಣ್ಣು ನನ್ನ ಅಕ್ಕನೆಂದರೆ! ಅವಳು ಜೀವಂತಳಾಗಿದ್ದುದು ಅಪರಾಧವಾಯಿತು. ಅವಳು ಸತ್ತಿದ್ದರೆ ಬದುಕಿದೆವು ಎಂದು ಅವಳ ಬಂಧುಬಳಗಗಳು ತೃಪ್ತಿಯಿಂದ ಬಾಳಬಹು ದಿತ್ತು. ಅವಳು ಸತ್ತು ಬಂಧು ವರ್ಗಕ್ಕೆ ಸುಖಕೊಡಲಿಲ್ಲ. ಇದೇ ಅವಳ ಅಪರಾಧವಾಯಿತು. ಅವಳೇನೂ ಮಾಡಿದ್ದರೂ ಈ ಮಗು ವೇನೂ ಮಾಡಲಿಲ್ಲ-ಎಂದು ಭಾವಿಸಿಕೊಂಡೆ ದಿಕ್ಕು ದೆಸೆಗಳು ಶೂನ್ಯ ವಾದ ಈ ಪ್ರಪಂಚಕ್ಕೆ ಚಿಕ್ಕ ಕೂಸನ್ನು ಇಳಿಸಿದ ದೈವವನ್ನು ಶಪಿಸಿ ಹೆದ್ದಾರಿಯಲ್ಲಿ ಬಿಸುಡುವುದು ಸುಲಭವಾಗಿತ್ತು. ಅದಕ್ಕೆ ಸಮಾಜವೂ ಬೇಷ್ ಭಲೆಗಳ ಪ್ರಶಂಸೆಯನ್ನು ಸುರಿಸಬಹುದಾಗಿತ್ತು!

ನನ್ನನ್ನು ಎಲ್ಲಿಯೂ ಹುಡುಕಿಸ ಬೇಕಾಗಿಲ್ಲ. ಅದಾದರೂ ಹೇಗೆ ಸಾಧ್ಯ? ಇನ್ನುಮುಂದೆ ಈ ಪ್ರಪಂಚದ ದೃಷ್ಟಿಗೆ ಬೀಳುವವಳು ನಾನಲ್ಲ. ಮೊದಲೆ ಎಲ್ಲವನ್ನೂ ನಿಮಗೆ ತಿಳಿಸಬಹುದಾಗಿತ್ತು ಆಧೈರ್ಯ ಬಿಡ ಲಿಲ್ಲ. ಮುಚ್ಚುಮರೆ ಮಾಡಿದೆ. ಅದರ ಫಲವೇ ಇದು. ಆತನೊಬ್ಬನ ವಿಷಯದಲ್ಲಿ ಸಂದೇಹ ಬರುತ್ತಿದ್ದರೆ ಅದನ್ನು ನಿವಾರಿಸ ಬಹುದಾಗಿತ್ತು. ನನ್ನ ನಡತೆಯನ್ನು ಶಂಕಿಸಿದಿರಲ್ಲ? ಅಲ್ಲ; ಶಂಕೆಯಲ್ಲ. ನಿಮಗೆ ನಿಶ್ಚ ಯವೇ ಇತ್ತು. ನಾನು ಕುಲಟೆಯೆಂಬುದರಲ್ಲಿ ನಿಮಗೆ ನಂಬಿಕೆಯೇ ಇತ್ತು. ಇಂದಿನ ಕಾಲದಲ್ಲಿ ಅಗ್ನಿ ಪರೀಕ್ಷೆಗಳಲ್ಲಿ ಬದುಕಿ ಬರುವವ ರಿಲ್ಲ. ಪಾರ್ಥಿವ ಶರೀರವನ್ನು ಸುಡದೆ ಬಿಡುವ ಬೆಂಕಿ ಇಂದೆಲ್ಲಿದೆ? ಮಾನವ ಹೃದಯಕ್ಕಿಲ್ಲದ ತಂಪು ಬೆಂಕಿಗೆ ಎಲ್ಲಿ? ಒಂದು ವೇಳೆ ಅಗ್ನಿ ಪರೀಕ್ಷೆಯಾಗಿದ್ದರೆ ಆ ಅಗ್ನಿಯಲ್ಲಿ ಬಿದ್ದು ಸುಡದೆ ಎದ್ದು ಬಂದಿದ್ದರೆ, ಆ ಅಗ್ನಿಯೂ ಮಾಯಕದ ಅಗ್ನಿಯೆಂದು ಲೋಕವು ಜರೆದಾಡಬಹುದಾ ಗಿತ್ತು. ಕಾಣುವುದೆಲ್ಲ ಕಣ್ಣುಕಟ್ಟು, ಇಂದ್ರಜಾಲ, ಎಂಬ ವಿಶ್ವಾಸ ಸಮಾಜಕ್ಕಿರುತ್ತಾ. ನನ್ನ ಶುದ್ಧತೆಯನ್ನು ಪ್ರಮಾಣೀಕರಿಸಲು ಯಾವ ಉಪಾಯವಿರುತ್ತಿತ್ತು? ನೀವೇ ಹೇಳಿರಿ.

ಇಂತಹ ವಿಷಯಗಳಲ್ಲಿ ಪರಮಾತ್ಮನ ಸಾಕ್ಷ್ಯ ಪ್ರಯೋಜನಕ್ಕೆ ಬೀಳುವುದಿಲ್ಲ. ಮೊದಲು ಅವನಾರೆಂದು ಹುಡುಕಬೇಕಾಗುತ್ತದೆ. ಅವನ ಬೆಳಕು ಆತ್ಮದ ಅಂಧಕಾರದಲ್ಲಿ ಒಂದಿಷ್ಟಾದರೂ ಬೆಳಕಾಗಿಸು

ವುದೋ ನೋಡಬೇಕಾಗುತ್ತದೆ. ಆತ್ಮಪ್ರಕಾಶವು ಇಲ್ಲದ ಕಾ
ಅವನೂ ಇಲ್ಲ.

ಯಾರಲ್ಲಾದರೂ ಕೇಳಬೇಕಾಗಿದ್ದರೆ ನಿಮ್ಮ ಪರಿಚಿತೆ ವಿ
ಕ್ಷಿಯಲ್ಲಿ ಕೇಳಿ. ಆಕೆಗೆ ಸಕಲವೂ ಗೊತ್ತಿರಬೇಕು ಅವಳು
ತಿಳಿಸಿರಬಹುದೆಂದು ಇದು ವರೆಗೆ ಭಾವಿಸಿದ್ದೆ. ತಿಳಿಸಲಿಲ್ಲ
ಈಗ ತಿಳಿಯಿತು. ಆಚಾರ ಭ್ರಷ್ಟೆಯೆಂಬ ಆರೋಪಣೆಯನ್ನು
ಬಾಯಿಗಳಿಂದಲೇ ಕೇಳಿ ಬದುಕಬೇಕೆಂದಿಲ್ಲ. ಬದುಕುವ ಆಸೆಯ
ತಾನೆ ಅವಳ ಪ್ರಮಾಣ ಪತ್ರ. ನಿಮ್ಮ ಮನಸ್ಸಮಾಧಾನ ಆಗ
ದ್ದರೆ ಅದಕ್ಕೊಂದು ದಾರಿಯನ್ನು ಸೂಚಿಸಿದೆನಷ್ಟೆ.

ಕಣ್ಣೀರಿನಿಂದ ಒದ್ದೆಯಾಗಿದ್ದರೂ ಒಂದು ವಿಧದ ನಯನಾ
ನಿಂದ ನಡೆದುಬಂದ ಇಪ್ಪತ್ತು ವರ್ಷದ ದಾಂಪತ್ಯ ಜೀವನವನ್ನು
ಸುವಾಗ ಕರಗುವ ಎದೆ ಇಲ್ಲದಾಗುವ ಮುಂಚೆ ನಾನೇ ಅಂತಥ
ಹೊಂದುತ್ತೇನೆ—ಎಂದು ಸಂಕಲ್ಪಿಸಿದೆ. ಇದು ತಪ್ಪೆ? ಒಂದು
ತಪ್ಪಾಗಿದ್ದರೆ ಕ್ಷಮೆಯಿರಲಿ.

ಇಂತಿ

ಸುಶೀ

ವಿನಾಯಕ ಕಣ್ಣೀರ ಸುರಿಮಳೆ ಸುರಿಸಿ ಆ ಪತ್ರವನ್ನು ಎ
ಮೇಲೆ ಒತ್ತಿಕೊಂಡ; ಹತ್ತು ಬಾರಿ ಮುತ್ತಿಟ್ಟ. ಸೀತಾರಾಮನ
ಮುಖ ತಿರುಗಿಸಿ—"ಸೀತಾರಾಮ! ನಿನಗೆ ಇನ್ನೆಲ್ಲಿ ಅಮ್ಮ?" ಎ
ಉಚ್ಚಧ್ವನಿಯಲ್ಲಿ ರೋದಿಸತೊಡಗಿದ. ಸೀತಾರಾಮನಿಗೆ ಎಲ್ಲವೂ
ತ್ರವಾಗಿ ತೋರಿತು ನಾನಿಲ್ಲಿಗೆ ಬಂದುದು, ಇಷ್ಟು ವರ್ಷ ಮನೆಮ
ಯಾಗಿ ಬಾಳಿದುದು, ಮಗನಾಗಿ ವಾಸಿಸಿದುದು, ಎಲ್ಲವೂ ಸೋಜ
ಅವನು ಒಳಮನೆಗೆ ಹೋಗಿ ನೆಲದಲ್ಲಿ ಬಿದ್ದು ಹೊರಳಿ ಅತ್ತ.

ಮತ್ತೆ ಹದಿನೈದು ದಿವಸಗಳಲ್ಲಿ ತನ್ನ ಆಸ್ತಿಪಾಸ್ತಿ ಮನೆಮಾ
ಗಳನ್ನೆಲ್ಲ ಸೀತಾರಾಮನ ವಶಕ್ಕೆ ಕೊಟ್ಟು, ತನ್ನ ಸೊತ್ತಾದ ಸುಶೀಲೆ
ಪತ್ರವೊಂದನ್ನೆ ಇಟ್ಟುಕೊಂಡು, ತೀರ್ಥಯಾತ್ರೆಯ ನೆವದಿಂದ ಊ
ಬಿಟ್ಟ ವಿನಾಯಕ ಹಿಂದೆ ಬಂದುದರ ಸುದ್ದಿಯನ್ನು ಕೇಳಿದವರಿಲ್ಲ.

೨೮—೧--೧೯೩

ವಸಂತ ಮಾಲಿಕೆ

ವರ್ಷ ಒಂದಕ್ಕೆ 300 ಪುಟಗಳಷ್ಟು ಲಲಿತ ಸಾಹಿತ್ಯ,
ಎರಡು ಅಥವಾ ಮೂರು ಪುಸ್ತಕಗಳಲ್ಲಿ.

ವರ್ಷಕ್ಕೆ ಚಂದಾಹಣ

ಅಂಚೆವೆಚ್ಚ ಸಹಿತ 3 ರೂಪಾಯಿಗಳು.

— ಇಂದೇ ಚಂದಾದಾರರಾಗಿರಿ —

ಸಂಚಾಲಕರು:—

ಸಾಹಿತ್ಯ ಶಾಖೆ—ವಸಂತ ಪ್ರೇಮಿ ಮಂಡಲಿ,

ಬೆಸೆಂಟ್ ರಾಷ್ಟ್ರೀಯ ಬಾಲಿಕಾ ಪಾಠಶಾಲೆ

ಮಂಗಳೂರು.

Cover Printed at Harsha Printery. P. I. C. 51 S. K. 4-47, 1,000.